# ವಿಪ್ರನುಡಿ

ಸ್ವಾವಲಂಬನೆ-ಸಂಘಟನೆ-ಸಂಸ್ಕಾರ

ಸಂಪುಟ-34, ಶ್ರೀ ಶುಭಕೃತ್‌ನಾಮ ಸಂವತ್ಸರ, ಆಶ್ವಯುಜ-ಕಾರ್ತಿಕ ಮಾಸ ಅಕ್ಟೋಬರ್-2022, ಸಂಚಿಕೆ-7, ಪುಟಗಳು-36, ಬೆಲೆ ರೂ.-15/-

## ಸಮನ್ವಯ-ಸಾಮರಸ್ಯದ ಸದ್ಭಾವನಾ ಯಾತ್ರೆ





ಗೌರೀಬಿದನೂರಿನಿಂದ ಪುಷ್ಪಾರ್ಚನೆಯೊಂದಿಗೆ ಸದ್ಭಾವನಾ ಯಾತ್ರೆ ಪ್ರಾರಂಭ



ವಿಧುರಾಶ್ವತ್ಥದಲ್ಲಿ ಹುತಾತ್ಮ ವೀರ ಯೋಧರ ಸ್ಮಾರಕಕ್ಕೆ
ಪುಷ್ಪಾರ್ಚನೆಯೊಂದಿಗೆ ಯಾತ್ರೆ ಸಂಪನ್ನ



ಯಾತ್ರೆಯ ಸಮಾರೋಪ ಸಮಾರಂಭದ ಉದ್ಘಾಟನೆ



ಒಂದು ನಿಮಿಷದ ಮೌನಾಚರಣೆ -ಹುತಾತ್ಮ ಸ್ವಾತಂತ್ರ್ಯಯೋಧರ ಸಂಸ್ಮರಣೆ

# ಸಾಮರಸ್ಯ–ಸಮನ್ವಯದ ಸದ್ಭಾವನಾ ಯಾತ್ರೆ–ಸಡಗರ ಸನ್ಮಾನ









ಸನ್ಮಾನದ ಸಡಗರ











ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)
ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ, ಗಾಯತ್ರೀ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-70
ದೂರವಾಣಿ : 26771695, 26770066
E-mail : info@akbms.com
Website : www.akbms.com

ಅಧ್ಯಕ್ಷರು
ಅಶೋಕ ಹಾರನಹಳ್ಳಿ
ಪ್ರಧಾನ ಕಾರ್ಯದರ್ಶಿ
ಶ್ರೀಧರಮೂರ್ತಿ ಎಸ್
ಖಜಾಂಚಿ
ವೆಂಕಟೇಶ ಎಸ್. ನಾಯಕ್
ಸಂಘಟನಾ ಕಾರ್ಯದರ್ಶಿ
ಡಾ। ಬಿ.ಎಸ್. ರಾಘವೇಂದ್ರ ಭಟ್

ವಿಪ್ರನುಡಿ ಪ್ರಕಟಣಾ ಸಮಿತಿ
ಪ್ರಧಾನ ಸಂಪಾದಕರು
ಡಾ। ಎಂ.ಕೆ. ಶ್ರೀಧರ್

ಗೌರವ ಸಲಹೆಗಾರರು
ಎಂ.ಕೆ. ಭಾಸ್ಕರರಾವ್
ಡಾ। ಎಂ. ಸೂರ್ಯಪ್ರಸಾದ್

ಸಮಿತಿ ಸದಸ್ಯರು
ಜ್ಯೋತಿಷಿ ವಿ॥ ಡಾ। ಮುದ್ರಾಡಿ ವಾಸುದೇವ ಭಟ್
ನಾರಾಯಣ ಭಟ್ ಹುಳೇಗಾರು
ಪ್ರಭಾಕರ ಕೆ.ಸಿ
ಕಾರ್ತಿಕ್ ಬಾಪಟ್
ಹೆಚ್.ವಿ. ಸುಬ್ಬರಾವ್

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ ಬೆಂಗಳೂರು-560 050. ದೂ. : 26606061.

# ನಲ್ನುಡಿ

**ಗೋಭಿರ್ವಿಪ್ರೈಶ್ಚ ವೇದೈಶ್ಚ ಸತೀಭಾಃ ಸತ್ಯವಾದಿಭಾಃ ।**
**ಅಲುಬ್ಧೈಃ ದಾನಶೂರೈಶ್ಚ ಸಪ್ತಭಾಃ ರ್ಧಾತೇ ಮಹೀ ॥**

'ಗೋವುಗಳಿಂದ, ವಿಪ್ರರಿಂದ, ವೇದಗಳಿಂದ, ಪತಿವ್ರತೆಯರಿಂದ ಸತ್ಯವನ್ನು ಹೇಳುವುದರಿಂದ ದುರಾಸೆ ಇಲ್ಲದವರಿಂದ ದಾನಶೂರರಿಂದ ಈ ಏಳು ರೀತಿಯಿಂದ ಭೂಮಿ ನಿಂತಿದೆ.

ಸೂಕ್ತಿ ಶತಕದ ಮೇಲ್ಕಂಡ ಶ್ಲೋಕವು ಭೂಮಿಯಲ್ಲಿ ಎಂತಹ ಜನರು ಪ್ರಾಣಿಗಳು ಇರಬೇಕೆಂದು ಸೂಚಿಸುತ್ತದೆ. ಪ್ರಾಚೀನ ಕವಿ ವಾಕ್ಯದಂತೆ ಮಲಗಿರೆ ಕಲಿಯುಗ, ಕುಳಿತರೆ ದ್ವಾಪರ, ನಿಂತರೆ ತ್ರೇತಾ ನಡೆದರೆ ಕೃತ ಎಂಬಂತೆ ಈ ಕಲಿಯುಗದಲ್ಲಿ ಎಲ್ಲೆಡೆಯೂ ಅಧರ್ಮ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಅವುಗಳನ್ನು ತಡೆಗಟ್ಟಲು ಭೂಮಿಯ ವಿನಾಶ ಆಗದಂತಿರಲು, ಏಳು ಮೌಲ್ಯಗಳನ್ನು ಪೋಷಿಸಬೇಕಾಗಿದೆ. ಮೊದಲನೆಯದಾಗಿ ನಮ್ಮ ಸನಾತನ ಧರ್ಮದಲ್ಲಿ ಗೋವಿಗೆ ಮೊದಲ ಸ್ಥಾನ ನೀಡಲಾಗಿದೆ. ಮನುಷ್ಯನ ದೈಹಿಕ ಪೋಷಣೆಗಳಿಗೆ ಗೋವು ಅತ್ಯಗತ್ಯ. ಪ್ರಾಚೀನ ನಂಬಿಕೆಯಂತೆ ಹಸುವಿನಲ್ಲಿ ಎಲ್ಲ ದೇವತೆಗಳು ನೆಲಿಸಿದ್ದಾರೆ. ಗೋಪೂಜೆ ಅದಕ್ಕೆ ನೀಡುವ ಆಹಾರದಿಂದ ವ್ಯಕ್ತಿ ಕುಟುಂಬ ಕಲ್ಯಾಣವಾಗುತ್ತದೆ. ಆದ್ದರಿಂದ ವಿಪ್ರರು ಬಹಳ ಕಾಲದಿಂದಲೂ ಗೋವನ್ನು ರಕ್ಷಿಸುತ್ತಿದ್ದಾರೆ.

ಬ್ರಹ್ಮಜ್ಞಾನಿಗಳಾದ ಬ್ರಾಹ್ಮಣರು ತಮ್ಮ ಒಳ್ಳೆಯ ನಡತೆ, ಸಂಸ್ಕಾರ, ಸಾತ್ವಿಕ ಆಹಾರ ಸೇವನೆ ಮುಂತಾದವುಗಳಿಂದ ಲೋಕ ಪೂಜ್ಯರಾಗಿದ್ದಾರೆ. ಹಸುಗಳು ಮತ್ತು ಬ್ರಾಹ್ಮಣರು ಸುಖವಾಗಿದ್ದರೆ ದೇಶಕ್ಕೆ ಶುಭವಾಗುತ್ತದೆಂಬ ನಂಬಿಕೆ ಇದೆ. (ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಮ್ ।). ಜಗತ್ತಿನ ಕಲ್ಯಾಣಕೋಸ್ಕರವೇ ಜಪ, ತಪ, ಹೋಮ, ಹವನ ಗಳನ್ನು ಮಾಡಿದ್ದಾರೆ ಎಂದೂ ಸ್ವಾರ್ಥಕ್ಕಾಗಿ ಇಂತಹ ಕಾರ್ಯಗಳನ್ನು ಕೈಗೊಂಡಿಲ್ಲ. ಆದ್ದರಿಂದ ವಿಪ್ರರು ಭೂಮಿಗೆ ಶೋಭೆ.

ನಾಲ್ಕು ವೇದಗಳು ಭಾರತೀಯ ಸನಾತನ ಸಂಸ್ಕೃತಿಯ, ವೈದಿಕ ಸಂಸ್ಕೃತಿಯ ಜ್ಞಾನ ಭಂಡಾರಗಳು, ಭಗವಂತನ ಉಸಿರೇ ವೇದಗಳು. (ಯಸ್ಯ ನಿಶ್ವಸಿತಂ ವೇದಃ ।). ಈ ಜಗತ್ತು ದೈವಕ್ಕೆ ಅಧೀನ. ಆ ದೇವತೆಗಳು ವೇದ ಮಂತ್ರಗಳಿಗೆ ಅಧೀನ (ದೈವಾಧೀನಂ ಜಗತ್ ಸರ್ವಂ ಮಂತ್ರಾಧೀನಂ ಉ ದೇವನ್ನ ।). ಇಂತಹ ಸಾರ್ವಕಾಲಿಕ ಋಷಿವಾಣಿಗಳನ್ನು ಅಭ್ಯಾಸ ಮಾಡಿ, ವಿಪ್ರರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.

ಪತಿವ್ರತೆಯರು ಸಂಸಾರಕ್ಕೆ, ಕುಲಕ್ಕೆ ಭೂಷಣ. ಅವರಿಗೆ ಶೀಲವೇ ಶ್ರೇಷ್ಠ ಭೂಷಣ (ಶೀಲಂ ಪರಂ ಭೂಷಣಪರ ।). ಹೆಣ್ಣು ದುರಾಚಾರಿಯಾದರೆ ಸಂಸಾರ, ಸಮಾಜದ ಅಧಃಪತನವಾಗುತ್ತದೆ. ಆದರಿಂದ ಧರ್ಮ ಕಾರ್ಯಗಳಿಗೆ ಪ್ರೇರಣೆ ಸತ್ಯವು ಕಹಿಯಾದರೂ ಸತ್ಯವಂತರಿಗೆ ಒಳ್ಳೆಯ ಕಾಲ ಬಂದೆ ಬರುತ್ತದೆ. ದುರಾಸೆಯು ಎಲ್ಲ ಪಾಪಗಳಿಗೂ ಕಾರಣ. ಆದ್ದರಿಂದ ಈ ಲೋಭದಿಂದಲೇ ಜನರು ದಾರಿ ತಪ್ಪುತ್ತಾರೆ. ಅಗತ್ಯಕ್ಕಿಂತ ಹೆಚ್ಚಿನ ಸಂಪತ್ತು, ವಸ್ತು ಸಂಗ್ರಹ ಲೋಭಕ್ಕೆ ದಾರಿ ಮಾಡಿಕೊಡುತ್ತದೆ. ಇದನ್ನು ತ್ಯಜಿಸಬೇಕು. ಖ್ಯಾತ ಸಂಸ್ಕೃತ ಕವಿ ಆನಂದ ವರ್ಧನನು ಹಲವು ರೀತಿಯ ವೀರರ ಬಗ್ಗೆ ಪ್ರಸ್ತಾಪಿಸಿ ದಾನವೀರರು ಸಮಾಜಕ್ಕೆ ಭೂಷಣರು ಎಂದು ತಿಳಿಸುತ್ತಾನೆ. ಪುರಾಣಗಳ ಕಥೆಗಳಲ್ಲಿ ಬರುವ ಶಿಬಿ ಚಕ್ರವರ್ತಿ, ಮಾಂಧಾತ, ಹರಿಶ್ಚಂದ್ರ, ದಧೀಚಿ ಕರ್ಣ, ಹಸಿವಿನಿಂದ ಬಳಲುತ್ತಿದ್ದ ಬೇಡನಿಗೆ ತನ್ನನ್ನೇ ಸಮರ್ಪಿಸಿದ ಗಂಡು ಪಾರಿವಾಳ ಮುಂತಾದವು ನಮಗೆ ಎಲ್ಲಾ ಕಾಲದಲ್ಲಿಯೂ ಪ್ರೇರೇಪಣೆ ನೀಡಬಲ್ಲವು. ಒಟ್ಟಿನಲ್ಲಿ ಸುಖ, ನೆಮ್ಮದಿ, ಜೀವನ ನಡೆಸಲು, ಭೂಮಿ ನಿಲ್ಲಲು ಈ ಏಳು ಸೂತ್ರಗಳು ಅವಶ್ಯಕ.

# ತತ್ತ್ವಬೋಧಃ

ಹಿಂದಿನ ಸಂಚಿಕೆಯಿಂದ

ಸ್ವಾಮಿ ಶಿವಪ್ರಕಾಶಾನಂದ ಸರಸ್ವತಿ

**ತತ್ತ್ವವಿವೇಕಃ ಕಃ? ಆತ್ಮಾ ಸತ್ಯಃ, ತದನ್ಯತ್ ಸರ್ವಂ ಮಿಥ್ಯೇತಿ ಜ್ಞಾನಮೇವ।**

**ಅನುವಾದ:** ತತ್ತ್ವವಿವೇಕವು ಏನು? ಆತ್ಮನು ಸತ್ಯ, ಅದಕ್ಕಿಂತ ಬೇರೆಯಾದದ್ದು ಎಲ್ಲವೂ ಮಿಥ್ಯೆ ಎನ್ನುವ ಜ್ಞಾನವೇ.

**ವಿವರಣೆ:** ಸತ್ಯವೆಂದರೆ ಪಾರಮಾರ್ಥಿಕವಾದ ವಸ್ತು. ವಾಸ್ತವವಲ್ಲದಿದ್ದರೂ ಕಂಡುಬರುವ ವಸ್ತುಗಳನ್ನು ವೇದಾಂತದಲ್ಲಿ ಮಿಥ್ಯೆ ಎನ್ನುವರು. ಆತ್ಮವೊಂದೇ ಸತ್ಯ. ಹಾಗಾಗಿ ಅದೊಂದೇ ತತ್ತ್ವ. ಆತ್ಮಕ್ಕಿಂತ ಬೇರೆಯಾದ ಅನಾತ್ಮವು ಮಿಥ್ಯೆ. ಆದರೆ ಅನಾತ್ಮಗಳನ್ನು ಸತ್ಯವೆಂದು ಲೌಕಿಕರು ಮಾತ್ರವಲ್ಲದೆ ಹಲವು ದಾರ್ಶನಿಕರೂ ಭಾವಿಸಿರುತ್ತಾರೆ. ಸಾಂಖ್ಯರು, ನೈಯಾಯಿಕರು ಇತ್ಯಾದಿ ದಾರ್ಶನಿಕರು ಹಲವಾರು ತತ್ತ್ವಗಳು ಇವೆ ಎನ್ನುವ ಭ್ರಮೆಯನ್ನು ಹೊಂದಿರುತ್ತಾರೆ. ಆದರೆ ವೇದಾಂತದ ವಿಚಾರದಲ್ಲಿ ತೊಡಗಿದಾಗ ಮಿಥ್ಯೆಯಾದ ಜಗತ್ತಿಗಿಂತ ಭಿನ್ನವಾದ ಬ್ರಹ್ಮ ಅಥವಾ ಆತ್ಮವೆಂಬ ಅದ್ವಿತೀಯ ತತ್ತ್ವದ ಅರಿವಾಗುತ್ತದೆ.

**ಆತ್ಮಾ ಕಃ। ಸ್ಥೂಲಸೂಕ್ಷ್ಮಕಾರಣಶರೀರಾದ್ವ್ಯತಿರಿಕ್ತಃ, ಅವಸ್ಥಾತ್ರಯ ಸಾಕ್ಷೀ, ಪಞ್ಚಕೋಶಾತೀತಃ, ಸಚ್ಚಿದಾನಂದಸ್ವರೂಪಃ ಯಃ ತಿಷ್ಠತಿ, ಸಃ ಆತ್ಮಾ।**

**ಅನುವಾದ :** ಆತ್ಮನು ಯಾರು? ಸ್ಥೂಲ ಸೂಕ್ಷ್ಮಕಾರಣ ಶರೀರಗಳಿಂದ ವ್ಯತಿರಿಕ್ತವಾಗಿ, ಅವಸ್ಥಾತ್ರಯಕ್ಕೆ ಸಾಕ್ಷಿಯಾಗಿ, ಪಞ್ಚಕೋಶಗಳನ್ನು ಮೀರಿ, ಸಚ್ಚಿದಾನಂದರೂಪವಾಗಿ ಯಾವನು ಇರುವನೋ, ಅವನೇ ಆತ್ಮನು.

**ವಿವರಣೆ:** 'ನಾನು' ಎನ್ನುವ ಅರಿವು ಎಲ್ಲರಿಗೂ ಇರುತ್ತದೆ. ಸಾಮಾನ್ಯ ವಾಗಿ ನಾನು ಎಂದು ನಾವು ದೇಹಾದಿಗಳನ್ನೇ ಗುರುತಿಸುತ್ತೇವೆ. ಆದರೆ ದೇಹಾದಿಗಳು ನಾನು ಎಂದು ಗುರುತಿಸಲು ಅರ್ಹರಲ್ಲ. ಯಾಕೆಂದರೆ ಹೇಗೆ ಮಡಕೆಯೇ ಮುಂತಾದ ಬಾಹ್ಯವಸ್ತುಗಳನ್ನು ವಿಷಯೀಕರಿಸಿ 'ಇದು' ಎಂದು ಗುರುತಿಸುವೆವೋ, ಹಾಗೆಯೇ ದೇಹ, ಇಂದ್ರಿಯ ಇತ್ಯಾದಿಗಳೂ, ನಮ್ಮ ಜ್ಞಾನದ ವಿಷಯಗಳಾದ್ದರಿಂದ ಅವು 'ಇದು' ಎಂದು ಗುರುತಿಸಲು ಯೋಗ್ಯವಾಗಿವೆಯೇ ಹೊರತು 'ನಾನು' ಎಂದು ಕರೆಯಲು ಯೋಗ್ಯವಲ್ಲ. ದೇಹಾದಿಗಳಿಗೆ ಸಾಕ್ಷಿಯಾದ ಚೈತನ್ಯವು ಮಾತ್ರ ಯಾವ ಕಾಲಕ್ಕೂ ವಿಷಯವಾಗಲಾರದು. ಹಾಗಾಗಿ ಅದು ಮಾತ್ರ 'ನಾನು' ಎಂದು ಗುರುತಿಸಲು ಅರ್ಹವದದ್ದು. ಅದುವೇ ಆತ್ಮ.

**ಸ್ಥೂಲಶರೀರಂ ಕಿಮ್। ಪಂಚೀಕೃತಪಂಚಮಹಾಭೂತೈಃ**
**ಕೃತಂ ಸತ್, ಕರ್ಮಜನ್ಯಂ, ಸುಖದುಃಖಭೋಗಾಯತನಮ್,**
**ಅಸ್ತಿ ಜಾಯತೇ ವರ್ಧತೇ ವಿಪರಿಣಮತೇ ಅಪಕ್ಷೀಯತೇ**
**ವಿನಶ್ಯತಿ ಇತಿ ಷಡ್ಭಾವವಿಕಾರೈಃ ಯುಕ್ತಂ ಯತ್, ತತ್ ಸ್ಥೂಲಶರೀರಮ್।**

**ಅನುವಾದ:** ಸ್ಥೂಲಶರೀರವು ಏನು? ಪಂಚೀಕೃತ ಪಂಚಮಹಾ ಭೂತಗಳಿಂದ ನಿರ್ಮಿಸಲ್ಪಟ್ಟಿದ್ದು, ಕರ್ಮಜನ್ಯವೂ, ಸುಖದುಃಖಗಳ ಭೋಗದ ಆಯತನವೂ ಆಗಿದ್ದು, ಇರುವುದು, ಹುಟ್ಟುವುದು, ಬೆಳೆಯುವುದು, ವಿಪರಿಣಾಮವನ್ನು ಹೊಂದುವುದು, ಕ್ಷೀಣಿಸುವುದು ಹಾಗೂ ನಶಿಸುವುದು ಎನ್ನುವ ಆರು ವಿಕಾರಗಳನ್ನು ಹೊಂದಿರುವುದು ಸ್ಥೂಲಶರೀರ.

**ವಿವರಣೆ:** ಸ್ಥೂಲಶರೀರವು ಎಂದರೆ ಕೈ ಕಾಲು ತಲೆ ಇತ್ಯಾದಿ ಅವಯವಗಳಿಂದ ಕೂಡಿದ, ನಮ್ಮ ಇಂದ್ರಿಯಗಳಿಗೆ ಗೋಚರಿಸುವ ಶರೀರವೇ. ಸೂಕ್ಷ್ಮವಾದ ಪಂಚಭೂತಗಳು ಪಂಚೀಕರಣವೆಂಬ ಪ್ರಕ್ರಿಯೆಯ ಮೂಲಕ ಸ್ಥೂಲತ್ವವನ್ನು ಪಡೆದುಕೊಳ್ಳುತ್ತವೆ. ಆಗ ಅವುಗಳನ್ನು ಪಂಚೀಕೃತ ಭೂತಗಳು ಅಥವಾ ಸ್ಥೂಲಭೂತಗಳು ಎನ್ನುವರು. ಸ್ಥೂಲಶರೀರವು ಸ್ಥೂಲಭೂತಗಳಿಂದ ನಿರ್ಮಿತವಾಗಿದೆ. ಪುಣ್ಯ ಹಾಗೂ ಪಾಪ ಎನ್ನುವ ಕರ್ಮಗಳೇ ಈ ಶರೀರದ ನಿರ್ಮಾಣಕ್ಕೆ ಕಾರಣಗಳಾಗಿವೆ. ಈ ಶರೀರವು ಸುಖ ಹಾಗೂ ದುಃಖಗಳ ಭೋಗದ ಆಯತನ ಎಂದರೆ  ಸ್ಥಾನವಾಗಿದೆ. ಈ ಶರರವು ಅಸ್ತಿ (ಹುಟ್ಟುವುದ್ಕಂತ ಮೊದಲು ಗರ್ಭಾವಸ್ಥೆಯಲ್ಲಿ ಇರುವುದು), ಜಾಯತೇ (ಹುಟ್ಟುವುದು), ವರ್ಧತೇ (ಬೆಳೆಯುವುದು), ವಿಪರಿಣಮತೇ (ಬದಲಾವಣೆಗಳನ್ನು ಹೊಂದುವುದು), ಅಪಕ್ಷೀಯತೇ (ಕ್ಷೀಣವಾಗುವುದು) ಹಾಗೂ ವಿನಶ್ಯತಿ (ನಾಶವಾಗುವುದು) ಎನ್ನುವ ಆರು ವಿಕಾರಗಳನ್ನು ಹೊಂದುತ್ತದೆ.

**ಸೂಕ್ಷ್ಮಶರೀರಂ ಕಿಮ್। ಅಪಂಚೀಕೃತಪಂಚಮಹಾಭೂತೈಃ ಕೃತಂ ಸತ್ ಕರ್ಮಜನ್ಯಸುಖಾದಿಭೋಗಸಾಧನಂ ಜ್ಞಾನೇಂದ್ರಿಯಾಣಿ ಪಂಚ, ಕರ್ಮೇಂದ್ರಿಯಾಣಿ ಪಂಚ, ಪ್ರಾಣಾದಯಃ ಪಂಚ, ಮನಃ ಚ ಏಕಂ, ಬುದ್ಧಿಃ ಏಕಾ ಏವಂ ಸಪ್ತದಶಕಲಾಭಿಃ ಸಹ ತಿಷ್ಠತಿ ಯತ್, ತತ್ ಸೂಕ್ಷ್ಮಶರೀರಮ್।**

**ಅನುವಾದ:** ಸೂಕ್ಷ್ಮಶರೀರವು ಏನು? ಅಪಂಚೀಕೃತ ಪಂಚಭೂತ ಗಳಿಂದ ನಿರ್ಮಿಸಲ್ಪಟ್ಟಿದ್ದು ಕರ್ಮಗಳಿಂದ ಉಂಟಾಗುವ ಸುಖಾದಿಗಳ ಭೋಗಕ್ಕೆ ಸಾಧನವಾಗಿರುವ, ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಐದು ಪ್ರಾಣಗಳು, ಮನಸ್ಸೊಂದು, ಬುದ್ಧಿಯೊಂದು ಎಂದು ಹದಿನೇಳು ಅವಯವಗಳೊಂದಿಗೆ ಇರುವ ಶರೀರವೇ ಸೂಕ್ಷ್ಮಶರೀರವು.

**ವಿವರಣೆ:** ಪಂಚೀಕರಣಕ್ಕೆ ಮೊದಲು ಸೂಕ್ಷ್ಮಾವಸ್ಥೆಯಲ್ಲಿರುವ ಪಂಚ ಭೂತಗಳನ್ನು ಅಪಂಚೀಕೃತ ಭೂತಗಳು ಅಥವಾ ಸೂಕ್ಷ್ಮಭೂತಗಳು ಎನ್ನುವರು. ಸೂಕ್ಷ್ಮಶರೀರವು ಈ ಸೂಕ್ಷ್ಮಭೂತಗಳಿಂದ ನಿರ್ಮಿತವಾಗಿದೆ. ಹಿಂದೆ ಮಾಡಿದಂತಹ ಪುಣ್ಯ-ಪಾಪಗಳೆಂಬ ಕರ್ಮಗಳಿಂದ ಸುಖ ಹಾಗೂ ದುಃಖದ ಭೋಗಗಳು ಉಂಟಾಗುತ್ತವೆ. ಇವುಗಳ ಭೋಗಕ್ಕೆ ಸೂಕ್ಷ್ಮಶರೀರವೇ ಸಾಧನವಾಗಿದೆ. ಐದು ಜ್ಞಾನೇಂದ್ರಿಗಳು, ಐದು ಕರ್ಮೇಂದ್ರಿಯಗಳು, ಐದು ಪ್ರಾಣಗಳು, ಮನಸ್ಸು ಹಾಗೂ ಬುದ್ಧಿ – ಇವುಗಳ ಸಮುದಾಯವೇ ಸೂಕ್ಷ್ಮಶರೀರ ಎನ್ನಲ್ಪಡುತ್ತದೆ. ಹಾಗಾಗಿ ಇದನ್ನು ಹದಿನೇಳು ಅವಯವಗಳುಳ್ಳದ್ದು ಎಂದಿದ್ದಾರೆ. 'ಕರ್ಮಜನ್ಯಂ ಸುಖಾದಿಭೋಗಸಾಧನಂ' ಎಂಬ ಪಾಠವು ಕೆಲವೆಡೆ ಇದೆ. ಅದಕ್ಕಿಂತ ಈಲ್ಲಿ ಸ್ವೀಕರಿದ ಪಾಠವೇ ಹೆಚ್ಚು ಸರಿ ಎನಿಸುತ್ತದೆ.

ಮುಂದುವರೆಯುವುದು

# ಅಧ್ಯಕ್ಷರ ನುಡಿ



**ಆತ್ಮೀಯ ಬಂಧುಗಳೇ,**

ಅಕ್ಟೋಬರ್ 2 ರ ಗಾಂಧಿ ಜಯಂತಿ ಹಾಗೂ ಲಾಲ್‌ಬಹದ್ದೂರ್ ಶಾಸ್ತ್ರಿಗಳ ಜನ್ಮ ದಿನದಂದು ಮಹಾಸಭೆಯ ನೇತೃತ್ವದಲ್ಲಿ ನಡೆದ ಪಕ್ಷಾತೀತ ಹಾಗೂ ಜಾತ್ಯಾತೀತ ಸದ್ಭಾವನಾ ಯಾತ್ರೆಯು ಅತ್ಯಂತ ಯಶಸ್ವಿಯಾಗಿ ಪರಿಣಾಮ ಕಾರಿಯಾಗಿ ಜರುಗಿರುವುದು ಮಹಾಸಭೆಯ ಇತಿಹಾಸದಲ್ಲಿ ಅತ್ಯಂತ ವೈಶಿಷ್ಟ್ಯಪೂರ್ಣ ಕಾರ್ಯಕ್ರಮ. ಸಮುದಾಯದ ಒಳಗಿನ ಭಿನ್ನಾಭಿಪ್ರಾಯಗಳು ಹಾಗೂ ಸಾಮಾಜಿಕ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮೀರಿ **'ದೇಶ ಮೊದಲು'** ಎಂಬ ಸಂದೇಶ ಸಾರುವ ಕಾರ್ಯಕ್ರಮವಾಗಿ ಹೊರಹೊಮ್ಮಿದ್ದು ಗಮನಾರ್ಹ ವಿಷಯ. ಜಾತ್ಯಾತೀತ ಮತ್ತು ಪಕ್ಷಾತೀತ ಈ ಕಾರ್ಯಕ್ರಮಕ್ಕೆ ಧಾರ್ಮಿಕ ಮಠಾಧೀಶರುಗಳ ನೇತೃತ್ವ ಹಾಗೂ ಆಶೀರ್ವಾದ ಲಭಿಸಿದ್ದು ನಮ್ಮೆಲ್ಲರ ಸೌಭಾಗ್ಯ. ಇಂತಹ ವಿಶಿಷ್ಟ ಕಾರ್ಯಕ್ರಮದ ನೇತೃತ್ವವನ್ನು ಬ್ರಾಹ್ಮಣ ಮಹಾಸಭೆಯು ವಹಿಸಿಕೊಂಡಿರುವುದೂ ಕೂಡ ಮಹತ್ವದ ಸಂಗತಿ.

ಸದ್ಭಾವನಾ ಯಾತ್ರೆಯ ಆರಂಭದಿಂದಲೂ ನಮ್ಮನ್ನು ಪ್ರೋತ್ಸಾಹಿಸಿ, ಹರಸಿ ಹತ್ತು ಕಿ.ಮೀ.ಗಳ ಪಾದಯಾತ್ರೆಯಲ್ಲಿ ನಮ್ಮೆಲ್ಲರನ್ನೂ ಮುನ್ನಡೆಸಿದ ಜಗದ್ಗುರು ಸಿರಿಗೆರೆ ತರಳಬಾಳು ಜಗದ್ಗುರುಗಳಾದ ಶ್ರೀ ಶ್ರೀ ಡಾ॥ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು, ಹುಣಸೆಹೊಳೆ ಕಣ್ವ ಮಠದ ಶ್ರೀ ಶ್ರೀ 1008 ಶ್ರೀ ವಿದ್ಯಾಕಣ್ವವಿರಾಜ ತೀರ್ಥ ಶ್ರೀಪಾದಂಗಳವರು ಹಾಗೂ ಕಿರಿಯ ಶ್ರೀಗಳು ಹಾಗೂ ತಂಬಿಹಳ್ಳಿ ಶ್ರೀ ಶ್ರೀ ಮಾಧವ ತೀರ್ಥ ಸ್ವಾಮೀಜಿಗಳಿಗೆ ಅನಂತ ಪ್ರಣಾಮಗಳು.

ಮಹಾಸಭೆಯ ಮಹತ್ವಾಕಾಂಕ್ಷೆಯ ಈ ಬೃಹತ್ ಪಾದಯಾತ್ರೆಗೆ ರಾಜಕೀಯ ನಾಯಕರುಗಳು, ಮಂತ್ರಿಗಳು, ಶಾಸಕರು ಸ್ಥಳೀಯ ಜನಪ್ರತಿನಿಧಿಗಳು ಸಾಮಾಜಿಕ ಕಾರ್ಯಕರ್ತರು, ಸಾಹಿತಿಗಳು, ವಿದ್ಯಾರ್ಥಿಗಳು, ಸಮಾಜದ ಎಲ್ಲಾ ವರ್ಗಗಳ ಜನರು ಹಾಗೂ ಮಹಾಸಭೆಯ ಎಲ್ಲ ಪದಾಧಿಕಾರಿಗಳು, ಸದಸ್ಯರು ಭಾಗವಹಿಸಿ, ಬೆಂಬಲಿಸಿ ಈ ಯಾತ್ರೆಯನ್ನು ಯಶಸ್ವಿಗೊಳಿಸಿದ್ದಕ್ಕೆ ಸರ್ವರನ್ನೂ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

**'ಸರ್ವೇಜನಾಃ ಸುಖಿನೋ ಭವಂತುಃ'** ಎಂಬುದು ಮಹಾಸಭೆಯ ಧ್ಯೇಯವಾಕ್ಯ. ಈ ಬೃಹತ್ ಸದ್ಭಾವನಾ ಯಾತ್ರೆಯು ಮಹಾಸಭೆಯ ಕಾರ್ಯಕ್ಷೇತ್ರವು ಸಮುದಾಯದ ಅಂದರೆ ಒಂದು ಪಂಗಡದ ಸಂಘಟನೆ ಹಿತಾಸಕ್ತಿಗೆ ಮಾತ್ರ ಸೀಮಿತವಾಗಿರದೆ ಸಮಾಜದ ಹಿತ ಒಟ್ಟಾರೆ ರಾಷ್ಟ್ರ ಹಿತವೂ ಸೇರಿದೆ ಎಂಬ ಸಂದೇಶವನ್ನು ಬಿಂಬಿಸುವಲ್ಲಿ ಯಶಸ್ವಿಯಾಯಿತು.

ಮುಂದಿನ ದಿನಗಳಲ್ಲಿ ಮಹಾಸಭೆಯು ಸಮ್ಮೇಳನ, ಯಾತ್ರೆ, ಸಂಘಟನೆಗಳನ್ನು ನಡೆಸುವುದರ ಜೊತೆ ಜೊತೆಗೆ ಬ್ರಾಹ್ಮಣ್ಯವನ್ನು ಉಳಿಸಿಕೊಳ್ಳುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಇಂದಿಗೂ ಸಮಾಜದಲ್ಲಿ ಜನರು ಗೌರವವಿರುವುದು ಜಾತಿಗಾಗಿ ಅಲ್ಲದೆ ಅವರ ಸದಾಚಾರ, ಸಾತ್ವಿಕ ನಡವಳಿಕೆಗಳಿಗಾಗಿ. ಮಹಾಸಭೆಯು ಸಮುದಾಯದ ಹಿತಾಸಕ್ತಿಯ ಜೊತೆಜೊತೆಯಲ್ಲಿ ಸಮಾಜ ಮತ್ತು ದೇಶದ ಒಳಿತನ್ನು ಒಳಗೊಂಡು ಮುಂದೆಸಾಗಿ ಸಮಾಜಕ್ಕೆ ಮೇಲ್ಪಂಕ್ತಿಯಾಗಿ ಹೊರಹೊಮ್ಮಬೇಕಾಗಿದೆ. ಇದಕ್ಕಾಗಿ ಮೊದಲು ನಾವು ಸಂಘಟಿತರಾಗಿ, ಬಲಿಷ್ಠರಾಗಿ, ಒಟ್ಟಾಗಿ ಸಾಗಬೇಕು. ಸಮುದಾಯದೊಳಗಿನ ವೈಯುಕ್ತಿಕ ಹಿತಾಸಕ್ತಿಗಳನ್ನು, ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಸಮಾಜದ ಹಿತವೇ ಮುಖ್ಯವೆಂಬುದನ್ನು ಎಲ್ಲರೂ ಮನಗಂಡು ಮುನ್ನೆಡೆಯಲು ಈ ಸದ್ಭಾವನಾ ಯಾತ್ರೆ ನಾಂದಿಯಾಗಲೆಂದು ಆಶಿಸುತ್ತೇನೆ.

ಈ ಯಾತ್ರೆಯ ಕಾರ್ಯಕ್ರಮಕ್ಕೆ ಮೊದಲು ರಾಜ್ಯ ಯುವ ವೇದಿಕೆಯು ಯುವ ಮುಖಂಡ ಸಂದೀಪ್‌ರವಿಯವರ ಸಂಚಾಲಕತ್ವ ದಲ್ಲಿ ರಾಜ್ಯಾದ್ಯಂತ ಪ್ರತಿನಿಧಿಸಿಲ್ಪಟ್ಟ 72 ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದ ಮೂಲಕ ತನ್ನ ಕಾರ್ಯಚಟುವಟಿಕೆಗಳಿಗೆ ಚಾಲನೆ ನೀಡಿರುವುದು ಸಂತೋಷದ ಸಂಗತಿಯಾಗಿದೆ. ಮುಂದಿನ ದಿನಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಪರಿಣಿತರಾದ ಉತ್ಸಾಹಿ ಯುವಕರ ತಂಡವು ಮಹಾಸಭೆಯ ಧ್ಯೇಯೋದ್ದೇಶಗಳನ್ನು ಈಡೇರಿಸುವಲ್ಲಿ ಮುಂಚೂಣಿಯ ಪಾತ್ರವನ್ನು ವಹಿಸಿ ಅದ್ಭುತ ಯಶಸ್ಸನ್ನು ಗಳಿಸುತ್ತದೆ ಎಂಬ ಭರವಸೆಯೊಂದಿಗೆ ಈ ಯುವ ತಂಡಕ್ಕೆ ಶುಭ ಕೋರುತ್ತೇನೆ.

ರಾಜ್ಯ ಮಹಿಳಾ ವೇದಿಕೆಯ ಸಂಚಾಲಕಿ ಡಾ. ಶುಭಮಂಗಳ ಸುನೀಲ್‌ರವರ ನೇತೃತ್ವದಲ್ಲಿ ಚಿಕ್ಕಮಗಳೂರಿನ ಜಿಲ್ಲಾ ಘಟಕದ ಆರಂಭೋತ್ಸವವು ಇತ್ತೀಚೆಗೆ ಅದ್ದೂರಿಯಾಗಿ ನಡೆದುದು ಮಹಿಳಾ ಘಟಕದ ಸಂಘಟನೆ ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಜಿಲ್ಲೆಗಳಿಗೆ ವಿಸ್ತರಿಸಿ ರಚನಾತ್ಮಕ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತದೆಂದು ಆಶಿಸುತ್ತೇನೆ.

ಮುಂದಿನ ನವೆಂಬರ್ ತಿಂಗಳಿನಲ್ಲಿ ಮಹಾಸಭೆಯ ವತಿಯಿಂದ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಬೃಹತ್ "ಪ್ರತಿಭಾ ಪುರಸ್ಕಾರ" ಸಮಾರಂಭವು ನಡೆಯಲಿರುವುದು ಹೆಮ್ಮೆಯ ವಿಷಯ.

ಮುಂಬರುವ ದೀಪಾವಳಿಯು ಎಲ್ಲರಿಗೂ ಸುಖ, ಸಂತೋಷ, ನೆಮ್ಮದಿಯನ್ನು ತಂದು ಜ್ಞಾನದ ಬೆಳಕನ್ನು ದಯಪಾಲಿಸಿ ಅಜ್ಞಾನ ವನ್ನು ನೀಗಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತ ನಿಮ್ಮೆಲ್ಲರಿಗೆ ದೀಪಾವಳಿಯ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇನೆ.

**ಅಶೋಕ ಹಾರನಹಳ್ಳಿ**
**ಮಹಾಸಭಾಧ್ಯಕ್ಷರು.**

# ಸಂಪಾದಕೀಯ

ಆತ್ಮೀಯ ವಿಪ್ರಬಂಧುಗಳೇ,

ನಮಸ್ಕಾರ. ದೇಶಾದ್ಯಂತ 75ನೇ ಸ್ವಾತಂತ್ರ್ಯೋತ್ಸವವನ್ನು ಬಹಳ ಅದ್ಧೂರಿಯಾಗಿ ಆಚರಿಸಿ ಸಂಭ್ರಮಿಸುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಸ್ವಾತಂತ್ರಕ್ಕೋಸ್ಕರ ದುಡಿದ ಅಸಂಖ್ಯಾತ ಬ್ರಾಹ್ಮಣರು ತಮ್ಮ ತನು-ಮನ-ಧನಗಳನ್ನು ಸಮರ್ಪಿಸಿದ್ದು ಇತಿಹಾಸ ಪುಟಗಳಲ್ಲಿ ಸೇರಿಹೋಗಿದ್ದು, ಎಲ್ಲರೂ ಮತ್ತೊಮ್ಮೆ ನೆನಪಿಸಿಕೊಳ್ಳುತ್ತಿದ್ದಾರೆ. ಸ್ವಾತಂತ್ರ್ಯ ಹೋರಾಟದ ಪ್ರಪ್ರಥಮ ಕಿಡಿಯನ್ನು ಹತ್ತಿಸಿ, ಹುತಾತ್ಮನಾದ ಬ್ರಾಹ್ಮಣ ಸೇನಾನಿ ಮಂಗಳಪಾಂಡೆಯ ಬಗ್ಗೆ ಈ ಸಂಚಿಕೆಯಲ್ಲಿ ಆಕರ್ಷಕ ಲೇಖವಿದೆ. ಸನ್ಮಾನ್ಯ ಅಧ್ಯಕ್ಷರ ನೇತೃತ್ವದಲ್ಲಿ ಗೌರಿಬಿದನೂರು ತಾಲ್ಲೂಕಿನ ವಿದುರಾಶ್ವತ್ಥದಲ್ಲಿ, ಮಹಾತ್ಮಾ ಗಾಂಧೀಜಿ ಹಾಗೂ ಲಾಲ್ ಬಹುದ್ದೂರ್ ಶಾಸ್ತ್ರಿಯವರ ಜಯಂತಿ ಅಂಗವಾಗಿ 'ಸದ್ಭಾವನಾ ಯಾತ್ರೆ' ಯನ್ನು ಆಯೋಜಿಸಲಾಗಿತ್ತು. ಗೌರಿಬಿದನೂರಿನಿಂದ ವಿದುರಾಶ್ವತ್ಥದವರೆಗೆ ನಡೆದ ಈ ಐತಿಹಾಸಿಕ ಯಾತ್ರೆಯಲ್ಲಿ, ಮಹಾಸಭಾದ ಪದಾಧಿಕಾರಿಗಳು, ವಿಪ್ರ ರಾಜಕೀಯ ಗಣ್ಯರು, ಮುಖಂಡರು, ಸಹಸ್ರಾರು ಸಂಖ್ಯೆಯ ಬ್ರಾಹ್ಮಣರು ಭಾಗವಹಿಸಿದ್ದರ ಬಗ್ಗೆ ಅಗ್ರಲೇಖನವಿದೆ. ಎಲ್ಲ ಗಣ್ಯರು ಈ ಸಮಾವೇಶದ ಸಮಯದಲ್ಲಿ, ಬ್ರಾಹ್ಮಣರ ಸೇವೆ-ತ್ಯಾಗಗಳನ್ನು, ರಾಷ್ಟ್ರ ನಿರ್ಮಾಣದಲ್ಲಿ, ವಿಪ್ರರ ಪಾತ್ರವನ್ನು ಪ್ರಸ್ತಾಪಿಸಿರುವುದು ವಿಶಿಷ್ಟಪೂರ್ಣವಾದುದು. ಸೆಪ್ಟಂಬರ್-ಅಕ್ಟೋಬರ್ ಮಾಸಗಳು ಜೊತೆಗೂಡಿ ಬಂದಿರುವ ನವರಾತ್ರಿ, ದೀಪಾವಳಿ ಬಗ್ಗೆ, ಇಡೀ ದೇಶದಲ್ಲಿ ಈ ಉತ್ಸವಗಳ ಸಂಭ್ರಮಾಚರಣೆಯ ಬಗ್ಗೆ, ಉತ್ತರ ಕರ್ನಾಟಕದ ದೇಸೀ ಹಬ್ಬ ಪದ್ಧತಿಯ ಬಗ್ಗೆ ವಿದ್ವಾಂಸರಿಬ್ಬರಿಂದ ಚೇತೋಹಾರಿ, ವಿಚಾರಪ್ರದ ಲೇಖನಗಳನ್ನು ಈ ಸಂಚಿಕೆ ಒಳಗೊಂಡಿದೆ.

ಎಂದಿನಂತೆ ಸನ್ಮಾನ್ಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರು ಪದಾಧಿಕಾರಿಗಳೊಂದಿಗೆ ರಾಜ್ಯದ ನಿರಂತರ ಪ್ರವಾಸದಲ್ಲಿದ್ದಾರೆ. ವಿಪ್ರ ಸಂಘಟನೆ, ಅದರ ಮೂಲಕ ರಾಜ್ಯ ಸಂಘಟನೆ, ಸಹಕಾರಗಳ ಬಗ್ಗೆ ಪ್ರಸ್ತಾಪಿಸುತ್ತಿದ್ದಾರೆ. ಹಿಂದೆಂದೂ ಕೇಳಿ ನೋಡದ್ದಂತಹ ಅಭೂತಪೂರ್ವ ಸ್ವಾಗತ ಉತ್ತರ ಕರ್ನಾಟಕ ಪ್ರಾಂತ್ಯದಲ್ಲಿ, ಅವರಿಗೆ ದೊರಕಿದ್ದು, ಅಲ್ಲಿಯ ಸಂಘಟನೆಗಳು ಅವರಿಗೆ ಪ್ರಶಸ್ತಿಗಳನ್ನು ನೀಡಿ, ಗೌರವಿಸಿ, ತಮ್ಮನ್ನು ಗೌರವಿಸಿಕೊಂಡಿವೆ. ಇದರೊಂದಿಗೆ ಮಾಸಿಕ ನಿರಂತರ ಲೇಖನಗಳಾದ ನಲ್ನುಡಿ, ಪ್ರವಾಸ ವರದಿಗಳು, ತತ್ತ್ವಶಾಸ್ತ್ರ ಸಂಬಂಧೀ ಲೇಖನಗಳು, ಧಾರ್ಮಿಕ ಗುರುಗಳ ಸಂದೇಶಗಳನ್ನು ಒಳಗೊಂಡಿದೆ.

ಸಮುದಾಯದ ಅತ್ಯಂತ ಹಿರಿಯ ಧಾರ್ಮಿಕ ಚಿಂತಕರು, ಶತಾಯುಷಿ ಎ.ಎನ್. ಗಂಗಾಧರ ಶಾಸ್ತ್ರಿಗಳು ವಿಧಿವಶರಾಗಿದ್ದಾರೆ. ಅಚ್ಚಕನ್ನಡಿಗ, ಶ್ರೇಷ್ಠ ರಸಾಯನ ಶಾಸ್ತ್ರಜ್ಞ ಡಾ. ಹೆಚ್. ರಾಮಸ್ವಾಮಿಯವರು 1963ರಲ್ಲೇ ಉನ್ನತ ವ್ಯಾಸಂಗಕ್ಕೆ ಅಮೆರಿಕಾಗೆ ತೆರಳಿ, ನೆಲಸಿ ಹಲವಾರು ಸಂಸ್ಥೆಗಳನ್ನು ಸ್ಥಾಪಿಸಿದ್ದರು. ಕರ್ನಾಟಕದಿಂದ ಹೋದ ಕನ್ನಡಿಗರಿಗೆ ಪೋಷಕರಾಗಿದ್ದರು. 50 ವರ್ಷಗಳ ಹಿಂದೆ ಜಾರ್ಜಿಯ ರಾಜ್ಯದ ಅಟ್ಲಾಂಟದಲ್ಲಿ, ನೃಪತುಂಗ ಕನ್ನಡ ಕೂಟವನ್ನು ಸ್ಥಾಪಿಸಿ ಕನ್ನಡದ ಕಂಪು-ಇಂಪನ್ನು ಪಸರಿಸಿದರು. ನಂತರ ಅಕ್ಕ ಎಂಬ ಅಮೆರಿಕಾ ಕನ್ನಡ ಕೂಟ ಸ್ಥಾಪನೆಗೆ ಚಾಲನೆ ನೀಡಿ, ಅದು ವಿಶ್ವವಿಖ್ಯಾತವಾಯಿತು. ಅಂತಹ ಭಾರತ-ಅಮೆರಿಕಾ ಮಿತ್ರ ವಿಧಿವಶರಾಗಿದ್ದಾರೆ. ಅವರಿಬ್ಬರು ಮಹನೀಯರಿಗೆ ಮಹಾಸಭಾದ ಪರವಾಗಿ ಶ್ರದ್ಧಾಂಜಲಿ ಸಮರ್ಪಿಸುತ್ತಿದ್ದೇವೆ.

ಈ ವರ್ಷದ ದೀಪಾವಳಿ ಉತ್ಸವ ಆಚರಣೆಯು ನಮ್ಮೆಲ್ಲರಿಗೂ ಸುಖ-ಸಂತೋಷ, ತೃಪ್ತಿ, ನೆಮ್ಮದಿ ತರಲಿ, ಅಜ್ಞಾನವನ್ನು ದೂರ ಮಾಡಿ, ನಮ್ಮೊಳಗಿರುವ ಬೆಳಕು, ಸದ್ವಸ್ತುವನ್ನು ತೋರು ವಂತಾಗಲೀ ಎಂದು ಆಶೀಸೋಣ.

**"ಅಸತೋಮಾ ಸದ್ಗಮಯ । ತಮಸೋಮಾ ಜ್ಯೋತಿರ್ಗಮಯ ।**

**ಮೃತ್ಯೋರ್ಮಾ ಅಮೃತಂಗಮಯ।ಓಂ ಶಾಂತಿಃ ಶಾಂತಿಃ ಶಾಂತಿಃ ॥**

**ವಂದನೆಗಳೊಂದಿಗೆ,**

**ತಮ್ಮ ವಿಶ್ವಾಸಿ,**
**ಪ್ರೊ. ಎಂ.ಕೆ. ಶ್ರೀಧರ್**
**ಪ್ರಧಾನ ಸಂಪಾದಕ.**


## ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

# ಸಮನ್ವಯ-ಸಾಮರಸ್ಯದ ಸದ್ಭಾವನಾ ಯಾತ್ರೆ

**ವರದಿ-ಕಾರ್ತಿಕ್ ಬಾಬಟ್**




ಕಳೆದ ಒಂದು ಶತಮಾನದ ಇತಿಹಾಸದ ಪುಟಗಳನ್ನು ತೆರದಾಗ ಭಾರತದಲ್ಲಿ ಹತ್ತು ಹಲವು ಯಾತ್ರೆಗಳು ಆಗಿ ಹೋಗಿರುವುದನ್ನು ನಾವುಗಳು ಕಂಡಿದ್ದೇವೆ. ಅವುಗಳಲ್ಲಿ ಧಾರ್ಮಿಕ, ಸಾಮಾಜಿಕ ಹಾಗೂ ಕೆಲವು ರಾಜಕೀಯ ಉದ್ದೇಶದಿಂದ ಕೂಡಿದ ಯಾತ್ರೆಗಳು ಎಂಬುವುದರಲ್ಲಿ ಎರಡು ಮಾತಿಲ್ಲ.

ಆದರೆ ಇತ್ತೀಚಿನ ದಿನಗಳಲ್ಲಿ ಪಾದಯಾತ್ರೆಯೆಂದರೆ ರಾಜಕೀಯ ಉದ್ದೇಶದಿಂದಲೇ ಕೂಡಿದ್ದು ಎಂಬುವಷ್ಟರ ಮಟ್ಟಿಗೆ ಪ್ರಚಲಿತವಾಗಿದೆ. ಆದರೆ ಸ್ವಾತಂತ್ರ ಪೂರ್ವದಲ್ಲಿ ಹಲವು ಯಾತ್ರೆಗಳ ಮೂಲ ಪರಿಕಲ್ಪನೆಯೇ ಸಾಮಾಜಿಕ-ರಾಷ್ಟ್ರೀಯ ಉದ್ದೇಶ ಹೊಂದಿರುತ್ತಿತ್ತು ಎಂಬುದು ಗಮನಾರ್ಹ ಸಂಗತಿ. ಅವುಗಳಲ್ಲಿ ಪ್ರಮುಖವಾದದ್ದು ಉಪ್ಪಿನ ತಯಾರಿಕೆಯ ಮೇಲಿನ ನಿರ್ಬಂಧಗಳ ವಿರುದ್ಧ ಮಹಾತ್ಮ ಗಾಂಧೀಜಿ ಅವರ ನೇತೃತ್ವದಲ್ಲಿ ನಡೆದ ದಂಡಿ ಮಾರ್ಚ್ ಅಥವಾ ಉಪ್ಪಿನ ಸತ್ಯಾಗ್ರಹ ಅತ್ಯಂತ ಪ್ರಮುಖವಾದದ್ದು ಮೊದಲಿಗೆ ಕೆಲವೇ ಕೆಲವು ಸ್ವಯಂಸೇವಕರೊಂದಿಗೆ ಮಾರ್ಚ್ 12, 1930ರಂದು ಸಾಬರಮತಿ ಆಶ್ರಮದಿಂದ ಪ್ರಾರಂಭವಾದ ಪಾದಯಾತ್ರೆ ದಿನಕಳೆದಂತೆ ಸಾವಿರಾರು ಮಂದಿ ಆ ಪಾದಪಾತ್ರೆಯಲ್ಲಿ ಭಾಗಿಯಾಗತೊಡಗಿದ್ದರು. ಈ ಯಾತ್ರೆ ಏಪ್ರಿಲ್ 6, 1930ರಂದು ದಾಂಡಿ ಎಂಬಲ್ಲಿ ಉಪ್ಪು ತಯಾರಿಸುವ ಪ್ರಕ್ರಿಯೆಗೆ ಚಾಲನೆ ನೀಡುವ ಮೂಲಕ ಸಂಪನ್ನವಾಯಿತು ಹಾಗೂ ಬ್ರಿಟಿಷರ ವಿರುದ್ಧದ ಅಸಹಾಕಾರ ಚಳುವಳಿಗೆ ನಾಂದಿ ಹಾಡಿತು. ಹೀಗೆ ಪ್ರತಿ ಯಾತ್ರೆಯಲ್ಲಿ ಹಾಗೂ ಪ್ರತಿ ಚಳುವಳಿಯಲ್ಲಿ ಒಂದು ಸಾಮಾಜಿಕ ಕಳಕಳಿ ಇರುತ್ತಿತ್ತು. ಹಾಗೆ ನೋಡಿದರೆ ಗಾಂಧೀಜಿಯವರ ಬದುಕೇ ಒಂದು ಯಾತ್ರೆ ಎಂಬತ್ತಾಗಿತ್ತು ಎಂದರೆ ತಪ್ಪಲ್ಲ. ಅಂತಹ ಮಹಾನ್ ನಾಯಕನ ಜನ್ಮದಿನದಂದು “ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ “ ನಮ್ಮ ನಡಿಗೆ ವಿದುರಾಶ್ವತ್ಥದ ಕಡೆಗೆ, ನಮ್ಮ ನಡಿಗೆ ಭಾವೈಕ್ಯದೆಡೆಗೆ” ಎಂಬ ಘೋಷವಾಕ್ಯದಲ್ಲಿ ಸ್ವಾತಂತ್ರ್ಯ ಸೇನಾನಿಗಳನ್ನು ಸ್ಮರಿಸುವ ಹಾಗೂ ರಾಷ್ಟ್ರಪ್ರೇಮವನ್ನು ಬಿತ್ತಿ ಸದ್ಭಾವನಾ ಯಾತ್ರೆಯನ್ನು ಹಮ್ಮಿಕೊಂಡಿತ್ತು.



**ಪೂರ್ವಭಾವಿ ಸಭೆ**

ಸರಿಸುಮಾರು ಹತ್ತು ಕಿಲೋಮೀಟರ್ ಗೌರಿಬಿದನೂರಿನಿಂದ ವಿದುರಾಶ್ವತ್ಥದವರೆಗೆ ಹಮ್ಮಿಕೊಂಡಿದ್ದ ಯಾತ್ರೆ ಅತ್ಯಂತ ಯಶಸ್ವಿಯಾಗಿ ಸಂಪನ್ನವಾಯಿತು. ಯಾತ್ರೆಯುದ್ದಕ್ಕೂ ನಡೆದ ಸಿದ್ಧತೆಗಳನ್ನು ಗಮನಿಸಿದರೆ ಈ ಯಾತ್ರೆಯನ್ನು ಯಶಸ್ವಿಗೊಳಿಸಲು ಪಟ್ಟ ಪರಿಶ್ರಮ ಎದ್ದು ಕಾಣುತ್ತಿತ್ತು.



**ಸಿದ್ಧತಾ ಸಭೆ**

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ನಡೆದ ಈ ಸದ್ಭಾವನ ಯಾತ್ರೆ ಮಹಾಸಭಾದ ಇತಿಹಾಸದ ಪುಟಗಳಲ್ಲಿ ಎಂದೆಂದಿಗೂ ಸ್ಥಾಯಿಯಾಗಿ ಉಳಿಯುವಂತೆ ನಡೆಯಿತು ಎನ್ನಬಹುದು.

ಮಹಾಸಭಾ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಎಲ್ಲರೂ ಸೇರಿ ಅಮೃತ ಮಹೋತ್ಸವದ ಅಂಗವಾಗಿ ವಿದುರಾಶ್ವತ್ಥದಂತಹ ಸ್ಥಳದಲ್ಲಿ ನಡೆದ ದುರಂತ ಘಟನೆಯನ್ನು ನೆನೆದು ಚರ್ಚೆ ನಡೆಸುತ್ತಿದ್ದಾಗ ಈ ಘಟನೆಯ ಬಗ್ಗೆ ಮಹಾಸಭಾದ ಪದಾಧಿಕಾರಿಗಳು ಹಾಗೂ ಸದಸ್ಯರಲ್ಲೇ ಹಲವರಿಗೆ ವಿದುರಾಶ್ವತ್ಥದ ಗೋಲಿಬಾರ್ ಘಟನೆಯ ಬಗ್ಗೆ ತಿಳಿಯದದ್ದು ಮನವರಿಕೆಯಾಯಿತು. ಈ ವಿಷಯವನ್ನು ಮನಗೊಂಡು ಅಧ್ಯಕ್ಷರು ಹಾಗೂ ಗೌರಿಬಿದನೂರಿನ ಸ್ಥಳೀಯರೇ ಆದ ರಾಜೇಂದ್ರಪ್ರಸಾದ್ ಅವರು ಒಂದು ಐತಿಹಾಸಕವಾದ ಪಾದಯಾತ್ರೆಯ ಮೂಲಕ ಈ ವಿಷಯ ಕರ್ನಾಟಕದ ಮನೆಮಾತಾಗುವಂತೆ ಮಾಡಿ ಅಂದು ಅಸು ನೀಗಿದ್ದ, ವೀರಯೋಧರನ್ನು ಸ್ಮರಿಸುವ ಕೆಲಸವಾಗಬೇಕೆಂದುಕೊಂಡಾಗ



ತತ್‌ಕ್ಷಣಕ್ಕೆ ಮರುಮಾತಿಲ್ಲದೆ ಮಹಾಸಭೆಯ ಸಮಸ್ತ ಪದಾಧಿಕಾರಿಗಳು, ಸದಸ್ಯರು ಒಕ್ಕೊರಲಿನಿಂದ ಪಾದಯಾತ್ರೆಯ ಬಗ್ಗೆ ನಿರ್ಧರಿಸಿ ಅಂದೇ "ನಮ್ಮ ನಡೆ ವಿದುರಾಶ್ವತ್ಥದ ಕಡೆಗೆ ನಮ್ಮ ನಡೆ ಭಾವೈಕ್ಯದೆಡೆ" ಎಂಬ ಘೋಷ ವಾಕ್ಯದ ಮೂಲಕ ಪಾದಯಾತ್ರೆಯ ಸಿದ್ಧತೆಗೆ ಚಾಲನೆ ನೀಡಿದರು. ಸ್ವತಂತ್ರ ಸಂಗ್ರಾಮದಲ್ಲಿ ಬ್ರಾಹ್ಮಣರಷ್ಟೇ ಅಲ್ಲ, ಎಲ್ಲ ವರ್ಗದ ಜನರೂ ಪಾಲ್ಗೊಳ್ಳುವಿಕೆಯನ್ನು ನೆನೆದು ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಈ ಕಾರ್ಯಕ್ರಮದಲ್ಲಿ ಭಾಗಿಯಾಗಬೇಕೆಂಬ ಉದ್ದೇಶದಿಂದ ಈ ಸದ್ಭಾವನಾ ಯಾತ್ರೆಯನ್ನು ಜಾತ್ಯಾತೀತ ಹಾಗೂ ಪಕ್ಷಾತೀತ ಕಾರ್ಯಕ್ರಮವಾಗುವಂತೆ ರೂಪುರೇಷೆಗಳನ್ನು ಸಿದ್ಧಪಡಿಸಲಾಯಿತು.

ಕೇವಲ ಒಂದು ತಿಂಗಳ ಅಂತರದಲ್ಲಿ ಹತ್ತು ಹಲವು ಸಮಿತಿಗಳನ್ನು ರಚಿಸಿ ಪ್ರತಿಯೊಂದು ತಂಡಕ್ಕೆ ತನ್ನದೇ ಆದ ಜವಾಬ್ದಾರಿಯನ್ನು ಕೊಟ್ಟು ಇದೊಂದು ಅದ್ಭುತವಾದ ಕಾರ್ಯಕ್ರಮವಾಗುವಂತೆ ಅಧ್ಯಕ್ಷರು ಕಾರ್ಯೋನ್ಮುಖರಾಗಿದ್ದರು. ಸಮಯದ ಅಭಾವವನ್ನು ಅರಿತ ಅಧ್ಯಕ್ಷರು ಡಿಜಿಟಲ್ ಮಾಧ್ಯಮದ ಮೂಲಕ ಸಭೆಗಳನ್ನು ನಡೆಸಿ ಇರುವ ಸ್ಥಳದಿಂದಲೇ ಎಲ್ಲರೂ ಪಾದಯಾತ್ರೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿದ್ದು ಇನ್ನೊಂದು ವಿಶೇಷವಾಗಿತ್ತು.

**ವಿಶೇಷವಾಗಿ ಈ ಕಾರ್ಯಕ್ರಮದ ಉಸ್ತುವಾರಿಯನ್ನು ಅಧ್ಯಕ್ಷರೇ ವಹಿಸಿಕೊಂಡು ದಿನಂಪ್ರತಿ ಆಗುಹೋಗುಗಳ ಬಗ್ಗೆ ಪರಿಶೀಲಿಸುತ್ತಿದ್ದರು. ಪ್ರಧಾನವಾಗಿ ಈ ಪಾದಯಾತ್ರೆಯ ಜವಾಬ್ದಾರಿಯನ್ನು ಉಪಾಧ್ಯಕ್ಷರಾದ ಡಿ.ವಿ. ರಾಜೇಂದ್ರಪ್ರಸಾದ್, ಕೆ.ಸಿ. ರಾಮಮೂರ್ತಿ ಹಾಗೂ**



**ಗೌರಿಬಿದನೂರಿನವರೇ ಆದ ನಾಗಣ್ಣನವರಿಗೆ ವಹಿಸಲಾಗಿತ್ತು. ಅದೇ ರೀತಿ ಪ್ರಚಾರ ಕಾರ್ಯಕ್ರಮ, ಹಳ್ಳಿಹಳ್ಳಿಗಳಿಗೆ ಭೇಟಿ ನೀಡಿ ಸ್ಥಳೀಯರನ್ನು ಸಂಪರ್ಕಿಸಿ ಸಂಘಟಿಸುವುದರಲ್ಲಿ ಹಗಲು ಇರಳು ಎನ್ನದೆ ಕಾರ್ಯೋನ್ಮುಖರಾಗಿ ಕಾರ್ಯನಿರ್ವಹಿಸಿದ ಉತ್ತರ ವಲಯದ ಸಂಚಾಲಕರಾದ ಜಯಸಿಂಹ, ಪಿ.ಆರ್. ಪ್ರಕಾಶ್, ಸಹ ಕಾರ್ಯದರ್ಶಿಗಳಾದ ಮುರಳೀಧರ್, ಎನ್.ವಿ. ರಾವ್, ಪತ್ರಿಕೆಗಳ ಮೂಲಕ ಸಾಕಷ್ಟು ಪ್ರಚಾರವನ್ನು ಮಾಡಿದ ಯಗಟಿ ಮೋಹನ್, ಡಿಜಿಟಲ್ ಮಾಧ್ಯಮದ ಮೂಲಕ, ಅಚ್ಚುಕಟ್ಟಾಗಿ ಶ್ರಮವಹಿಸಿ ಕಾರ್ಯನಿರ್ವಹಿಸಿದ ನಿಖಿಲ್ ಭಾರಧ್ವಾಜ್ ಇವರ ಕಾರ್ಯವೈಖರಿಯನ್ನು ಮರೆಯುವಂತಿಲ್ಲ.**



**ಅಷ್ಟೇ ಅಲ್ಲ ಪಾದಯಾತ್ರೆ ನಡೆಸಬೇಕೆಂದು ನಿರ್ಧರಿಸಿದ ದಿನದಿಂದ ಮಹಾಸಭಾ ಪ್ರಧಾನ ಕಾರ್ಯದರ್ಶಿಗಳಾದ ಎಸ್. ಶ್ರೀಧರಮೂರ್ತಿ ಹಾಗೂ ಖಜಾಂಚಿಗಳಾದ ವೆಂಕಟೇಶ್ ಎಸ್. ನಾಯಕ್ ಮೊದಲ್ಗೊಂಡು ಹಲವು ಪದಾಧಿಕಾರಿಗಳು ಪಾದಯಾತ್ರೆಗೆ ಬೇಕಾಗುವ ಸಂಪನ್ಮೂಲವನ್ನು ಕ್ರೋಢೀಕರಿಸುವ ಮಹತ್ತರವಾದ ಜವಾಬ್ದಾರಿಯನ್ನು ಮಹತ್ವದ ಪಾತ್ರವನ್ನು ವಹಿಸಿದ್ದು ಪ್ರಶಂಸನೀಯ ವಿಷಯವೇ ಸರಿ.**

ಇದಲ್ಲದೆ ಬೆಂಗಳೂರು ಮತ್ತು ಬೆಂಗಳೂರಿನ ಆಸುಪಾಸಿನಲ್ಲಿ ಗಣ್ಯವ್ಯಕ್ತಿಗಳನ್ನು ಸಂಪರ್ಕಿಸಿ ಅವರೆಲ್ಲರನ್ನೂ ಕಾರ್ಯಕ್ರಮಕ್ಕೆ ಆಹ್ವಾನಿಸುವುದು ಹೀಗೆ ಇಂತಹುದೇ ಎಂದಿಲ್ಲದೆ ಯಾವುದೇ ರೀತಿಯ



ಶ್ರೀ ರಘುನಾಥ್‌ರವರಿಗೆ ಯಾತ್ರೆಗೆ ಆಹ್ವಾನ

ಸಣ್ಣಪುಟ್ಟ ಕೆಲಸಕ್ಕೂ ಮರುಮಾತಿಲ್ಲದೆ ಒಪ್ಪಿಕೊಂಡು, ಯಶಸ್ವಿಯಾಗಿ ತಮ್ಮ ತಮ್ಮ ಕಾರ್ಯವನ್ನು ನಿರ್ವಹಿಸಿದವರು ಟಿ.ಎಲ್.ಎಸ್. ಕುಮಾರ್, ಉಮೇಶ್ ಶಾಸ್ತ್ರಿ, ರೂಪಾ ಶಾಸ್ತ್ರಿ, ಸತೀಶ್, ಈವೆಂಟ್ ಮ್ಯಾನೇಜ್‌ಮೆಂಟಿನ ರಾಮಕೃಷ್ಣ, ಸಾರಿಗೆ ವ್ಯವಸ್ಥೆಯನ್ನು ನಿರ್ವಹಿಸಿದ ಆರ್. ರವಿಕುಮಾರ್ (ಸಿಸಿಟಿವಿ), ಹೆಚ್.ಸಿ. ಪುರುಷೋತ್ತಮ, ಡಿ.ಎನ್. ಸುರೇಶ್, ಶುಭಮಂಗಳ ಸುನೀಲ್, ವಿಲಾಸ್ ಜೋಷಿ, ಸುಧಾಕರಬಾಬು, ನಾಗಲಕ್ಷ್ಮಿ ಕೆ. ರಾವ್ ಹೀಗೆ ಎಲ್ಲರ ಪಾತ್ರವು ಗಮನಾರ್ಹ.

ಈ ಪಾದಯಾತ್ರೆ ಪ್ರಾರಂಭದಲ್ಲಿ 500 ಜನರು ಸೇರಿದರೆ ಅದೇ ದೊಡ್ಡ ಸಾಧನೆ ಎಂಬಂತೆ ಪ್ರಾರಂಭವಾಗಿತ್ತು. ಆದರೆ ಪಾದಯಾತ್ರೆಯ ಉದ್ದೇಶ ಪ್ರಚಾರದ ಭರಾಟೆ ದಿನದಿಂದ ದಿನಕ್ಕೆ ಹೆಚ್ಚಿದಂತೆ ಮೂರು ಸಾವಿರ ಜನ ಸೇರುವುದರಲ್ಲಿ ಅನುಮಾನವಿಲ್ಲ ಎಂಬುವಂತಾಯಿತು. ಹಾಗೂ ಅಂದುಕೊಂಡಂತೆ ಪಾದಯಾತ್ರೆಯಲ್ಲಿ ಸರಿಸುಮಾರು ಮೂರು ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿ ಈ ಪಾದಯಾತ್ರೆ ಮಹಾಸಭಾದ ಇತಿಹಾಸದಲ್ಲಿ ಅಚ್ಚಳಿಯದೆ ಉಳಿದಿದ್ದು ಯಶಸ್ವಿ ಕಾರ್ಯಕ್ರಮವಾಗಿ ಹೊರಹೊಮ್ಮಿತು.



ಈ ಪಾದಯಾತ್ರೆಯಲ್ಲಿ ಜನಪದ ಕಲಾತಂಡಗಳು ಭಾಗಿಯಾಗಿದ್ದು ಪಾದಯಾತ್ರೆಗೊಂದು ಕಲಾತ್ಮಕ ಮೆರಗು ತಂದುಕೊಟ್ಟಿತ್ತು ಹಾಗೂ ಈ ಜಾನಪದ ಕಲಾ ತಂಡವು ಪಾದಯಾತ್ರೆಯಲ್ಲಿ ಭಾಗವಹಿಸುವಂತೆ ಮಾಡುವುದರಲ್ಲಿ ನಮ್ಮ ಕಾರ್ಯಕಾರಿ ಸಮಿತಿ ಸದಸ್ಯರಾದ ಎನ್.ಎಸ್. ನರಸಿಂಹಮೂರ್ತಿ ಅವರ ಪಾತ್ರ ನಿಜವಾಗಿಯೂ ಶ್ಲಾಘನೀಯವಾದದ್ದು.






ಅಂದುಕೊಂಡಂತೆ ರಾಜ್ಯದ ಹಲವು ಜಿಲ್ಲೆಗಳಿಂದ ಬೆಳಿಗ್ಗೆ ಎಂಟು ಗಂಟೆಗೆ ಸರಿಯಾಗಿ ಗೌರಿಬಿದನೂರಿನ ವಾಸವಿ ಮಂಡಳಿಯವರ ಶನಿಮಹಾತ್ಮನ ದೇವಳದಲ್ಲಿ ಜನ ಸೇರಲು ಪ್ರಾರಂಭಿಸಿದ್ದರು. ಇವರೆಲ್ಲರಿಗೂ ವಾಸವಿ ಮಂಡಳಿಯ ಅಧ್ಯಕ್ಷರಾದ ಬಿ.ಆರ್.ಎಸ್. ಮೂರ್ತಿಯವರು ಬೆಳಗಿನ ಊಟೋಪಚಾರದ ವ್ಯವಸ್ಥೆ ಮಾಡಿಸಿದ್ದರು. ಅಂದು ಬೆಳಗಿನ ಜಾವ ಅಲ್ಲಿಗೆ ಬಂದಿಳಿದ ಹೊರ ಜಿಲ್ಲೆಗಳ ಜನರಲ್ಲಿ ಒಂದು ಬಗೆಯ ಧನ್ಯತಾಭಾವ ಹಾಗೂ ಉತ್ಸಾಹ ಮೈದೆಳೆದಿತ್ತು. ಭಾರತ ಮಾತಾ ಕೀ ಜೈ, ವಂದೇ ಮಾತರಂ, ಮಹಾಸಭಾಗೆ ಜೈ, ಹಾರನಹಳ್ಳಿಯವರಿಗೆ ಜಯವಾಗಲಿ ಎಂಬ ಘೋಷವಾಕ್ಯ ಮೊಳಗುತ್ತಿತ್ತು. ಎಲ್ಲರೂ ಬಿಳಿ ಪಂಚೆ, ಬಿಳಿ ಜುಬ್ಬ, ಕೈಯಲ್ಲಿ ತ್ರಿವರ್ಣ ಧ್ವಜ ಹಿಡಿದು ಕುಣಿದು ಕುಪ್ಪಳಿಸಿದ್ದೇ ಕುಪ್ಪಳಿಸಿದ್ದು, ಅಧ್ಯಕ್ಷರು



ಸರಿಸುಮಾರು 7.30ಕ್ಕೆ ವಿದುರಾಶ್ವತ್ಥಕ್ಕೆ ಭೇಟಿ ಕೊಟ್ಟು, ಪೆಂಡಾಲ್ ಹಾಗೂ ಅಲ್ಲಿನ ವ್ಯವಸ್ಥೆಯನ್ನು ಗಮನಿಸಿ ಗೌರಿಬಿದನೂರಿಗೆ ಬಂದಾಗ ಜನಸ್ತೋಮದ ಉತ್ಸಾಹ ಹೇಳತೀರದು. ಅಧ್ಯಕ್ಷರು ಬರುತ್ತಿದ್ದಂತೆ ಮಹಾಸಭೆಯ ಸದಸ್ಯರು, ಕಾರ್ಯಕರ್ತರು ಎಲ್ಲರೂ ಅಧ್ಯಕ್ಷರೊಂದಿಗೆ ಸೆಲ್ಫಿಗೆ ಮುಗಿಬಿದ್ದರು. ಆಗ ಸಮಯಕ್ಕೆ ಸರಿಯಾಗಿ ಒಂದೊಂದೇ ಜನಪದ ತಂಡಗಳು ತಮ್ಮ ತಮ್ಮ ವಾದ್ಯಗಳೊಂದಿಗೆ ದೇವಸ್ಥಾನದ ಮುಂದೆ ಜಮಾಯಿಸಲು ಪ್ರಾರಂಭಿಸಿದರು.

ಡೊಳ್ಳು, ತಮಟೆ, ಚಂಡೆ ಇವುಗಳ ಸದ್ದಿಗೆ ಯುವಕರ, ಯುವತಿಯರ ಕಾಲ್ಗಳು ತಮಗಿರಿವಿಲ್ಲದಂತೇ ಹೆಜ್ಜೆ ಹಾಕುತ್ತಿದ್ದವು.



ಕಾಲಕಳೆದಂತೆ ಕಿರಿಯರು-ಹಿರಿಯರು ಎನ್ನುವ ಭೇದಭಾವವಿಲ್ಲದೆ ಭಾರತ ಮಾತಾಕೀ ಜೈ, ವಂದೇ ಮಾತರಂ ಎಂಬ ಘೋಷವಾಕ್ಯಗಳೊಂದಿಗೆ ಎಲ್ಲರೂ ಹೆಜ್ಜೆ ಹಾಕಲು ಪ್ರಾರಂಭಿಸಿದ್ದರು.

ಜನರ ಉತ್ಸಾಹವನ್ನು ಕಂಡು ಒಂದು ಕ್ಷಣ ಎಲ್ಲರೂ ಆಶ್ಚರ್ಯಚಕಿತರಾಗಿದ್ದಲ್ಲಿ ಆಶ್ಚರ್ಯವಿಲ್ಲ ಬಿಡಿ ಸಿರಿಗೆರೆ ತರಳಬಾಳು ಜಗದ್ಗುರುಗಳಾದ ಶ್ರೀ ಶ್ರೀ ಡಾ|| ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಶ್ರೀ 1008 ಶ್ರೀ ವಿದ್ಯಾಕಣ್ವವಿರಾಜತೀರ್ಥ ಶ್ರೀಪಾದಂಗಳವರ ಆಗಮನದೊಂದಿಗೆ ಸ್ಥಳೀಯ ಶಾಸಕರಾದ ಶಿವಶಂಕರರೆಡ್ಡಿ, ವಿಧಾನಪರಿಷತ್ತಿನ ಸದಸ್ಯರಾದ ಯು.ಬಿ. ವೆಂಕಟೇಶ್, ಶಾಸಕರಾದ ದಿನೇಶ್ ಗುಂಡೂರಾವ್, ಬಸವನಗುಡಿ ಶಾಸಕರಾದ ರವಿ ಸುಬ್ರಹ್ಮಣ್ಯ ಅವರೊಂದಿಗೆ ಮಹಾಸಭಾ ಅಧ್ಯಕ್ಷರಾದ ಅಶೋಕ ಹಾರನಹಳ್ಳಿ ಅವರು ಗಾಂಧೀಜಿಯ ಪಟಕ್ಕೆ ಪುಷ್ಪಾರ್ಚನೆಯನ್ನು ಮಾಡುವ ಮೂಲಕ ಪಾದಯಾತ್ರೆಗೆ ಚಾಲನೆ ನೀಡಿದರು.



ಈ ಸಂದರ್ಭದಲ್ಲಿ ಮಹಾಸಭಾದ ಹಿಂದಿನ ಅಧ್ಯಕ್ಷರಾದ ಡಾ|| ಎಂ.ಆರ್.ವಿ. ಪ್ರಸಾದ್ ಹಾಗೂ ಮಹಾಸಭಾದ ಪ್ರಧಾನ ಕಾರ್ಯದರ್ಶಿಗಳಾದ ಎಸ್.ಶ್ರೀಧರಮೂರ್ತಿ, ಸಂಘಟನಾ ಕಾರ್ಯದರ್ಶಿ ಡಾ. ಬಿ.ಎಸ್. ರಾಘವೇಂದ್ರ ಭಟ್, ಖಜಾಂಚಿಗಳಾದ ವೆಂಕಟೇಶ್ ಎಸ್. ನಾಯಕ್, ವೇ||ಬ್ರ|| ಡಾ. ಭಾನುಪ್ರಕಾಶ್ ಶರ್ಮ, ಗಣೇಶ್ ಘನಪಾಠಿಗಳು, ಡಾ|| ಆನಂದತೀರ್ಥ ಫಡ್ನೀಸ್, ಶಶಿಭೂಷಣ್ ಹೆಗಡೆ, ಪ್ರಮೋದ್ ಮನೋಳಿ, ವಿಜಯೇಂದ್ರ ಗುರುನಾಥ ನಾಡಜೋಶಿ, ಸಹಕಾರ್ಯದರ್ಶಿಗಳಾದ ರಾಘವೇಂದ್ರ ಕುಲಕರ್ಣಿ, ಮುರಳೀಧರ, ಉಪಾಧ್ಯಕ್ಷರಾದ ರವೀಂದ್ರ ಮುತಾಲಿಕ, ಹೆಚ್.ಎನ್. ಛಾಯಾಪತಿ, ರಾಯಚೂರಿನ ಜಿಲ್ಲಾಧ್ಯಕ್ಷರಾದ ಮುರಳೀಧರ್, ಹಾಗೂ ಹಲವಾರು ಪದಾಧಿಕಾರಿಗಳು ಉಪಸ್ಥಿತರಿದ್ದರು.



ಪಾದಯಾತ್ರೆಯ ಪ್ರಾರಂಭದಲ್ಲಿ ದಾರಿಯಲ್ಲಿ ಗಾಂಧೀಜಿ ಪ್ರತಿಮೆ, ಅಂಬೇಡ್ಕರ್ ಅವರ ಪ್ರತಿಮೆ ಹಾಗೂ ಸಂಗೊಳ್ಳಿ ರಾಯಣ್ಣವರ ಪ್ರತಿಮೆಗೆ ಹೂಮಾಲೆಯನ್ನು ಸಮರ್ಪಿಸಲಾಯಿತು. ಗೌರಿಬಿದನೂರಿನ ರಸ್ತೆಗಳ ಇಕ್ಕೆಲಗಳಲ್ಲಿ ನಿಂತಿದ್ದ ಜನಸ್ತೋಮ ಈ ಪಾದಯಾತ್ರೆಯ ಸುಂದರ ದೃಶ್ಯವನ್ನು ಕಣ್ತುಂಬಿಗೊಂಡು ಭಾರತ ಮಾತಕೀ ಜೈ ಎಂಬ ಘೋಷಣೆಯನ್ನು ರಸ್ತೆಯುದ್ದಕ್ಕೂ ಸ್ವಯಂಪ್ರೇರಿತರಾಗಿ ಕೂಗತ್ತಿದ್ದದು ಸರ್ವೇಸಾಮಾನ್ಯವಾಗಿತ್ತು.





ಪಾದಯಾತ್ರೆ ಉದ್ದಕ್ಕೂ ಸ್ವಾತಂತ್ರ ಸಂಗ್ರಾಮದಲ್ಲಿ ಸ್ವಾತಂತ್ರಕ್ಕಾಗಿ ಹೋರಾಡಿದ ಸ್ವತಂತ್ರ ಸೇನಾನಿಗಳ ಪಟವನ್ನು ಕಾಲೇಜು ವಿದ್ಯಾರ್ಥಿಗಳು ಪಾದಯಾತ್ರಿಗಳು ಹಿಡಿದುಕೊಂಡು, ಅವರನ್ನು ಸ್ಮರಿಸಿದ್ದು ನಿಜಕ್ಕೂ ವಿಶೇಷವಾಗಿತ್ತು. ಈ ಪಟಗಳನ್ನು ಸಿದ್ಧಪಡಿಸಿ ಅವುಗಳ ಪ್ರಾಯೋಜಕತ್ವವನ್ನು ಪಡೆದಕೊಳ್ಳುವಲ್ಲಿ ಯಶಸ್ವಿಯಾದ ಪದಾಧಿಕಾರಿಗಳಾದ ಅರುಣ ಹಿರಣ್ಣಯ್ಯ, ಹೆಚ್.ಎನ್. ಛಾಯಾಪತಿ, ಎಂ.ಆರ್. ಶಿವಶಂಕರ್ ಅವರು ನಿಜಕ್ಕೂ ಅಭಿನಂದಾರ್ಹರು.

ಹೀಗೆ ಪಾದಯಾತ್ರೆ ಸಾಗಿದಂತೆ ದಾರಿಯುದ್ದಕ್ಕೂ ತಂಡೋಪತಂಡವಾಗಿ ಜನರು ಪಾದಯಾತ್ರೆಯೊಂದಿಗೆ ಹೆಜ್ಜೆ ಹಾಕಿದ್ದು ವಿಶೇಷ. ಪ್ರತಿ ಎರಡು ಕಿ.ಮೀ.ಗೆ ಮಹಾಸಭೆಯ ಸಹ ಕಾರ್ಯದರ್ಶಿಗಳಾದ ಹೊಸಕೋಟೆಯ ಮುರಳೀಧರ ಅವರು ಮಜ್ಜಿಗೆಯ ವ್ಯವಸ್ಥೆಯನ್ನು ಮಾಡಿದ್ದು ಪಾದಯಾತ್ರಿಗಳ ಮೊಗದಲ್ಲಿ ಸಂತಸವನ್ನುಂಟು ಮಾಡಿತ್ತು.



ಅಷ್ಟೇ ಅಲ್ಲ ದಾರಿಯುದ್ದಕ್ಕೂ ಅಲ್ಲಲ್ಲಿ ನೀರು, ಬಿಸ್ಕತ್, ಹಣ್ಣುಗಳು ಹಾಗೂ ಚಾಕಲೇಟಿನ ವ್ಯವಸ್ಥೆಯನ್ನು ಸುಬ್ರಮಣ್ಯ ಒದಗಿಸಿಕೊಟ್ಟಿದ್ದರು. ಹೀಗೆ ಪಾದಯಾತ್ರೆಯಲ್ಲಿ ಯಾರಿಗೂ ದಣಿವಿನ ಭಾವನೆ ಬಾರದಂತೆ ಎಲ್ಲರೂ ಖುಷಿಖುಷಿಯಾಗಿ ಸ್ವತಂತ್ರ ಸೇನಾನಿಗಳನ್ನು ನೆನೆಯುತ್ತ ದೇಶಭಕ್ತಿ ಗೀತೆಗೆ ಹೆಜ್ಜೆ ಹಾಕುತ್ತಾ ಇದ್ದರೆ, ನೋಡಲೆರಡು ಕಣ್ಣು ಸಾಲದಂತಾಗಿತ್ತು.

ಹೀಗೆ ಹುತಾತ್ಮರಾದ ಸ್ವಾತಂತ್ರ ಯೋಧರಿಗೆ ಗೌರವ ಸಲ್ಲಿಸುವ ಜೊತೆಗೆ ಏಕತೆ ಹಾಗೂ ರಾಷ್ಟ್ರೀಯ ಭಾವೈಕ್ಯತೆ ಮೂಡಿಸಲು ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರ ನೇತೃತ್ವದಲ್ಲಿ ಆಯೋಜಿಸಿದ್ದ ಗೌರಿಬಿದನೂರಿನಿಂದ ವಿದುರಾಶ್ವತ್ಥದವರೆಗಿನ ಪಾದಯಾತ್ರೆಗೆ ಗಣ್ಯರು, ಸ್ವಾಮೀಜಿಗಳು ಜನಪ್ರತಿನಿಧಿಗಳ ಸಾಕ್ಷಿಯಿಂದ ವಿದುರಾಶ್ವತ್ಥಕ್ಕೆ ತೆರಳಿದ ಬಳಿಕ ಸ್ವಾತಂತ್ರ ಸಂಗ್ರಾಮದಲ್ಲಿ ಹೋರಾಟ ನಡೆಸಿ ಮಡಿದ ವೀರಯೋಧರ ಸ್ತೂಪಗಳಿಗೆ ಪುಷ್ಪಾರ್ಚನೆ ಮಾಡಿ ನಮನ ಸಲ್ಲಿಸಲಾಯಿತು.



ತದನಂತರ ಸಭಾ ಕಾರ್ಯಕ್ರಮ ಪ್ರಾರಂಭವಾಯಿತು. ಸಭಾ ಕಾರ್ಯಕ್ರಮ ಪ್ರಾರಂಭವಾಗುವಾಗ ಅದಾಗಲೇ ಘಂಟೆ 12-45 ಆಗಿದ್ದರೂ, ಜನರ ಉತ್ಸಾಹವು ಕುಂದಿರಲಿಲ್ಲ.

ವೀರರಾಜ ತೀರ್ಥ ಸ್ವಾಮೀಜಿ, ತಂಬಿಹಳ್ಳಿಯ ವಿದ್ಯಾವಲ್ಲಭ ಸ್ವಾಮೀಜಿ, ಅಖಿಲ ಕನಾಟಕದ ದತ್ತಾಶ್ರಮದ ಸ್ವಾಮೀಜಿ, ವಿಧಾನ ಪರಿಷತ್ತಿನ ಮಾಜಿ ಸಭಾಪತಿ ವಿ.ಆರ್. ಸುದರ್ಶನ, ಶಾಸಕ ಎನ್.ಎಚ್. ಶಿವಶಂಕರರೆಡ್ಡಿ, ದಿನೇಶ್ ಗುಂಡೂರಾವ್, ಎಂ. ರವಿನಾರಾಯಣ ರೆಡ್ಡಿ, ಮಾಜಿ ಶಾಸಕಿ ಎನ್.ಜ್ಯೋತಿ ರೆಡ್ಡಿ, ಸಾತಂತ್ರ್ಯ ಹೋರಾಟಗಾರ ದೊಡ್ಡ ನರಸಪ್ಪ, ಡಿ.ಎಂ. ಗೀತಾ, ಕೆ.ಎಸ್. ಪುಟ್ಟಸ್ವಾಮಿಗೌಡ, ಶಶಿಧರ್, ಆರ್. ಲಕ್ಷ್ಮೀಕಾಂತ್, ಹೆಚ್.ಸಿ. ಕೃಷ್ಣ, ಎಚ್.ವಿ. ಮಂಜುನಾಥ, ರಂಗರಾಜು, ಬಿ.ಆರ್. ಶ್ರೀನಿವಾಸಮೂರ್ತಿ, ಇಡಗೂರು ವೇಣು, ಸೂರ್ಯನಾರಾಯಣ ಗುಪ್ತ, ಡೈರಿ ರಮೇಶ್ ಶಶಿಭೂಷಣ್ ಮಹಾಸಭಾ ಪದಾಧಿಕಾರಿಗಳು, ಸದಸ್ಯರು ಹಾಗೂ ಇನ್ನಿತರ ಸಂಘ-ಸಂಸ್ಥೆಗಳ ಸದಸ್ಯರೂ ಭಾಗವಹಿಸಿದ ಈ ಕಾರ್ಯಕ್ರಮ ಅಭೂತಪೂರ್ವವಾಗಿ ಯಶಸ್ವಿಯಾಯಿತು.



## ಕರ್ನಾಟಕದ ಜಲಿಯನ್ ವಾಲಾಬಾಗ್–ವಿದುರಾಶ್ವತ್ಥದ

# ಹುತಾತ್ಮರ ತ್ಯಾಗ ಬಲಿದಾನಗಳ ಸ್ಮರಣೆ ಆದ್ಯ ಕರ್ತವ್ಯ

**–ಶ್ರೀ ಶ್ರೀ ಡಾ॥ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ**



ಸಿರಿಗೆರೆ ತರಳಬಾಳು ಮಠದ ಜಗದ್ಗುರು ಶ್ರೀ ಶ್ರೀ ಡಾ॥ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಸಿರಿಗೆರೆಯ ತರಳಬಾಳು ಸಂಸ್ಥಾನದ ಜಗದ್ಗುರುಗಳಾದ ಶ್ರೀ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಕರ್ನಾಟಕದ ಜಲಿಯನ್ ವಾಲಾಬಾಗ್ ಎಂದು ಖ್ಯಾತಿ ಹೊಂದಿರುವ ವಿದುರಾಶ್ವತ್ಥ ದುರಂತದಲ್ಲಿ ಬಲಿಯಾದ ನಿರಾಪರಾಧಿ, ನಿಶಸ್ತ್ರಧಾರಿ ಹೋರಾಟಗಾರರ ತ್ಯಾಗವನ್ನು ಸ್ಮರಿಸುವುದು ಅಗತ್ತವಾಗಿದೆ. ಅಲ್ಲದೆ ಇಂತಹ ಪವಿತ್ರ ಸ್ಥಳದಲ್ಲಿ ಮಹಾಸಭಾದಿಂದ ಸದ್ಭಾವನಾ ಯಾತ್ರೆಯನ್ನು ಹಮ್ಮಿ ಕೊಂಡಿರುವುದು ಶ್ಲಾಘನೀಯ ಎಂದು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಇಂದಿನ ಜನಾಂಗವು ಸ್ವಾತಂತ್ರ್ಯ ಸಂಗ್ರಾಮದ ಆ ಕಾಲದ ಅಮಾಯಕ ದೇಶಭಕ್ತರ ತ್ಯಾಗಬಲಿದಾನ ಗಳನ್ನು ಸ್ಮರಿಸಿ ಅವರಿಗೆ ನಮ್ಮ ಕೃತಜ್ಞತೆಯನ್ನು ಸಲ್ಲಿಸುವುದು ಆದ್ಯ ಕರ್ತವ್ಯ. ಸಮಾಜದಲ್ಲಿ ನಾನು ದೊಡ್ಡವನು ಎಂಬ ಅಹಂಕಾರವನ್ನು ತೊರೆದು, ಪ್ರೀತಿಯಿಂದ ಎಲ್ಲರನ್ನೂ ಆದರಿಸುವ ದೊಡ್ಡತನವನ್ನು ಬೆಳಸಿಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಕರೆ ನೀಡಿದರು.

## ಅಗಾಧ ಸಾಧನೆಗೈದ ಶ್ರೀ ಅಶೋಕ ಹಾರನಹಳ್ಳಿಯವರಿಗೆ

# ಇಡೀ ಬ್ರಾಹ್ಮಣ ಸಮಾಜ ಕೃತಜ್ಞವಾಗಿದೆ–ಪಾವಗಡ ಪ್ರಕಾಶರಾವ್

ಸಮಾರೋಪ ಸಮಾರಂಭದ ಉದ್ದೇಶಿಸಿ ಮಾತನಾಡಿದ ಪ್ರಸಿದ್ಧ ಚಿಂತಕ ಡಾ॥ ಪಾವಗಡ ಪ್ರಕಾಶ್‌ರಾವ್‌ರವರು ಇದೊಂದು ಐತಿಹಾಸಿಕ ಸಾಮರಸ್ಯದ ಪಾದಯಾತ್ರೆ, ಸ್ವಾತಂತ್ರ್ಯ ಹೋರಾಟಕ್ಕೆ ಕಾರಣವಾಗಿದ್ದ ಅನೇಕ ಮಂದಿಗೆ ಪ್ರೇರಣೆ ಮತ್ತು ಸ್ವಾತಂತ್ರ್ಯ ಹೋರಾಟದ ಮೊದಲ ಕಿಚ್ಚನ್ನು ಹಚ್ಚಿದ್ದು ಬ್ರಾಹ್ಮಣ ಮಂಗಲಪಾಂಡೆ. ಸಂಗ್ರಾಮದ ಮುಂಚೂಣಿ ಯಲ್ಲಿದ್ದ ಝಾನ್ಸಿಲಕ್ಷ್ಮೀಭಾಯಿ ನಂತರದ ಗೋಪಾಲಕೃಷ್ಣ ಗೋಕುಲೆ, ಬಾಲಂಗಾಗಧರ ತಿಲಕ್, ಮಾಳವೀಯ ಮೊದಲಾದ ಸಾವಿರಾರು ಮಂದಿ ಬ್ರಾಹ್ಮಣರು ದೇಶಕ್ಕೆ ಸ್ವಾತಂತ್ರ್ಯಕ್ಕಾಗಿ ನೀಡಿದ ಕೊಡುಗೆಯನ್ನು ನಾವೆಲ್ಲಾ ಸ್ಮರಿಸಬೇಕಾಗಿದೆ ಎಂದು ಹೇಳಿದರು.



**ಶ್ರೀ ಅಶೋಕ ಹಾರನಹಳ್ಳಿಯವರು ತಮ್ಮ ಅಧಿಕಾರದ ಅತ್ಯಲ್ಪ ಕಾಲದಲ್ಲಿ ಹಿಂದಿನ ಯಾರೂ ಮಾಡದ ಸಾಧನೆಯನ್ನು ಮಹಾಸಭೆಯ ಅಭಿವೃದ್ಧಿಯಲ್ಲಿ ಮಾಡಿತೋರಿಸಿದ್ದಾರೆ. ಇದು ಕೇವಲ ಹೊಗಳಿಕೆಯ ಮಾತಾಗಿರದೇ ವಾಸ್ತವ ಸಂಗತಿ. ಇದಕ್ಕಾಗಿ ಇಡೀ ಬ್ರಾಹ್ಮಣ ಸಮುದಾಯ ನಿಮಗೆ ಕೃತಜ್ಞತವಾಗಿದೆ. ಇದಕ್ಕಾಗಿ ನಿಮ್ಮನ್ನು ಬ್ರಾಹ್ಮಣ ಸಮಾಜದ ಪರವಾಗಿ ಅಭಿನಂದಿಸುತ್ತೇನೆ ಎಂದು ಹೇಳಿದಾಗ ಇಡೀ ಸಭೆಯಲ್ಲಿ ಕರತಾಡನ ಮೊಳಗಿತು.**





# ಸರ್ವರ ಸಾಮರಸ್ಯದೊಂದಿಗೆ ಸದೃಢ ರಾಷ್ಟ್ರ ನಿರ್ಮಾಣ

**–ಅಶೋಕ ಹಾರನಹಳ್ಳಿ**



ಸದೃಢ ದೇಶವನ್ನು ನಿರ್ಮಿಸಬೇಕೆಂಬ ಸ್ವಾತಂತ್ರ್ಯ ಸೇನಾನಿಗಳ ಉದ್ದೇಶ ಸಫಲಗೊಳಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಈ ಜಾತಿ, ಧರ್ಮ ಪಂಗಡಗಳಿಗೆ ಅತೀತವಾಗಿ ಒಗ್ಗಟ್ಟು ಪ್ರದರ್ಶಿಸುವುದು ಅಗತ್ಯವಿದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯಾಧ್ಯಕ್ಷರಾದ ಅಶೋಕ ಹಾರನಹಳ್ಳಿ ಅಭಿಪ್ರಾಯಪಟ್ಟರು.

ಯಾವುದೇ ಫಲಾಪೇಕ್ಷೆಯಿಲ್ಲದೆ ದಾಸ್ಯ ಸಂಕೋಲೆಯಲ್ಲಿದ್ದ ದೇಶವನ್ನು ಸ್ವಾತಂತ್ರ್ಯಯ ಭಾರತವನ್ನಾಗಿ ಮುಂದಿನ ಪೀಳಿಗೆಗೆ ಕೊಡುಗೆಗಾಗಿ ನೀಡಬೇಕೆಂಬ ಒಂದೇ ಉದ್ದೇಶದೊಂದಿಗೆ ಸರ್ವಸ್ವನ್ನು ತ್ಯಾಗ ಮಾಡಿದ ಹುತಾತ್ಮ ಸ್ವಾತಂತ್ರ್ಯ ಸೇನಾನಿಗಳ ಅಪ್ರತಿಮ ಸೇವೆಯನ್ನು ಮುಂದಿನ ಪೀಳಿಗೆಗೆ ಸಾರುವುದು ಅಗತ್ಯವಿದೆ ಎಂದು ಹೇಳಿದರು.

ಸದ್ವಿಚಾರ, ಸದಾಚಾರ, ಸನ್ಮಾರ್ಗದಲ್ಲಿ ಸಾಗುವವರು ಬ್ರಾಹ್ಮಣ ರಾಗಿದ್ದು, ಈ ನಿಟ್ಟಿನಲ್ಲಿ ಸದ್ಭಾವನೆಯಿಂದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದವರೆಲ್ಲರೂ ಬ್ರಾಹ್ಮಣರಾಗಿದ್ದಾರೆ. ಮಾಡುವ ಕರ್ಮಗಳಲ್ಲಿ ಸದಾಚಾರವನ್ನು ಪಾಲಿಸುವುದು ಅವಶ್ಯಕತೆಯಿದೆ. ಸಮಾಜ ಭಿನ್ನ ಭಿನ್ನವಾಗಿ ವಿಂಗಡನೆಯಾದಲ್ಲಿ ಅದರ ಶಕ್ತಿ ಕುಗ್ಗುವುದು. ಈ ನಿಟ್ಟಿನಲ್ಲಿ ರಾಷ್ಟ್ರವನ್ನು ಬಲಪಡಿಸಲು ಎಲ್ಲರೂ ಒಂದೇ ಎಂಬ ಭಾವನೆ ಪ್ರತಿಯೊಬ್ಬರಲ್ಲೂ ಮೂಡಬೇಕೆಂದು ಮಹಾಸಭಾದಿಂದ ಒಗ್ಗಟ್ಟಿನ ಸಂದೇಶವನ್ನು ಸಾರಲಾಗುತ್ತಿದೆ ಎಂದು ಹೇಳಿದರು.

ಇಂದು ನಾವು ನೆಟ್ಟ ಗಿಡವು ನಮ್ಮ ಜೀವಮಾನದಲ್ಲಿ ಫಲ ಕೊಡದೇ ಇದ್ದರೂ, ಮುಂದಿನ ಪೀಳಿಗೆಗೆ ಅನುಕೂಲವಾಗಲಿದೆ. ಅದೇ ರೀತಿಯಲ್ಲಿ ಭವ್ಯ ರಾಷ್ಟ್ರ ನಿರ್ಮಾಣ ಮಾಡಲು ಜಾತಿ ಭೇದವಿಲ್ಲದ ಸಮಾಜ ಕಟ್ಟಬೇಕು. ಪ್ರತಿ ವ್ಯಕ್ತಿಯಲ್ಲಿ ಪರಮಾತ್ಮನ ಅಂಶವಿದ್ದೂ, ಎಲ್ಲರಲ್ಲಿಯೂ ದೈವತ್ವ ಕಾಣುವ ಮನೋಭಾವ ಬೆಳೆಸಿಕೊಳ್ಳಬೇಕು. ಈ ಮೂಲಕ ಉತ್ತಮ ಸಮಾಜದ ರೂಪುಗೊಳ್ಳಬೇಕೆಂಬ ಸಂದೇಶವನ್ನು ಸಮಾಜಕ್ಕೆ ರವಾನಿಸುವ ಕಾರ್ಯವನ್ನು ಬ್ರಾಹ್ಮಣ ಮಹಾಸಭಾದ ನೇತೃತ್ವದಲ್ಲಿ ಮಾಡಲಾಗುತ್ತಿದೆ ಎಂದು ನುಡಿದರು.



ಕಿಕ್ಕಿರಿದ ಜನ ಸಮೂಹ

# ಮಹಾಸಭೆಯಲ್ಲಿ ವಿಜೃಂಭಣೆಯ ಶ್ರೀ ವಿದ್ಯಾಗಣಪತಿ ಪೂಜಾ ಮಹೋತ್ಸವ
## ಬೇಲೂರು ರಾಮಮೂರ್ತಿಯವರಿಗೆ ವಿಪ್ರಶ್ರೀ ಪ್ರಧಾನ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರ ನೇತೃತ್ವದಲ್ಲಿ ಸಹಕಾರ್ಯದರ್ಶಿ ಹೆಚ್.ಸಿ. ಪುರುಷೋತ್ತಮ್ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರಾದ ಎನ್.ಎಸ್. ನರಸಿಂಹಮೂರ್ತಿಯವರ ಸಹಕಾರಗಳೊಂದಿಗೆ 2022ರ ಶ್ರೀ ವಿದ್ಯಾಗಣಪತಿ ಮಹೋತ್ಸವವು ದಿನಾಂಕ 31.08.2002 ರಿಂದ 04.09.2022ರವರೆಗೆ ಗಾಯತ್ರೀ ಭವನದಲ್ಲಿ ಅತೀ ವಿಜೃಂಭಣೆಯಿಂದ ನಡೆಸಲಾಯಿತು. ಪ್ರತಿದಿನ ಸಾಯಂಕಾಲ ಸಾಂಸ್ಕೃತಿಕ ಕಾರ್ಯಕ್ರವನ್ನು ಏರ್ಪಡಿಸಲಾಗಿತ್ತು. ಮೊದಲನೆ ದಿನ ಶ್ರೀಮತಿ ಲಕ್ಷ್ಮೀ ಕೋದಂಡರಾಮ ಮತ್ತು ವೃಂದದವರಿಂದ ದಾಸ ಸಂಗೀತ, 02.09.2022ರಂದು ವಿದೂಷಿ ಶ್ರೀಮತಿ ವೀಣಾ ಶ್ರೀನಿಧಿ ಮತ್ತು ಶಿಷ್ಯರಿಂದ ಭರತ ನಾಟ್ಯ, 03.04.2022 ಕರ್ನಾಟಕ ಕಲಾಶ್ರೀ ಶ್ರೀಮತಿವಿದ್ಯಾ ರವಿಶಂಕರ್ ಶಿಷ್ಯವೃಂದದಿಂದ ಸಮೂಹ ಭರತನಾಟ್ಯ ಪ್ರದರ್ಶನ ಮತ್ತ 04.09.2022ರಂದು ವಿದೂಷಿ ಶ್ರೀಮತಿ ಎಂ.ಎಸ್. ಲತಾರಾಣಿ ಶಿಷ್ಯರಿಂದ ಶ್ರೀದೇವಿ ನೃತ್ಯ ಕಲಾನಿಕೇತನ್ ರವರಿಂದ ಕಾರ್ಯಕ್ರಮಗಳು ಆಯೋಜಿಸಲಾಗಿತ್ತು. ಭಕ್ತವೃಂದ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಭಗವತ್ ಕೃಪೆಗೆ ಪಾತ್ರರಾದರು.



ದಿನಾಂಕ 04.09.2022ರ ಸಂಜೆ ನಡೆದ "ಶ್ರೀ ವಿದ್ಯಾಗಣಪತಿ ವಿಸರ್ಜನಾ" ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಗಾಯತ್ರಿ ಭವನದಿಂದ ಯಡಿಯೂರು ಕೆರೆಯವರೆಗೆ ನಡೆದ ಮೆರವಣಿಗೆಯಲ್ಲಿ ಪಟಾಕಿ ಸಿಡಿತ, ಡೊಳ್ಳು ಕುಣಿತಗಳು ಸದಸ್ಯರನ್ನು ಆಕರ್ಷಿಸಿದವು. ಎನ್.ಎಸ್. ನರಸಿಂಹಮೂರ್ತಿ ಯವರು ಡೊಳ್ಳು ಕುಣಿತದ ಏರ್ಪಾಟು ಮಾಡಿದ್ದರು.



ಗಣೇಶೋತ್ಸವ ಸಮಾರೋಪದ ಅಂಗವಾಗಿ ನಡೆದ ಈ ಸಮಾರಂಭದಲ್ಲಿ ಸುಪ್ರಸಿದ್ಧ ಶತಕೃತಿ ಸಾಹಿತಿ ಶ್ರೀ ಬೇಲೂರು ರಾಮಮೂರ್ತಿಯವರಿಗೆ ವಿಪ್ರಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಸಾಹಿತಿ ರಾಮಮೂರ್ತಿ ಈ ಗೌರವವನ್ನು ಬೇಲೂರಿನ ಇತಿಹಾಸ ಪ್ರಸಿದ್ಧ ಚೆನ್ನಕೇಶವಸ್ವಾಮಿಗೆ ಅರ್ಪಿಸಿ, ಸನ್ಮಾನಿಸಿದ ಮಹಾಸಭೆಗೆ ಕೃತಜ್ಞತೆ ಸಲ್ಲಿಸಿದರು.

ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಬ್ರಾಹ್ಮಣ ಸಮುದಾಯವನ್ನು ರಾಜಕೀಯ ಪಕ್ಷಗಳು ತಮ್ಮ ಅಗತ್ಯಕ್ಕೆ ತಕ್ಕಂತೆ ಬಳಸಿಕೊಂಡು ನಿರ್ಲಕ್ಷಿಸುತ್ತಾ ಬಂದಿದ್ದು ಇದನ್ನು ದೂರಾಗಿಸಲು ವೈಯಕ್ತಿಕ ಪ್ರತಿಷ್ಠೆಗಳನ್ನು ಮರೆತು ಸಮುದಾಯ ಒಟ್ಟಾಗಿ ಬೃಹತ್ ಶಕ್ತಿಯಾಗಿ ಬೆಳೆದು ನಿಲ್ಲಬೇಕೆಂದೂ ಕರೆ ನೀಡಿದರು.

ಈ ಸಮಾರಂಭದಲ್ಲಿ ವಿಧಾನಸಭಾ ಸದಸ್ಯರಾದ ಶ್ರೀಯುತರಾದ ರವಿಸುಬ್ರಹ್ಮಣ್ಯ, ಉದಯ್ ಗರುಡಾಚಾರ್, ಹಾಗೂ ವಿಧಾನ ಪರಿಷತ್ ಸದಸ್ಯ ಯು.ಬಿ.ವೆಂಕಟೇಶ್ , ಬೆಂಗಳೂರು ಮಹಾನಗರದ ಮಾಜಿ ಮೇಯರ್ ಬಿ.ಎಸ್. ಸತ್ಯನಾರಾಯಣ (ಕಟ್ಟೆಸತ್ಯ) ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

# ಚಿಕ್ಕಮಗಳೂರಿನಲ್ಲಿ ಮಹಿಳಾ ವೇದಿಕೆ ಉದ್ಘಾಟನೆ



ಅಖಿಲ ಕರ್ನಾಟಕ ಮಹಾಸಭೆ ಮತ್ತು ಚಿಕ್ಕಮಗಳೂರು ಜಿಲ್ಲಾ ಬ್ರಾಹ್ಮಣ ಸಭೆಯ ಸಹಯೋಗದಲ್ಲಿ ಚಿಕ್ಕಮಗಳೂರು ವಿಪ್ರ ಮಹಿಳಾ ವೇದಿಕೆಯ ಉದ್ಘಾಟನೆ ಕಾರ್ಯಕ್ರಮ 11ನೆ ಸೆಪ್ಟೆಂಬರ್ ರಂದು ನಡೆಯಿತು. ಈ ಸಮಾರಂಭದಲ್ಲಿ ಬಿಜೆಪಿ ಮುಖಂಡರಾದ ಅಖಿ ರವಿ, ಜಿಲ್ಲಾಧಿಕಾರಿಯಾದ ರಮೇಶ ಅವರು, ಬ್ರಾಹ್ಮಣ ಸಭೆಯ ರಾಜ್ಯ ಅಧ್ಯಕ್ಷರಾದ ಅಶೋಕ್ ಹಾರನಹಳ್ಳಿ, ಮಹಾಸಭಾ ರಾಜ್ಯ ಸಂಘಟನಾ ಕಾರ್ಯದರ್ಶಿ ಶ್ರೀ ಬಿ ಎಸ್ ರಾಘವೇಂದ್ರ ಭಟ್ಟರು, eÉundefinedvÌ ಕಾರ್ಯದರ್ಶಿ ಶ್ರೀ ಕಾರ್ತಿಕ್ ಬಾಪಟ್, ನಗರ ಬ್ರಾಹ್ಮಣ ಸಭಾ ಅಧ್ಯಕ್ಷರಾದ ಮಂಜುನಾಥ ಜೋಶಿ, ಜಿಲ್ಲೆ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಮಹಾಬಲ (ಕೊಪ್ಪ), ರಾಜ್ಯ ಮಹಿಳಾ ಘಟಕದ ಸಂಯೋಜಕರಾದ ಶ್ರೀಮತಿ ಶುಭಮಂಗಳ ಸುನಿಲ್, ಕಲೆ ಮತ್ತು ಸಾಂಸ್ಕೃತಿಕ ವೇದಿಕೆಯ ಸಂಯೋಜಕರಾದ ಶ್ರೀಮತಿ ನಾಗಲಕ್ಷ್ಮಿ ರಾವ್, ಜಿಲ್ಲಾ ಮಹಿಳಾ ಘಟಕದ ಮುಖ್ಯಸ್ಥರಾದ ಶ್ರೀಮತಿ ಶಾಂತಕುಮಾರಿ, ಮಹಾಸಭಾ ಕೇಂದ್ರ ಕಾರ್ಯಕಾರಿಣಿ ಸಮಿತಿ ಸದಸ್ಯರುಗಳಾದ ಶ್ರೀ ಜಯಸಿಂಹ ಶತ್ರುಘ್ನ, ಶ್ರೀ ಉಮೇಶ್ ಶಾಸ್ತ್ರಿ, ಶ್ರೀ ಸುನಿಲ್, ನಿಖಿಲ್ ಭಾರದ್ವಾಜ್ ಭಾಗವಹಿಸಿದ್ದರು. ಇದಲ್ಲದೆ ಚಿಕ್ಕಮಗಳೂರು ಜಿಲ್ಲೆಯ ಅನೇಕ ತಾಲ್ಲೂಕ್ ಬ್ರಾಹ್ಮಣ ಸಭೆಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಭಾಗವಹಿಸಿದ್ದರು.






## ಉಪ್ಪಿನಂಗಡಿಯಲ್ಲಿ ಯಕ್ಷ ಸಂಗಮ ಉದ್ಘಾಟನೆ

ಉಪ್ಪಿನಂಗಡಿಯಲ್ಲಿ ಯಕ್ಷ ಸಂಗಮ ಎನ್ನುವ ಯಕ್ಷಗಾನದ ಕಾರ್ಯಕ್ರಮ ಉದ್ಘಾಟನೆ ನಡೆಯಿತು. ಅಖಿಲ ಕರ್ನಾಟಕ ಬ್ರಾಹ್ಮಣ ಸಭಾದ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ಮತ್ತು ಉಪಾಧ್ಯಕ್ಷರಾದ ಶ್ರೀ ಮಹೇಶ ಕಜೆ ಅವರು ಭಾಗವಹಿಸಿದ್ದರು.

# ರಾಜ್ಯ ಯುವಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ






ಅಕ್ಟೋಬರ್ 1 ರಂದು ರಾಜ್ಯ ಯುವ ಘಟಕದ 72 ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ಮಹಾಸಭೆಯ ಪ್ರಾಂಗಣದಲ್ಲಿ ನಡೆಯಿತು. ರಾಜ್ಯ ಯುವ ಸಂಚಾಲಕರಾದ ಸಂದೀಪ್ ರವಿಯವರು ಪ್ರಾಸ್ತಾವಿಕ ಭಾಷಣ ಮಾಡುತ್ತಾ ಎಲ್ಲ ಜಿಲ್ಲೆಗಳನ್ನು ಪ್ರತಿನಿಧಿಸುವ ಲೆಕ್ಕ ಪರಿಶೋಧಕರು, ವಕೀಲರು, ವಾಣಿಜ್ಯೋದ್ಯಮಿಗಳು, ಇಂಜನೀಯರುಗಳು, ವೈದ್ಯರು, ಪುರೋಹಿತರು, ಕೃಷಿಕರು, ಅಧ್ಯಾಪಕರುಗಳು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಪರಿಣಿತರಾಗಿ ಹೆಸರು ಮಾಡಿದ ಸಹ ಸಂಚಾಲಕರು ಹಾಗೂ ಸದಸ್ಯರನ್ನೊಳಗೊಂಡ ಉತ್ಸಾಹಿ ಯುವ ತಂಡವನ್ನು ಪರಿಚಯಿಸಿದರು.

ಪ್ರಸಿದ್ಧ ಚಲನಚಿತ್ರ ಸಾಹಿತಿ ಶ್ರೀ ಕೆ. ಕಲ್ಯಾಣರವರು ಹಾಗೂ ಬಸವನಗುಡಿ ಶಾಸಕರಾದ ಶ್ರೀ ಎಲ್.ಎ. ರವಿಸುಬ್ರಹ್ಮಣ್ಯರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕಾರ್ಯಕ್ರಮನ್ನು ಉದ್ಘಾಟಿಸುತ್ತಾ ಶ್ರೀ ಕಲ್ಯಾಣರವರು ವಿಪ್ರ ಯುವಕರ ತಂಡವು ಮುಂದಿನ ದಿನಗಳಲ್ಲಿ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಹಾಸಭೆಯ ಏಳಿಗೆಗೆ ಶ್ರಮಿಸಲೆಂದು ಹಾರೈಸಿದರು.

ಶ್ರೀ ಎಲ್.ಎ. ರವಿಸುಬ್ರಹ್ಮಣ್ಯರವರು ನೂತನ ಪದಾಧಿಕಾರಿಗಳನ್ನು ಅಭಿನಂದಿಸುತ್ತಾ, ಯುವಕರು ಬ್ರಾಹ್ಮಣ ಸಮುದಾಯಕ್ಕೆ ಅನುಗುಣ ವಾದ ನಡವಳಿಕೆಗಳನ್ನು ಸದಾಚಾರಗಳನ್ನು ದಿನ ನಿತ್ಯದ ಜೀವನದಲ್ಲಿ ಅಳವಡಿಸಿಕೊಂಡು ಮಹಾಸಭೆಯ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ಕರೆನೀಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಯವರು ಮಾತನಾಡುತ್ತಾ ಮುಂದಿನ ವರ್ಷ ರಾಜ್ಯ ಯುವ ಸಮ್ಮೇಳನ ವನ್ನು ಆಯೋಜಿಸುವ ಮೂಲಕ ಮಹಾಸಭೆಯ ಧ್ಯೇಯವಾದ ಸಂಘಟನೆ, ಸ್ವಾವಲಂಬನೆ, ಸಂಸ್ಕಾರ ಇವುಗಳಿಗೆ ಅನುಗುಣವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವಂತೆ ಕರೆನೀಡಿದರು. ನಿಮ್ಮಲ್ಲಿ ಅತ್ಯಂತ ಪ್ರತಿಭಾನ್ವಿತರು, ವಿವಿಧ ಕ್ಷೇತ್ರಗಳಲ್ಲಿ ಪರಿಣಿತರು, ಯುವಕರು ಆಗಿರುವ ನೀವು ನಮಗಿಂತ ವಯಸ್ಸಿನಲ್ಲಿ ಅರ್ಧದಷ್ಟು ಕಿರಿಯರಾಗಿರುವ ನೀವು ನಮ್ಮ ದುಪ್ಪಟ್ಟು ಕಾರ್ಯಕ್ಷಮತೆಯಿಂದ ಮಹಾಸಭೆಯ ಮುಂದಿನ ಎಲ್ಲ ಕಾರ್ಯಚಟುಚಟಿಕೆಗಳ ಮುಂಚೂಣಿಯಲ್ಲಿದ್ದು ಮಹಾಸಭೆಯ ಮುನ್ನಡೆಸುವ, ಬೆಳೆಸುವ ಜವಾಬ್ದಾರಿ ತೆಗೆದುಕೊಳ್ಳಬೇಕೆಂದು ವಿನಂತಿಸಿದರು.

ಇದಕ್ಕೆ ಮೊದಲು ಅಧ್ಯಕ್ಷರು ನೂತನ ಜಿಲ್ಲಾ ಸಹ ಸಂಚಾಲಕರು ಹಾಗೂ ಸದಸ್ಯರುಗಳಿಗೆ ನೇಮಕಾತಿ ಆದೇಶ ಪತ್ರಗಳನ್ನು ನೀಡಿದರು. ಕಾರ್ಯಕ್ರಮದಲ್ಲಿ ಖಜಾಂಚಿ ವೆಂಕಟೇಶ್ ನಾಯಕ್, ಸಂಘಟನಾ ಕಾರ್ಯದರ್ಶಿ ರಾಗವೇಂದ್ರ ಭಟ್, ಹಾಗೂ ಹಿರಿಯರಾದ ಹಿರಿಯಣ್ಣ ಸ್ವಾಮಿಗಳು ಉಪಸ್ಥಿತರಿದ್ದರು. ಪದಾಧಿಕಾರಿಗಳು ಸಾಮೂಹಿಕವಾಗಿ ಅಧಿಕಾರದ ಪ್ರತಿಜ್ಞಾವಿಧಿಯನ್ನು ಸ್ವೀಕರಿಸುವುದರ ಮೂಲಕ ಕಾರ್ಯಕ್ರಮವು ಸಂಪನ್ನಗೊಂಡಿತು.





**ವಿಪ್ರನುಡಿ ಪತ್ರಿಕೆಗೆ ವರದಿ, ಲೇಖನಗಳನ್ನು ಕಳುಹಿಸುವವರು ಬರಹ, ನುಡಿಯಲ್ಲಿ ಟೈಪ್‌ಮಾಡಿ ಚಿತ್ರ ಸಹಿತ ಈ ಮೇಲ್ ಮುಖಾಂತರವೇ ಕಳುಹಿಸತಕ್ಕದ್ದು. ಲೇಖನ ವರದಿಗಳನ್ನು ಕಳುಹಿಸಬೇಕಾದ**

**ಇ–ಮೇಲ್ : e mail : vipranudi@gmail.com**

**ವಿಪ್ರನುಡಿ ಮಾಸಪತ್ರಿಕೆಗೆ ರೂ. 500/- ಸಂದಾಯಮಾಡಿ ಚಂದಾದಾರರಾಗಿ**

# ಕೂಟ ಮಹಾಜಗತ್ತು ಕೇಂದ್ರ ಸಂಸ್ಥೆಯ ಮಹಾ ಅಧಿವೇಶನ



ಕುಳಾಯಿ ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ರಂಗ ಮಂಟಪದಲ್ಲಿ ಇಂದು ಕೂಟ ಮಹಾಜಗತ್ತು ಸಾಲಿಗ್ರಾಮ ಕೇಂದ್ರ ಸಂಸ್ಥೆ ಮತ್ತು ಕಾಟಿಪಳ್ಳ ಕೃಷ್ಣಾಪುರ ಅಂಗ ಸಂಸ್ಥೆಯ ಸಹಭಾಗಿತ್ವದಲ್ಲಿ ಕೇಂದ್ರೀಯ ಮಹಾಧಿವೇಶನ ಮತ್ತು 69 ನೇ ವಾರ್ಷಿಕ ಮಹಾಸಭೆ ಯಕ್ಷಗಾನ ಚೆಂಡೆ ಬಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಸಮಾಜಮುಖಿ ಕಾರ್ಯಕ್ರಮಗಳ ಮೂಲಕ ಬ್ರಾಹ್ಮಣ ಸಂಘಟನೆಯನ್ನು ಬಲಪಡಿಸಿ ಬ್ರಾಹ್ಮಣ್ಯದ ಉಳಿವಿನತ್ತ ಐಕ್ಯತೆಯೊಂದಿಗೆ ಶ್ರಮಿಸೋಣ ಎಂದು ಆಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾದ ಅಧ್ಯಕ್ಷ ಆಶೋಕ ಹಾರನಹಳ್ಳಿ ನುಡಿದರು.

ಆಧುನೀಕತೆಯೊಂದಿಗೆ ಹಿಂದೂ ಹಾಗೂ ಪೌರಾಣಿಕ ಹಿನ್ನಲೆಯ ಸನಾತನ ಸಂಸ್ಕೃತಿಯ ಮುಂದುವರಿಕೆ ಅಗತ್ಯ ಯುವ ಸಮುದಾಯ ಬ್ರಾಹ್ಮಣ್ಯತ್ವವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯಯೋಜನೆಗಳನ್ನು ಸಂಘಟಿತರಾಗಿ ರೂಪಿಸಿಕೊಳ್ಳಬೇಕಾಗಿದೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಹೊಸ್ತಿಲಲ್ಲಿದ್ದ ನಾವು ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಾಹ್ಮಣದ ಕೊಡುಗೆ ಅನನ್ಯವಾಗಿದ್ದು ಮುಂದಿನ ಗಾಂಧಿ ಜಯಂತಿಯಂದು ಸ್ವಾತಂತ್ರ್ಯದ ಹೋರಾಟದ ಕೊಡುಗೆಯಾಗಿ ನಮ್ಮ ಸಮಾಜದ ಎಲ್ಲ ಸ್ತರದ ಸಂಘಟನೆಯ ಒಗ್ಗೂಡುವಿಕೆಯೊಂದಿಗೆ ವಿಪ್ರ ಸಂಗಮ ಹಾಗೂ ವಿಶಿಷ್ಟ ಕಾರ್ಯಕ್ರಮ ಹಾಗೂ ನಡಿಗೆ ಕಾರ್ಯಕ್ರಮ ರೂಪಿಸಲಾಗಿದೆ ಎಂದರು.

ಕೂಟ ಬ್ರಾಹ್ಮಣರು ವಿಪ್ರ ಸಂಘಟನೆಯ ಬಲಶಕ್ತಿಯಾಗಿದೆ ಸಂಘಟಿತ ಮನೋಭಾವದಿಂದ ಮುಂದಿನ ಸದ್ಭವಿಷ್ಯದಲ್ಲಿ ಬ್ರಾಹ್ಮಣತ್ವ ರಾಷ್ಟ್ರೀಯ ಶಕ್ತಿಯಾಗಿ ರೂಪುಗೊಳ್ಳಲು ಧೀ ಶಕ್ತಿಯನ್ನು ಅಳವಡಿಸಿಕೊಳ್ಳಬೇಕು ಎಂದ ಅವರು ಕೇಂದ್ರ ಸರಕಾರವು ಸಂವಿಧಾನ ತಿದ್ದುಪಡಿ ಮೂಲಕ ಆಥಿಕವಾಗಿ ದುರ್ಬಲ ಹೊಂದಿವರಿಗೆ ಮೀಸಲಾತಿ ಪ್ರಕಟಿಸಿದ್ದು ಈ ಮೀಸಲಾತಿಯ ಅನುಕೂಲತೆಗಳು ಇನ್ನು ಕೂಡ ಬ್ರಾಹ್ಮಣ ಸಮುದಾಯಕ್ಕೆ ಬಂದಿಲ್ಲ ಎಂದು ಖೇದ ವ್ಯಕ್ತ ಪಡಿಸಿದ ಅವರು ಈ ಬಗ್ಗೆ ರಾಜ್ಯದ ಮುಖ್ಯಮಂತ್ರಿ ಜೊತೆಗೆ ಸಾಕಷ್ಟು ಚರ್ಚಿಸಿದರೂ ಫಲಪ್ರದವಾಗಿಲ್ಲ ಈ ಬಗ್ಗೆ ಹೋರಾಟ ಆನಿವಾರ್ಯ ಎಂದರು.

ಕೇಂದ್ರ ಅಂಗಸಂಸ್ಥೆಯ ಅಧ್ಯಕ್ಷ ಎಚ್ ಸತೀಶ್ ಹಂದೆ ಅಧ್ಯಕ್ಷತೆ ವಹಿಸಿ ಆಧೀವೇಶನ ಯಶಸ್ವಿಯಾಗಿಸಲು ಸಹಕರಿಸದ ಸರ್ವರನ್ನು ಸ್ಮರಿಸಿದರು. ಮುಂದಿನ ದಿನಗಳಲ್ಲಿ ಕೂಟ ಮಹಾಜಗತ್ತು ಈಕ್ಯ ಮನೋಭಾವದಿಂದ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗುವುದು ಎಂದರು.

ಕರ್ಣಾಟಕ ಬ್ಯಾಂಕ್‌ನ ಆಡಳಿತ ನಿರ್ದೇಶಕ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಹಾಬಲೇಶ್ವರ ಎಂ. ಎಸ್. ಮಾತನಾಡಿ ಸಂಸ್ಕೃತಿಯುನ್ನು ಉಳಿಸುವುದರೊಂದಿಗೆ ಸಂಘಟನೆಯುನ್ನು ಬಲಪಡಿಸುವ ಕುರಿತು ತಿಳಿಸಿ ಅಶೋಕ ಹಾರನಹಳ್ಳಿಯವರು ಕರ್ಣಾಟಕ ಬ್ಯಾಂಕ್ ನಿರ್ದೇಶಕರಾಗಿ ಎಂಟು ವರ್ಷಗಳ ಕಾಲ ನೀಡಿದ ಸೇವೆ, ಮಾರ್ಗದರ್ಶನವನ್ನು ಸ್ಮರಿಸಿದರು.

ವೇ.ಮೂ ಕೋಡಿಮಜಲು ಅನಂತ ಪದ್ಮನಾಭ ಉಪಾಧ್ಯಾಯ ದೀಪ ಪ್ರಜ್ವಲನೆಗೈದರು. ಸಾಲಿಗ್ರಾಮ ಶ್ರೀಗುರುನರಸಿಂಹ ದೇವಸ್ಥಾನದ ಅಡಳಿತ ಮಂಡಳಿ ಅಧ್ಯಕ್ಷ ಕೆ.ಎಸ್. ಕಾರಂತ, ಸದಸ್ಯ ಪಿ. ಸದಾಶಿವ ಐತಾಳ್, ಮಾಜಿ ಅಧ್ಯಕ್ಷ ಜಯರಾಮ್ ಭಟ್, ದ.ಕ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಎಮ್ ಪಿ ಶ್ರೀನಾಥ್, ಕುಳಾಯಿ ಶ್ರೀವಿಷ್ಣುಮೂರ್ತಿ ದೇವಸ್ಥಾನದ ಅನುವಂಶಿಕ ಅಡಳಿತ ಮೊಕ್ತೇಸರ ಕೃಷ್ಣ ಹೆಬ್ಬಾರ್, ಇಡ್ಯಾ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಅನುವಂಶಿಕ ಅಡಳಿತ ಮೊಕ್ತೇಸರ ಐ ರಮಾನಂದ ಭಟ್ ಇವರನ್ನು ಸನ್ಮಾನಿಸಲಾಯಿತು. ಜ್ಯೋತಿಷಿ ಕೆ.ಸಿ ನಾಗೇಂದ್ರ ಭಾರಾಧ್ವಾಜ್, ಮುಕ್ಕ ಶ್ರೀ ಸತ್ಯಧರ್ಮ ದೇವಸ್ಥಾನದ ಆಡಳಿತ ಮೊಕ್ತೇಸರ ಗಣೇಶ ಐತಾಳ್, ಉದ್ಯಮಿ ರಘನಾಥ ಸೋಮಾಯಾಜಿ, ವಿಶ್ವೇಶ್ವರ ಬದವಿದೆ, ಕೇಂದ್ರ ಅಂಗ ಸಂಸ್ಥೆಯ ಉಪಾಧ್ಯಕ್ಷ ಇ ಗೋಪಾಲಕೃಷ್ಣ ಹೇರಳೆ, ಬಿ ಚಂದ್ರ ಶೇಖರ ಐತಾಳ್, ಎಸ್.ವಿ ರಮೇಶ್ ರಾವ್, ಕೂಟ ಮಹಾಜಗತ್ತು ಕಾಟಿಪಳ್ಳ ಕೃಷ್ಣಾಪುರ ಅಂಗ ಸಂಸ್ಥೆಯ ಅಧ್ಯಕ್ಷ ಕೆ ಶ್ಯಾಮ್ ಸುಂದರ್ ರಾವ್, ಮಹಿಳಾ ವೇದಿಕೆಯ ಅಧ್ಯಕಷೆ ವಾಣಿ ಎಸ್ ಐತಾಳ, ಪಿ ಪುರುಷೋತ್ತಮ ರಾವ್, ಸಂತೋಷ್ ಐತಾಳ್, ಶಂಕರನಾರಾಯಣ ಮೈರ್ಪಾಡಿ, ಯಜ್ಞೇಶ ಐತಾಳ್ ಕುಳಾಯಿ, ರಾಘವೇಂದ್ರ ಹೆಬ್ಬಾರ್, ಸದಾಶಿವ ಕಾರಂತ್, ಪರಮೇಶ್ವರ ಹೆಬ್ಬಾರ್ ಮೊದಲಾದವರಿದ್ದರು. ಯಮುನಾಪಿ ರಾವ್, ಜಯಂತಿ ನಿರೂಪಿಸಿದರು




**ಮಹಾಸಭೆಯ ಅಧ್ಯಕ್ಷರಿಗೆ ಆತ್ಮೀಯ ಸನ್ಮಾನ**

# ಮಹಾಸಭಾ ಅಧ್ಯಕ್ಷರಿಗೆ ಬೆಳ್ಳಿ ಕಿರೀಟ ಗೌರವ
## ಅಶೋಕ ಹಾರನಹಳ್ಳಿ ಅವರಿಗೆ ಹೃತ್ಪೂರ್ವಕ ಅಭಿನಂದನೆ




ಮೈಸೂರಿನ ಹೊಯ್ಸಳ ಕರ್ನಾಟಕ ಸಂಘದಲ್ಲಿ ಶನಿವಾರ ಎಕೆಬಿಎಂಎಸ್ ಅಧ್ಯಕ್ಷರಾದ ಅಶೋಕ ಹಾರನಹಳ್ಳಿ ಅವರಿಗೆ ಬೆಳ್ಳಿ ಕಿರೀಟ ತೊಡಿಸಿ ಗೌರವಿಸಲಾಯಿತು. ಹಿರಿಯರಾದ ಮಂದಗೆರೆ ಮಂಜುನಾಥ್, ಶಾಸಕ ರಾಮದಾಸ್, ಸಂಸದ ಪ್ರತಾಪ್‌ಸಿಂಹ, ಮುಖಂಡ ಎಚ್.ವಿ. ರಾಜೀವ್, ಡಿ.ಟಿ. ಪ್ರಕಾಶ್ ಇನ್ನಿತರ ಗಣ್ಯರು ಪಾಲ್ಗೊಂಡಿದ್ದರು.

ಮೈಸೂರು: ಅಧ್ಯಕ್ಷರಾಗಿ ಚುನಾಯಿತರಾದ ಬಳಿಕ ಉತ್ತಮ ಸಂಘಟನಾ ಕಾರ್ಯದ ಮೂಲಕ ಸಮುದಾಯದ ಏಳಿಗೆಗೆ ಹಲವು ನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಶ್ರಮಿಸುತ್ತಿರುವ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಅಶೋಕ ಹಾರನಹಳ್ಳಿ ಅವರಿಗೆ ಮೈಸೂರಿನಲ್ಲಿ ಶನಿವಾರ ಬೆಳ್ಳಿಕಿರೀಟ ತೊಡಿಸಿ ಗೌರವಿಸಲಾಯಿತು.

ಅಶೋಕಾಭಿನಂದನಾ ಶೀರ್ಷಿಕೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಈ ಕಾರ್ಯಕ್ರಮ ಹೊಯ್ಸಳ ಕರ್ನಾಟಕ ಸಂಘದ ಸಭಾಂಗಣದಲ್ಲಿ ನಡೆಯಿತು. ಸಮುದಾಯದ ಹಿರಿಯರಾದ ಮಂದಗೆರೆ ಮಂಜುನಾಥ್ ಅಭಿಮಾನಿಗಳ ಬಳಗದ ಸಂಚಾಲಕರು ಮತ್ತು ನಗರ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಡಿ.ಟಿ. ಪ್ರಕಾಶ್ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

ಮಂದಗೆರೆ ಮಂಜುನಾಥ್, ವಿದ್ವಾಂಸರಾದ ಭಾನುಪ್ರಕಾಶ್ ಶರ್ಮಾ, ಅರಳೀಕಟ್ಟೆ ಷಣ್ಮುಖಸ್ವಾಮಿ, ಶಾಸಕ ಎಸ್.ಎ. ರಾಮದಾಸ್, ಸಂಸದ ಪ್ರತಾಪ್‌ಸಿಂಹ, ಮುಡಾದ ಮಾಜಿ ಅಧ್ಯಕ್ಷರಾದ ಎಚ್.ವಿ. ರಾಜೀವ್, ಹೊಯ್ಸಳ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರಾದ ಸತ್ಯನಾರಾಯಣ ಇನ್ನಿತರ ಪ್ರಮುಖರು ಭಾಗಿಯಾಗಿದ್ದರು.

## ಸ್ವಾಮಿ ರಮಾನಂದ ತೀರ್ಥರ ಬಗ್ಗೆ ಹೆಚ್ಚಿನ ಅಧ್ಯಯನ ನಡೆಯಲಿ – ಶಾಮರಾವ್ ಹೇಮನೂರು

ರಾಯಚೂರು: ದೇಶಕ್ಕೆ ಮಹಾತ್ಮಾಗಾಂಧಿ ಎಷ್ಟು ಮಹತ್ವರೋ ಹೈರಾಬಾದ್ ಕರ್ನಾಟಕ ಭಾಗಕ್ಕೆ ಸ್ವಾಮಿ ರಮಾನಂದ ತೀರ್ಥರು ಅಷ್ಟೇ ಮಹತ್ವರಾದವರರಾಗಿದ್ದು, ಇವರ ಬಗ್ಗೆ ಹೆಚ್ಚಿನ ಅಧ್ಯಯನಗಳಾಗಬೇಕು ಎಂದು ಖಾದಿ ಗ್ರಾಮೋದ್ಯೋಗ ಸಂಘದ ಅಧ್ಯಕ್ಷ ಶಾಮರಾವ್ ಹೇಮನೂರು ಹೇಳಿದರು.

ಅವರು ನಗರದ ತಿಮ್ಮಾಪುರ ಪೇಟೆಯಲ್ಲಿರುವ ಖಾದಿ ಗ್ರಾಮೋದ್ಯೋಗ ಸಂಘದಲ್ಲಿ ಅಯೋಜಿಸಲಾಗಿದ್ದ ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ಸ್ವಾಮಿ ರಮನಂದ ತೀರ್ಥರು ಸನ್ಯಾಸಿಗಳಾಗಿದ್ದರೂ ಈ ಭಾಗದಲ್ಲಿ ನಿಜಾಮ ವಿರುದ್ಧ ಸ್ವಾತಂತ್ರ್ಯ ಹೋರಾಟಕ್ಕೆ ಯುವಕರನ್ನು ಸಂಘಟಿಸಿ, ಜೈಲುವಾಸವನ್ನು ಅನುಭವಿಸಿದರು. ಈ ಭಾಗದ ಸ್ವಾತಂತ್ರ್ಯ ಹೋರಾಟಕ್ಕೆ ಅನೇಕ ಮಹನೀಯರು ತ್ಯಾಗ ಮಾಡಿದ್ದಾರೆ. ಇಂದು ಅವರನ್ನು ಸ್ಮರಿಸಬೇಕಾಗಿದೆ ಎಂದರು.

ಖಾದಿ ಗ್ರಾಮೋದ್ಯೋಗ ಮಂಡಳಿ ಕಟ್ಟಿ ಬೆಳೆಸುವಲ್ಲಿ ಸ್ವಾಮಿ ರಮಾನಂದ ತೀರ್ಥರ ಶ್ರಮ ಅಪಾರವಾಗಿದೆ ಎಂದ ಶಾಮರಾವ್ ಅವರು ಸರ್ಕಾರ ರಮಾನಂದ ತೀರ್ಥರ ಬಗ್ಗೆ ಅಧ್ಯಯನ ನಡೆಸಲು ಹೆಚ್ಚು ಒತ್ತು ನೀಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ರಾಯಚೂರು ವಾಣಿ ಪತ್ರಿಕೆ ವ್ಯವಸ್ಥಾಪಕ ಸಂಪಾದಕ ಅರವಿಂದ ಕುಲಕರ್ಣಿ, ಖಾದಿ ಗ್ರಾಮೋದ್ಯೋಗ ಸಂಘದ ಕಾರ್ಯದರ್ಶಿ ದೇಶಪಾಂಡೆ, ಮಾಧವರಾವ್, ಶಶಿಕಲಾ ಮತ್ತಿತರರು ಉಪಸ್ಥಿತರಿದ್ದರು.

# ಬಸವನಗುಡಿ ಬ್ರಾಹ್ಮಣ ಮಹಾಸಭಾದಿಂದ ಸಾಧಕರಿಗೆ ಪ್ರಶಸ್ತಿ ಪುರಸ್ಕಾರ





ಬಸವನಗುಡಿ ಬ್ರಾಹ್ಮಣ ಮಹಾಸಭಾದ ವತಿಯಿಂದ ಪ್ರತಿಭಾ ಪುರಸ್ಕಾರ , ಸಾಧಕರಿಗೆ ಬಸವನಗುಡಿ ವಿಪ್ರ ರತ್ನ ಪ್ರಶಸ್ತಿ, ಪದಾಧಿಕಾರಿಗಳಿಗೆ ಸನ್ಮಾನ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸದಸ್ಯತ್ವ ಅಭಿಯಾನ ಕಾರ್ಯಕ್ರಮವನ್ನು ಮಹಾಸಭಾದ ಅಧ್ಯಕ್ಷ ರಾದ ಶ್ರೀ ಅಶೋಕ್ ಹಾರನಹಳ್ಳಿ ಅವರು ಉದ್ಘಾಟಿಸಿ ಮಾತನಾಡಿ ಇಂತಹ ಕಾರ್ಯಕ್ರಮ ಗಳಿಂದ ವಿಧ್ಯಾರ್ಥಿಗಳು ಸಾಧನೆ ಮಾಡಲು ಉತ್ತೇಜನ ನೀಡಿದಂತಾಗುತ್ತೆ, ಹೆಚ್ಚು ಜನ ಮಹಾಸಭಾದ ಜೂತೆ ಕೈಜೋಡಿಸಿದರೆ ಸಂಘಟನೆಯನ್ನು ಬಲಿಷ್ಠಗೂಳಿಸಬಹುದು ಎಂದು ಹೇಳಿದರು, ಸಭೆಯನ್ನು ಉದ್ದೇಶಿಸಿ ಶಾಸಕರಾದ ಎಲ್. ಎ. ರವಿ ಸುಬ್ರಮಣ್ಯ ಹಾಗೂ ಉದಯ್ ಗರುಡಾಚಾರ್ ಮಾತನಾಡಿ ಇಂತಹ ಕಾರ್ಯಕ್ರಮಗಳಿಂದ ಉನ್ನತ ಸಾಧನೆ ಮಾಡಲು ವಿಧ್ಯಾರ್ಥಿಗಳಿಗೆ ಪ್ರೋತ್ಸಾಹ ಸಿಗಲಿದೆ, ಪ್ರಶಸ್ತಿ ಪಡೆದವರು ಸಮಾಜದಲ್ಲಿ ಸಾಧನೆ ಮಾಡಿ ಮಾದರಿ ವ್ಯಕ್ತಿಗಳಾಗಿದ್ದಾರೆ ಎಂದು ತಿಳಿಸಿ ಬ್ರಾಹ್ಮಣ ಸಭಾದ ಕಾರ್ಯಕ್ರಮ ಗಳಿಗೆ ಸಂಪೂರ್ಣವಾಗಿ ಸಹಕಾರ ನೀಡಲಾಗುವುದು ಎಂದು ತಿಳಿಸಿದರು, ಗರುಡಾ ಫೌಂಡೇಷನ್ ನ ಅಧ್ಯಕ್ಷ ರಾದ ಶ್ರೀ ಮತಿ ಮೇದಿನಿ ಗರುಡಾಚಾರ್ , ಮಹಿಳಾ ವಿಭಾಗದ ಸಂಚಾಲಕಿ ಡಾ॥ ಶುಭಮಂಗಳ ಸುನಿಲ್, ಮಾಜಿ ಮಹಾಪೌರ ರಾದ ಕಟ್ಟೆ ಸತ್ಯನಾರಾಯಣ ಮಾತನಾಡಿದರು, ಕಾರ್ಯ ದಲ್ಲಿ ಎಂ. ನರಸಿಂಹನ್, ಡಾ॥ ಗುರುರಾಜ ಪೋಶೆಟ್ಟಿಹಳ್ಳಿ ಹಾಗೂ ಡಾ॥ ಸಂಜನ ಕುಮಾರ್ ಅವರಿಗೆ ಬಸವನಗುಡಿ ವಿಪ್ರ ರತ್ನ ಪ್ರಶಸ್ತಿ ಯನ್ನು ನೀಡಲಾಯಿತು, ಪ್ರತಿಭಾವಂತ ವಿಧ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು, ಮಹಾಸಭಾದ ಉಪಾಧ್ಯರಾದ ಡಿ.ವಿ. ರಾಜೇಂದ್ರ ಪ್ರಸಾದ್, ಹೆಚ್. ಆರ್. ಸುರೇಶ್, ಸಹ ಕಾರ್ಯದರ್ಶಿಗಳಾದ ಹೆಚ್.ಸಿ. ಪುರುಷೋತ್ತಮ್, ಟಿ.ಎಲ್.ಎಸ್.ಕುಮಾರ್, ಆರ್.ರವಿಕುಮಾರ್ ಹಾಗೂ ವೆ॥ ಬ್ರ॥ ಶ್ರೀ ನಾರಾಯಣ ಮೂರ್ತಿ ಅವರನ್ನು ಸನ್ಮಾನಿಸಲಾಯಿತು, ಕಾರ್ಯಕ್ರಮದಲ್ಲಿ ಓಅಃ ಅಧ್ಯಕ್ಷರಾದ ಹೆಚ್.ಸಿ.ಕೃಷ್ಣ, ಮಹಾಸಭಾದ ಹಿರಿಯರಾದ ಹೆಚ್.ಎನ್.ಹಿರಿಯಣ್ಣ ಡಿ.ಎಸ್. ಹೊನ್ನಪ್ಪ, ಪ್ರಧಾನ ಕಾರ್ಯದರ್ಶಿ ಶ್ರೀಧರ್ ಮೂರ್ತಿ, ಉಪಾಧ್ಯಕ್ಷ ರಾದ ಸಿ.ಕೆ. ರಾಮಮೂರ್ತಿ, ಸಹ ಕಾರ್ಯದರ್ಶಿ ಮುರಳೀಧರ್,

ಬೆಂಗಳೂರು ಉತ್ತರ ವಲಯ ಸಂಚಾಲಕರಾದ ಎಲ್. ಜಯಸಿಂಹ, ಕಾರ್ಯಕಾರಿಣಿ ಸದಸ್ಯರಾದ ಎಂ.ಆರ್. ಶಿವಶಂಕರ್, ಪಿ.ಆರ್.ಪ್ರಕಾಶ್, ತಾರಾನಾಥ, ಕೆ.ಎನ್.ಸತ್ಯಮೂರ್ತಿ, ನರಸಿಂಹ ಮೂರ್ತಿ, ಹೆಚ್.ಕೆ. ಶ್ರೀ ನಿವಾಸ್, ಅನಂತರಾಮು, ಸತ್ಯೇಂದ್ರ ಹಾಗೂ ಇತರೆ ಬ್ರಾಹ್ಮಣ ಸಂಘಗಳ ಪದಾಧಿಕಾರಿಗಳು ಭಾಗವಹಿಸಿದ್ದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಧ್ಯಕ್ಷ ರಾದ ಎಸ್.ಆರ್.ಕೃಷ್ಣಮೂರ್ತಿ ವಹಿಸಿದ್ದರು,ನಿರೂಪಣೆಯನ್ನು ಡಾ॥ ನಾಗಲಕ್ಷ್ಮೀ, ಹೆಚ್.ಎಸ್.ಶಂಕರ್ ಪ್ರಸಾದ್ , ಸ್ವಾಗತವನ್ನು ರಥಯಾತ್ರೆಸುರೇಶ್ ಮಾಡಿದರು, ಕಾರ್ಯಕ್ರಮದ ಬಹುತೇಕ ನಿರ್ವಹಣೆ ಯನ್ನು ಯುವ ವಿಭಾಗದ ಸದಸ್ಯರಿಂದ ನಡೆಸಲಾಯಿತು, ಸಂಘದ ಪದಾಧಿಕಾರಿಗಳು ವ್ಯವಸ್ಥಿತವಾಗಿ ಕಾರ್ಯಕ್ರಮ ನಡೆಸಲು ಸಹಕರಿಸಿದರು,



# ಉಡುಪಿ ಕೃಷ್ಣಮಠಕ್ಕೆ ಅಧ್ಯಕ್ಷರ ಭೇಟಿ



ಉಡುಪಿ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಅಶೋಕ ಹಾರನಹಳ್ಳಿ ಅವರು ಉಡುಪಿ ಕೃಷ್ಣಮಠ ಸಹಿತ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಪುಣ್ಯಕ್ಷೇತ್ರಗಳಿಗೆ ಭೇಟಿ ನೀಡಿದರು.

ಉಡುಪಿ ಕೃಷ್ಣಮಠಕ್ಕೆ ಭೇಟಿ ನೀಡಿ ದೇವರ ದರ್ಶನದ ಬಳಿಕ ಪರ್ಯಾಯಕ್ಕೆ ಕೃಷ್ಣಾಪುರ ಮಠಾಧೀಶ ಶ್ರೀ ವಿದ್ಯಾಸಾಗರತೀರ್ಥ ಶ್ರೀಪಾದರ ಆಶೀರ್ವಾದ ಪಡೆದರು. ಶ್ರೀಗಳು ಅಶೋಕ ಹಾರನಹಳ್ಳಿ ಅವರನ್ನು ಶ್ರೀ ದೇವರ ಪ್ರಸಾದ ನೀಡಿ ಹರಸಿದರು.

ಕೃಷ್ಣಮಠ ಹಾಗೂ ಹಾಸನ ಹಳ್ಳಿ ಕುಟುಂಬದೊಂದಿಗಿನ ಸೌಹಾರ್ದ ಸಂಬಂಧ ಸ್ಮರಿಸಿದ ಶ್ರೀಪಾದರು ಅಶೋಕ ಹಾರನಹಳ್ಳಿಯವರ ನೇತೃತ್ವದಲ್ಲಿ ಬ್ರಾಹ್ಮಣ ಮಹಾಸಭಾ ಯಶಸ್ಸಾಗಲಿ, ಸಮುದಾಯದ ಅರ್ಹರಿಗೆ ಪ್ರಯೋಜನ ಲಭಿಸುವಂತಾಗಲಿ ಎಂದು ಹಾರೈಸಿದರು. ಈ ಸಂದರ್ಭದಲ್ಲಿ ಮಹಾಸಭಾದ ಸಂಘಟನಾ ಕಾರ್ಯದರ್ಶಿ ರಾಘವೇಂದ್ರ ಭಟ್ ಶೃಂಗೇರಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಉಮೇಶ ಶಾಸ್ತ್ರಿ, ಪೊಳಲಿ ಗಿರಿಪ್ರಕಾಸ ತಂತ್ರಿ, ಜಯಸಿಂಹ ಶತ್ರುಘ್ನ, ರವಿಕುಮಾರ್ ಮತ್ತು ಕೃಷ್ಣಾನಂದ ಛಾತ್ರ, ಕುಂದಾಪುರ, ಉಡುಪಿಯ ಹಿರಿಯ ವಕೀಲ ಪ್ರದೀಪಕುಮಾರ್, ಪರ್ಯಾಯ ಕೃಷ್ಣಾಪುರ ಮಠ ದಿವಾನ ಕೆ. ವರದರಾಜ ಭಟ್ ಕಿನ್ನಿಮೂಲ್ಕಿ, ಪರ್ಯಾಯ ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿ ವಿಷ್ಣುಪ್ರಸಾದ್ ಪಾಡಿಗಾರ, ಉಡುಪಿ ತಾಲೂಕು ಬ್ರಾಹ್ಮಣ ಸಭಾ ಅಧ್ಯಕ್ಷ ಮಂಜುನಾಥ ಉಪಾಧ್ಯ, ಪ್ರಧಾನ ಕಾರ್ಯದರ್ಶಿ ಸಂದೀಪ ಕುಮಾರ್ ಮಂಜ, ಶ್ರೀಕಾಂತ ಉಪಾಧ್ಯಾಯ ಮೊದಲಾದವರಿದ್ದರು.

### ಜಿಲ್ಲಾ ಬ್ರಾಹ್ಮಣ ಸಮ್ಮೇಳನಕ್ಕೆ ಆಹ್ವಾನ

ಕಾರ್ಕಳ ತಾಲೂಕು ಬ್ರಾಹ್ಮಣ ಸಭಾ ಸಹಯೋಗ ದೊಂದಿಗೆ ನವೆಂಬರ್ ತಿಂಗಳಲ್ಲಿ ನಡೆಯುವ ಉಡುಪಿ ಜಿಲ್ಲಾ ಬ್ರಾಹ್ಮಣ ಸಮ್ಮೇಳನಕ್ಕೆ ಆಗಮಿಸುವಂತೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ, ಮಾಜಿ ಅಡ್ವೋಕೇಟ್ ಜನರಲ್ ಅಶೋಕ ಹಾರನಹಳ್ಳಿ ಅವರನ್ನು ಉಡುಪಿ ಜಿಲ್ಲಾ ಬ್ರಾಹ್ಮಣ ಸಭಾದವರ ಆಹ್ವಾನ ನೀಡಿದರು.

ಅದಕ್ಕೂ ಮುನ್ನ ಸಾಲಿಗ್ರಾಮ ಶ್ರೀ ಗುರುನರಸಿಂಹ ದೇವಸ್ಥಾನಕ್ಕೆ ಭೇಟಿ ನೀಡಿದರು. ಬಳಿಕ ಹಂಗಾರಕಟ್ಟೆ ಬಾಳೆಕುದ್ರು ಮಠಕ್ಕೆ ಭೇಟಿ ನೀಡಿದರು. ಶ್ರೀ ನೃಸಿಂಹಾಶ್ರಮ ಸ್ವಾಮೀಜಿಯವರು ಅಶೋಕ ಹಾರನಹಳ್ಳಿ ಅವರನ್ನು ಸನ್ಮಾನಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯ ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ಭೇಟಿ ನೀಡಿದಾಗ ಕ್ಷೇತ್ರದ ಅರ್ಚಕ ಹರಿನಾರಾಯಣದಾಸ ಅಸ್ರಣ್ಣ ಶ್ರೀದೇವಿಯ ಶೇಷವಸ್ತ್ರ ಪ್ರಸಾದ ನೀಡಿದರು.

ಬಳಿಕ ಅಶ್ವತ್ಥಪುರ ಶ್ರೀ ಸೀತಾರಾಮಚಂದ್ರ ದೇವಸ್ಥಾನಕ್ಕೆ ಭೇಟಿ ನೀಡಿದ ಹಾರನಹಳ್ಳಿ ಅವರನ್ನು ಕ್ಷೇತ್ರದ ಪ್ರಧಾನ ಅರ್ಚಕ ಚಂದ್ರಮೌಳಿ ಭಟ್ ಪ್ರಸಾದ ನೀಡಿದರು. ಕ್ಷೇತ್ರದ ವತಿಯಿಂದ ಆಡಳಿತ ಮೊಕ್ತೇಸರ ರಘುನಾಥ ಎಲ್.ವಿ. ಗೌರವಿಸಿದರು. ದೇವಳದ ಆಡಳಿತ ಸಮಿತಿ ಸದಸ್ಯರಾದ ಕಿರಣ್ ಮಂಜನಬೈಲು ಮತ್ತು ರಂಗನಾಥ್ ಭಟ್ ಇದ್ದರು.



### ಪೊಳಲಿ ಶ್ರೀ ರಾಜರಾಜೇಶ್ವರಿ ದೇವಸ್ಥಾನಕ್ಕೆ ಭೇಟಿ

ಇದೇ ಸಂದರ್ಭದಲ್ಲಿ ಶ್ರೀ ರಾಜರಾಜೇಶ್ವರಿ ದೇವಸ್ಥಾನ ಪೊಳಲಿ ಬ್ರಾಹ್ಮಣ ಸಮಾಜದ ವತಿಯಿಂದ ನಿರ್ಮಾಣಗೊಳ್ಳುತ್ತಿರುವ "ಅನ್ನ ಛತ್ರ"ದ ನವೀಕೃತ ಕಟ್ಟಡದ ವಿಷಯದ ಬಗ್ಗೆ ಚರ್ಚಿಸಲಾಯಿತು. ಮತ್ತು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ) ಬೆಂಗಳೂರು ಇದರ ಸಂಘಟನಾ ಕಾರ್ಯದರ್ಶಿ ಡಾ। ಬಿ. ಎಸ್.ರಾಘವೇಂದ್ರ ಭಟ್ ಉಪಸ್ಥಿತರಿದ್ದರು.

ದಕ್ಷಿಣ ಕನ್ನಡ ಜಿಲ್ಲಾ ಬ್ರಾಹ್ಮಣ ಸಂಘದ ಕಚೇರಿ ಉದ್ಘಾಟನೆಯನ್ನು ಅಶೋಕ ಹಾರನಹಳ್ಳಿಯವರು ನೆರವೇರಿಸಿದ ಸಂದರ್ಭದಲ್ಲಿ ಉಪಾಧ್ಯಕ್ಷ ವಕೀಲರು ಮಹೇಶ್ ಕಜೆ ಮಹಾಸಭಾ ಅಧ್ಯಕ್ಷರನ್ನು ಸನ್ಮಾನಿಸಿ ಗೌರವಿಸಿದರು.



### ಮಲೆನಾಡಿನ ಪ್ರಸಿದ್ಧ ಪತ್ರಕರ್ತ ಕಲಾವಿದ

## ಬಿ.ಆರ್. ಗಣಪತಿ ದೈವಾಧೀನ



ವೃತ್ತಿಯಲ್ಲಿ ಕೃಷಿಕರಾಗಿ ಪ್ರವೃತ್ತಿಯಲ್ಲಿ ಪತ್ರಿಕೆಯ ಸಂಪಾದಕರಾಗಿ, ಸಮಾಜ ಸೇವಕರಾಗಿ ಮಾತ್ರವಲ್ಲ ಕಲಾವಿದರೂ ಆಗಿ ನಿಸ್ವಾರ್ಥವಾಗಿ ಸುದೀರ್ಘ ಕಾಲ ಸೇವೆ ಸಲ್ಲಿಸಿದ್ದ ಆಧುನಿಕ ಚಂದ್ರಹಾಸ ಖ್ಯಾತಿಯ ಬಿ.ಆರ್. ಗಣಪತಿ ಬಂದಗದ್ದೆ (68) ಇತ್ತೀಚೆಗೆ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಒರ್ವ ಪುತ್ರ, ಪುತ್ರಿಯನ್ನು ಅಗಲಿದ್ದಾರೆ.

ಕೆಳದಿಯಂತಹ ಹಳ್ಳಿಯಲ್ಲಿ ಪತ್ರಿಕೆಯೊಂದನ್ನು ನಿರಂತರವಾಗಿ 18 ವರ್ಷಗಳಿಂದ ನಡೆಸಿಕೊಂಡು ಬಂದ ಕೀರ್ತಿ ಗಣಪತಿಯವರಿಗಿದೆ. ಇದರ ಆಚೆಗೆ ವಿಶೇಷ ವ್ಯಕ್ತಿತ್ವ ಹೊಂದಿದ್ದ ಅವರು ಸ್ನೇಹಿ ಜೀವಿಯಾಗಿದ್ದರು.

ಭಾರತಿ ಕಲಾವಿದರ ಸಂಸ್ಥೆಯ ತ್ಯಾಗಿ, ಬೇಡರ ಕಣ್ಣಪ್ಪ, ಸಂಗ್ಯಾಬಾಳ್ಯ ಇನ್ನೂ ಮುಂತಾದ ನಾಟಕಗಳಲ್ಲಿ ಪಾತ್ರ ನಿರ್ವಹಿಸಿದ ಬಿ.ಆರ್. ಗಣಪತಿ ಯಕ್ಷಭಾರತಿ ತಾಳಮದ್ದಲೆ ತಂಡದಲ್ಲಿ ಅರ್ಥಧಾರಿಯಾಗಿ, ಬೇಳೂರಿನ ಶ್ರೀ ಮಾರಿಕಾಂಬ ಯಕ್ಷಗಾನ ಮಂಡಳಿಯಲ್ಲಿ ವೇಷಧಾರಿಯಾಗಿ ಕೆಲಸ ಮಾಡಿದ್ದಾರೆ. ಇದಲ್ಲದೆ ಬ.ಲ.ಸುರೇಶ್ ನಿರ್ದೇಶನದ ಗುರುರಾಘವೇಂದ್ರ ವೈಭವ ಸುವರ್ಣವಾಹಿನಿಯ ಧಾರಾವಾಹಿಯಲ್ಲಿಯೂ ಪಾತ್ರ ನಿರ್ವಹಿಸಿ ಕಿರುತೆರೆಯ ನಟರೂ ಆಗಿದ್ದಾರೆ. ಹುಲಿ ಪ್ರಕಾಶನ ಬಂದಗದ್ದೆ ಎಂಬ ಸಂಸ್ಥೆ ಆರಂಭಿಸಿ ಅದರ ಮೂಲಕ ಕೆಳದಿ ಪಾಕ್ಷಿಕ ಪತ್ರಿಕೆ ಹೊರತಂದು ಸಂಪಾದಕರಾಗಿಯೂ, ಪ್ರಾಕಾಶಕರಾಗಿಯೂ ಕರ್ತವ್ಯ ನಿರ್ವಹಿಸಿದ ಕೀರ್ತಿ ಅವರದು. ಸಾಗರದ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ಸಾಗರದ ಪ್ರೆಸ್ ಟ್ರಸ್ಟ್ ಇವರನ್ನು ಸನ್ಮಾನಿಸಿದ್ದನ್ನು ಸ್ಮರಿಸಬಹುದು.

ಅಗಲಿದ ಚೇತನವು ಸದ್ಗತಿ ಹೊಂದಲೆಂದು ಹಾಗೂ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿಯನ್ನು ಪರಮಾತ್ಮನಲ್ಲಿ ನೀಡಲೆಂದು ಮಹಾಸಭೆಯು ಪ್ರಾರ್ಥಿಸುತ್ತದೆ.



### ಶ್ರದ್ಧಾಂಜಲಿ

## ಶ್ರೀ ಎ.ಎನ್. ಗಂಗಾಧರ ಶಾಸ್ತ್ರೀ

ಬೆಂಗಳೂರು ಬ್ರಾಹ್ಮಣ ಸಮುದಾಯದ ಹಿರಿಯರು ಧಾರ್ಮಿಕ ಚಿಂತಕರು ಶ್ರೀ ವಿದ್ಯಾಗಣಪತಿ ಪ್ರಕಾಶನದ ಮೂಲಕ ಅನೇಕ ಗ್ರಂಥಗಳನ್ನು ಪ್ರಕಟಿಸಿದ್ದ ಮಹಾಸಭೆಯ ಸದಸ್ಯರೂ ಆದ ಶತಾಯುಷಿ **ಶ್ರೀ ಎ.ಎನ್. ಗಂಗಾಧರ ಶಾಸ್ತ್ರೀ**ಗಳು ದೈವಾಧೀನರಾದರು. ಅಗಲಿದ ಚೇತನವು ಸದ್ಗತಿ ಹೊಂದಲೆಂದು ಹಾಗೂ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿಯನ್ನು ಪರಮಾತ್ಮನಲ್ಲಿ ನೀಡಲೆಂದು ಮಹಾಸಭೆಯು ಪ್ರಾರ್ಥಿಸುತ್ತದೆ.

### ವಿಪ್ರ ಅಶಕ್ತ ಅಂಗವಿಕಲರು ಹಾಗೂ ವೃದ್ಧರಿಂದ

## ಮಾಸಾಶನ ಯೋಜನೆಗೆ ಅರ್ಜಿ ಆಹ್ವಾನ

ಸಂಕಷ್ಟದಲ್ಲಿರುವ ಅರ್ಹ ವಿಪ್ರ ಅಂಗವಿಕಲರು ಹಾಗೂ ವೃದ್ಧರಿಗೆ ಮುಂದಿನ ದಿನಗಳಲ್ಲಿ ಮಾಸಿಕ ಸಹಾಯ ಧನವಾಗಿ 'ಮಾಸಾಶನ' ನೀಡಲು ಯೋಜಿಸಲಾಗಿದೆ. ಆಸಕ್ತ ಅರ್ಹ ಫಲಾನುಭವಿಗಳು ತಮ್ಮ ವಿವರಗಳು ಹಾಗೂ ಸ್ಥಳಿಯ ಪದಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಮಹಾಸಭೆಗೆ ಅರ್ಜಿ ಸಲ್ಲಿಸಲು ಕೋರಿದೆ. ಹೆಚ್ಚಿನ ವಿವರಗಳಿಗೆ ಮಹಾಸಭೆ ಕಛೇರಿಯನ್ನು ಸಂಪರ್ಕಿಸಿ.

### ಪ್ರಾಯೋಜಕತ್ವಕ್ಕಾಗಿ ಮನವಿ

ಸಮಾಜದ ಉಳ್ಳವರು, ಮತ್ತು ಸಬಲರು ಈ ಯೋಜನೆಗೆ ಪ್ರಾಯೋಜಕರಾಗಿ ಮುಂದೆ ಬಂದು ಅಪೂರ್ವವಾದ ಯೋಜನೆಗೆ ಕಾರ್ಯ ರೂಪಕ್ಕೆ ಬರುವಂತೆ ನೆರವಾಗಬೇಕೆಂದು ಮಹಾಸಭೆಯ ಅಧ್ಯಕ್ಷರು ವಿನಂತಿಸಿಕೊಂಡಿದ್ದಾರೆ. ಒಂದು ವರ್ಷಕ್ಕೆ 6000ರೂಗಳ್ನು ನೀಡಿ ಪ್ರಾಯೋಜಕರಾದಲ್ಲಿ ಅವರದೆ ಹೆಸರಿನಲ್ಲಿ ಈ ಹಣದಿಂದ ಒಬ್ಬರಿಗೆ 12 ತಿಂಗಳು 500ರೂಗಳಂತೆ ತಿಂಗಳಿಗೆ ಸಹಾಯಧನ ರೂಪದಲ್ಲಿ ಮಾಸಾಶನ ನೀಡಲು ಯೋಜಿಸಿದೆ. ಆದ್ದರಿಂದ ಕನಿಷ್ಠ 6,000 ರೂಗಳನ್ನು ನೀಡಿ ಪ್ರಾಯೋಜಕರಾಗಲು ಕೋರಿದೆ. ಪ್ರಾಯೋಜಕರ ಹೆಸರನ್ನು ಮಹಾಸಭೆಯ ಜಾಲತಾಣ ಹಾಗೂ ವಿಪ್ರನುಡಿಯಲ್ಲಿ ಪ್ರಕಟಿಸಲಾಗುವುದು.

–ಪ್ರಧಾನ ಕಾರ್ಯದರ್ಶಿಗಳು

# ನವರಾತ್ರಿ

ಡಾ॥ ಮುದ್ರಾಡಿ ವಾಸುದೇವ ಭಟ್

ಎಲ್ಲಾ ರಾತ್ರಿಗಳೂ ನವರಾತ್ರಿಗಳೇ. ಆದರೆ ಆಶ್ವಯುಜ ಮಾಸದ ಶುಕ್ಲ ಪಾಡ್ಯ ತಿಥಿಯಿಂದ ನವಮಿತನಕದ ತಿಥಿಗಳನ್ನು ಮಾತ್ರ ಲೋಕದಲ್ಲಿ ನವರಾತ್ರಿ ಎಂದು ಕರೆಯುವರು. ಉಳಿದ ನವರಾತ್ರಿಗಳು ಗೌಣ.

'ಶರತ್ಕಾಲೇ ಮಹಾಪೂಜಾ ಕ್ರಿಯವೇಯಾಚ ವಾರ್ಷಿಕೀ' ಎಂಬಂತೆ ಸ್ವಾಯಂಭುವ ಮನುವೇ ನವರಾತ್ರಿ ಕಾಲದಿ ಈ ನವರಾತ್ರಿ ವ್ರತಾಚರಣೆಯನ್ನು ವಿಧಿವತ್ತಾಗ ಆಚರಿಸಿ ಮನ್ವಂತರಾಧಿಪನಾದನು. ಉಳಿದ ಸ್ವಾರೋಚಿಷಾದಿಗಳು ಕೂಡಾ ವಿಧಿವತ್ತಾಗಿ ಈ ನವರಾತ್ರಿ ಕಲ್ಪೋಕ್ತ ವ್ರತಾಚರಣೆಯನ್ನು ಆಚರಿಸಿಯೇ ಮನ್ವಂತರಾದಿಪರಾದರೆಂದು ದೇವಿಭಾಗವತದಲ್ಲಿ ಇರುವುದು.

ಮಧುಶ್ವೇತಭರ ನಾಶಕ್ಕೆ ಸ್ವತಃ ಭಗವಂತನೇ ವಿಧಿವತ್ತಾಗಿ ಈ ನವರಾತ್ರಿವ್ರತ ಕಲ್ಪೋಕ್ತ ಪೂಜೆಯನ್ನು ಮಾಡಿ ರಾಕ್ಷಸರ ನಾಶವನ್ನು ಮಾಡಿದನು. ಪರಶಿವನು ಈ ನವರಾತ್ರಾ ವ್ರತವನ್ನು ಆಚರಿಸಿಯೇ ತ್ರಿಪುರಾಸುರರ ಸಂಹಾರವನ್ನು ಮಾಡಲು ಸಮರ್ಥನಾದನು. ಇಂದ್ರನು ವೃತ್ರಾಸುರನ ಸಂಹಾರಕ್ಕೆ ಮೊದಲು ಈ ವ್ರತವನ್ನು ಆಚರಿಸಿದ ಫಲದಿಂದಾಗಿ ಶ್ವೇತಪ್ಪಿಹೋದ ತಾರೆಯನ್ನು ಪುನಃ ಪಡೆದರು. ಇದರಂತೆ ಭೃಗುಮಹರ್ಷಿಗಳು, ವಸಿಷ್ಠರು, ವಿಶ್ವಾಮಿತ್ರರು, ಕಶ್ಯಪ ಮೊದಲಾದವರು ಈ ವ್ರತವನ್ನು ಆಚರಿಸಿ ಬ್ರಹ್ಮರ್ಷಿಗಳಾದರು.

ಎಲ್ಲಾ ವ್ರತಗಳು ಕಾಮ್ಯವ್ರತಗಳು. ಇಷ್ಟವಿದ್ದರೆ ಆಚರಿಸಬಹುದು. ಇಲ್ಲದಿದ್ರೆ ಬಿಡಬಹುದು. ಆದರೆ ಈ ನವರಾತ್ರಾ ವ್ರತಕಲ್ಪೋಕ್ತವು ನಿತ್ಯವು. ಎಲ್ಲ ಜಾತಿ ಮತ ಪಂಥದವರೂ ಪ್ವದೇ ಆಚರಿಸಬೇಕಾದ ವ್ರತವು.

"ಪ್ರಕೃತಿಂಪುರುಷಂಚೈವ ವಿದ್ಯನಾದೀ ಉಭಾವಪಿ" ಎಂಬ ಈ ಪ್ರಕೃತಿಯ ಆರಾಧನೆಯೇ ನವರಾತ್ರಾ ವ್ರತವು. ಪ್ರಕೃತಿಯ್ನು ಶ್ರೀ ಭೂದುರ್ಗಾವೆಂತಲೂ ಶ್ರೀ ಮಹಾಕಾಳೀ, ಮಹಾಲಕ್ಷ್ಮೀ, ಮಹಾಸರಸ್ವತೀ ಎಂತಲೂ ಪುರಾಣಗಳು ವರ್ಣಿಸಿವೆ.

ನಮ್ಮ ಗುರುಗಳಾದ ಭೀಮಾಚಾರ್ಯರು ಹೇಳುತ್ತಿದ್ದಂತೆ ಆಚಾರ್ಯ ಮಧ್ವರು ಗೋಪಾಲತ್ರಿಪುರ ಸುಂದರೀ ಮಂತ್ರದ ಉಪಾಸಕರಾಗಿದ್ದರು. ನವರಾತ್ರಿ ಕಾಲದಲ್ಲಿ ಉಡುಪಿಯ ಶ್ರೀಕೃಷ್ಣನು ಶ್ರೀದೇವಿಯಾಗಿಯೇ ಕಂಗೊಳಿಸುವನು. ಹೀಗಾಗಿ ನವರಾತ್ರಿ ಕಾಲದಲ್ಲಿ ಉಡುಪಿಯ ಶ್ರೀಕೃಷ್ಣನ ದರ್ಶನಕ್ಕೆ ಹೋದವರು ಉಡುಪಿಯಲ್ಲಿ ಕೃಷ್ಣದೇವರು ಇರುವುದಲ್ಲ. ಅಲ್ಲಿರುವುದು ದೇವಿಯೆ ಎನ್ನುವುದರಲ್ಲಿ ಸಂಶಯವಿಲ್ಲ. ಮಾತೃದೇವೋಭವ ಎಂಬಂತೆ ಮಕ್ಕಳ ಇಷ್ಟಾರ್ಥವನ್ನು ಸ್ವತಃ ತಾಯಿಯೇ ತಿಳಿದುಕೊಂಡು ಪೂರೈಸುವಂತೆ ತಂದೆಯು ಪೂರೈಸಲಾರರು. ಇದೇ ಈ ಪೂಜೆಯ ರಹಸ್ಯ.

ತಿರುಪತಿಯಲ್ಲಿಯೂ ವಾರ್ಷಿಕೋತ್ಸವ ನಡೆಯುವುದು ನವರಾತ್ರಿಯ ಸಮಯದಲ್ಲಿ. ತಂತ್ರಿಗಳಾಗಲೀ, ಅರ್ಚಕರಾಗಲಿ ಶಾಂತಿ ಸ್ನಾನ ಮಾಡಿದ ಮೇಲೆ ದೇವರೊಳಗಿನ ರಹಸ್ಯವನ್ನು ಹೊರಗಿನವರಿಗೆ ತಿಳಿಸಲಾರರು. ಇದನ್ನೇ ಚಿದಂಬರ ರಹಸ್ಯ ಎನ್ನುವುದು. ಉತ್ಸವ ಎಂದರೇನು. ಸಂತೋಷದಲ್ಲಿರುವ ಕಾಲ. ನಾವು ಸಂತೋಷದಲ್ಲಿರುವಾಗ ಯಾರು ಏನು ಬಂದು ಕೇಳಿದರೂ ಕೊಟ್ಟುಬಿಡುತ್ತೇವೆ ಅಲ್ಲವೇ. ಎದರಂತೆ ಉತ್ಸವ ಕಾಲದಲ್ಲಿ ದೇವರ ದರ್ಶನ ಮಾಡಿ ಏನನ್ನು ಬೇಡಿಕೊಂಡರೂ ದೇವರು ಅನುಗ್ರಹಿಸುವುದರಲ್ಲಿ ಸಂಶಯವಿಲ್ಲ.

ಇದರಂತೆ ತ್ರಿವೆಂಡ್ರಂ ತಿರುವನಂತಪುರದಲ್ಲಿರುವ ಅನಂತ ಪದ್ಮನಾಭ ದೇವಸ್ಥನದಲ್ಲೂ ವಾರ್ಷಿಕೋತ್ಸವ ನಡೆಯುವುದು ನವರಾತ್ರಿಯಲ್ಲೇ. ಅಂಗೈ ನೋಡಲು ಕನ್ನಡಿ ಬೇಕೇ. ಸ್ವಲ್ಪ ಆಲೋಚಿಸಿದರೆ ತಿಳಿಯುವುದು. ಇಲ್ಲಿಯೂ ನವರಾತ್ರಾ ಪೂಜೆಯೇ ನಡೆಯುವುದು. ನವರಾತ್ರಿ ವ್ರತಕಲ್ಪೋಕ್ತ ಪೂಜೆ ಮಾಡಿದರೆ 'ಕಲೌದುರ್ಗಾ ವಿನಾಯಕ' ಎಂಬಂತೆ ಇಷ್ಟಾರ್ಥ ಸಿದ್ಧಿಸುವುದು. ಇದು ಇಲ್ಲಿನ ಉತ್ಸವದ ರಹಸ್ಯ.

ಇದೆಲ್ಲ ದಕ್ಷಿಣಾ ಭಾರತದ ಕಥೆಯಾಯಿತು. ಉತ್ತರ ಭಾರತದಲ್ಲಿ. ಉತ್ತರ ಭಾರತದಲ್ಲೂ ಇದೇ ಕಥೆ. ಅಲ್ಲಿ ಈ ನವರಾತ್ರಾವ್ರತ ಕಲ್ಪೋಕ್ತವನ್ನು ರಾಮಲೀಲೋತ್ಸವವೆಂದು ವಿಜೃಂಭಣೆಯಿಂದ ಆಚರಿಸುತ್ತಾರೆ. ಕಾರಣ ಭಗವಾನ್ ಶ್ರೀರಾಮಚಂದ್ರನೇ ಈ ವ್ರತವನ್ನು ಆಚರಿಸಲು ಪ್ರಾರಂಭಿಸಿದವನು. ಅದರ ಸವಿನೆನಪಿಗಾಗಿ ರಾಮಲೀಲೋತ್ಸವ ಎಂಬ ಹೆಸರಿನಿಂದ ಆಚರಿಸುವರು. ಪುನ ಪಶ್ಚಿಮ ಬಂಗಾಳದ ದುರ್ಗಾಪೂಜೆ ಯೆದರೂ ಇದೇ ಅಲ್ಲವೇ.

"ಚತುಃಷಷ್ಟಾತಂತ್ರೈಃ" ಎಂಬಂತೆ ಈ ವ್ರತಕಲ್ಪೋಕ್ತ ಪೂಜಾದಿಗಳೆಲ್ಲ ತಂತ್ರೋಕ್ತಗಳಾಗಿರುವವು. ಭಕ್ತಿಗಿಂತ ಯುಕ್ತಿ ಅಂದರೆ ತತ್ರವೇ ಮುಖ್ಯವು. ಭಕ್ತಿಯಿಂದ ಯಾವ್ಯಾವುದೋ ಪೆಟ್ಟಿಗೆಗೆ ನಾವು ಬರೆದ ಪತ್ರವನ್ನು ಹಾಕಿದರೆ ಅದುಇ ತಲುಪಬೇಕಾದಲ್ಲಿಗೆ ತಲುಪುವುದಿಲ್ಲ. ಅದು ಅಂಚೆಪಟ್ಟಿಗೆಯ ಒಳಗೆ ಹಾಕಿದರೆ ಮಾತ್ರ ಹೋಗಬೇಕಾದಲ್ಲಿಗೆ ಹೋಗಿ ಸೇರಿ ನಮ್ಮ ಇಷ್ಟಾರ್ಥ ಸಿದ್ಧಿಸುವುದು. ಇದು ತಂತ್ರ.

ಭಕ್ತಿಯಿಂದ ರಸ್ತೆಯ ಬಲಭಾಗದಲ್ಲಿ ವಾಹನವನ್ನು ಚಲಾಯಿಸಿಕೊಂಡು ಹೋದರೆ ಏನಾಗಬಹುದು. ಏನು ಆಗಬಾರದೋ ಅದು ಆಗಿಬಿಡುತ್ತದೆ. ಇದರಂತೆ ಅಡಕೆ ಮರ ಹತ್ತಲಿಕ್ಕೆ ಸಾಧ್ಯವಾಗದಿದ್ರೆ ಮರ ಹತ್ತಲಿಕ್ಕೆ ಗೊತ್ತಿದ್ದವರಿಗೆ ಹಣ ಕೊಟ್ಟು ಮರ ಹತ್ತಿಸಿ ಅಡಿಕೆ ಕೊಯಿಸಿ ಉಪಯೋಗಿಸಬೇಕು. ಇದನ್ನೇ ತಂತ್ರ ಎನ್ನುವುದು. ಇದೇ ದೇವಸ್ಥಾನಾದಿಗಳಲ್ಲಿ ಸೇವೆ ಎನ್ನಿಸಿರುವುದು.

'ಪ್ರಕೃತಿಸ್ತ್ವಂಚ ಸರ್ವಸ್ಯ' ಎಂಬಂತೆ ನವರಾತ್ರಿಯ ಒಂಬತ್ತು ದಿನಗಳಲ್ಲೂ ಈ ಪ್ರಕೃತಿದೇವಿಯನ್ನು 'ದುರ್ಗಾಷ್ಟಾರ್ಯ ಭಗವತೀ ಎಂಬಂತೆ ಬೇರೆ ಬೇರೆ ಹೆಸರಿನಲ್ಲಿ ಪೂಜಿಸುತ್ತಾರೆ. ಪ್ರತಿದಿನದ ಹೆಸರಿಗೆ ತಕ್ಕಂತೆ ನವಶಕ್ತಿ, ಮೂಲಮಂತ್ರ, ಅಂಗ ಆವರಣಾದಿಗಳಲ್ಲದೆ ಅಷ್ಟೋತ್ತರವೂ ಬೇರೆಯೆ ಆಗಿರುತ್ತದೆ. ಈ ವ್ರತವನ್ನು 'ಯಥಾಶಕ್ತಿರ್ ನವಂಚಯೇತ್'ಎಂಬಂತೆ ಶಕ್ತಿ ಮೀರಿ ವೈಭವೋಪೇತವಾಗಿಯೇ ಆಚರಿಸಬೇಕು. 'ನಕ್ತಭೋಜೀ' ಅಂದರೆ ಹಲಿಡಿ, ಈಗಿನ ಪ್ರಧಾನಮಂತ್ರಿಯವರಂತೆ ಉಪವಾಸವಿದ್ದು ರಾತ್ರಿ ಪೂಜೆ ಮುಗಿಸಿಯೇ ಆಹಾರ ಸೇವನೆ ಮಾಡಬೇಕು.

ತಂತ್ರಶಾಸ್ತಗಳ ಮೂಲ ಪುರಾಣಾದಿಗಳು. ವ್ರತ ಕಲ್ಪೋಕ್ತಗಳ ಮೂಲ ತಂತ್ರಶಾಸ್ತ್ರಗಳು. ಅದರಲ್ಲಿರುವಂತೆ ವ್ರತಕಲ್ಪೋಕ್ತಗಳನ್ನು ಆಚರಿಸುವ ಸಾಧಕರು ಮಂಗಲ ಸ್ನಾದಿಗಳನ್ನು ಮಾಡಿಕೊಂಡು ಕುಲಪುರೋಹಿತರನ್ನು ಮುಂದಿಟ್ಟುಕೊಂಡು ಮಧುಪರ್ಕಾದಿ ಗಳನ್ನು ಕೊಟ್ಟು ಋತ್ವಿಗ್ವರಣೆಯನ್ನು ಮಾಡಬೇಕು. ಭದ್ರದೀಪವವನ್ನು ಬೆಳಗಿಸಬೇಕು. ಪುಣ್ಯಾಹವಾಚನವನ್ನು ಮಾಡಬೇಕು.

ಪೂಜಾಂಗವಾಗಿ ವೇದಪಾರಾಯಣ, ಭವಾನೀ ಸಹಸ್ರನಾಮ ಪಾರಾಯಣ, ಚಂಡಿಕಾಪಾರಾಯಣ, ಲಕ್ಷ್ಮೀ ಹೃದಯ ಪಾರಾಯಣ, ಮಾಕಡೇಯ ಪುರಾಣ – ಬ್ರಹ್ಮಾಂಡ ಪುರಾಣ ದೇವಿ ಭಾಗವತಾದಿಗಳ ಪಾರಾಯಣ ಮತ್ತು ಮಂಗಲವಾದ್ಯಗಳು ನಡೆಯುಬೇಕು. ದುರ್ಗಾಹೋಮ, ಶ್ರೀಸೂಕ್ತಹೋಮ, ಚಂಡಿಕಾಯಾಗಾದಿಗಳು ಮತ್ತು ಯಾಗಾಂಗವಾಗಿ ಭೂರಿಭೋಜನಾದಿಗಿರಬೇಕು.

ರಾತ್ರಿಯಲ್ಲಿ ಕುಲಾಚಾರದಂತೆ ನವರಾತರಾವ್ರತಕಲ್ಪೋಕ್ತ ಪೂಜೆಯನ್ನು ಮಾಡಬೇಕು. ಪೂಜೆಯ ಪ್ರತೀ ತಿಥಿ, ವಾರ, ನಕ್ಷತ್ರ, ಯೋಗ ಮತ್ತು ಕರಣಾದಿಗಳಿಗೆ ಪ್ರಪ್ರತ್ಯೆಕವಾದ ಗುಡಾನ್ನ, ಪರಮಾನ್ನ ಕ್ಷೀರಪಾಯಸ, ಅಪೂಪ ಲಡ್ಡುಕ, ಮೋದಕ, ಪಂಚಕಜ್ಜಾಯ ಭಕ್ಷ್ಯ ಭೋಜ್ಯಾದಿಗಳಲ್ಲದೆ, ದ್ರಾಕ್ಷಿ, ಬಾದಾಮಿ, ಉತ್ತುತ್ತಿ, ಖರ್ಜೂರ, ಕಲ್ಲುಸಕ್ಕರೆ, ಬೀಜಾಪೂರಾದಿ ಫಲವಸ್ತುಗಳ ನೈವೇದ್ಯವಾಗಬೇಕು. ಕನ್ನಿಕಾಪೂಜೆ, ಬ್ರಾಹ್ಮಣ ಸುವಸಿನೀ ಆರಾಧನೆ ಈ ಪೂಜೆಯ ಅಂಗವಾಗಿರುವುದು.

ಹೀಗೆ ಮಾಡಿದಲ್ಲಿ ಸಾಂಗೋಪಾಂಗವಾದ ಪೂಜೆಯಾಗುವುದು. ಆಗ ಇಷ್ಟಾರ್ಥ ಸಿದ್ಧಿಸುವುದು.

ಒಂಬತ್ತು ದಿನ ನವರಾತ್ರಾ ವ್ರತಕಲ್ಪೋಕ್ತ ಪೂಜೆಯನ್ನು ಆಚರಿಸಲು ಅಶಕ್ತರಾದವರು ಏಳು ದಿನ ಆಚರಿಸಬಹುದು. ಐದು ದಿನ ಅಥವಾ ಮೂರು ದಿನವಾದರೋ ಆಚರಿಸಬಹುದು. ಅದೂ ಸಾಧ್ಯವಿಲ್ಲದವರು ಅಡಿಕೆ ಕೊಯ್ಯುವವರಿಂದ ಅಡಿಕೆ ಕೊಯಿಸುವಂತೆ ದೇವಸ್ಥಾನಾದಿಗಳಿಗೆ ಹೋಗಿ ಅಲ್ಲಿ ನಡೆಯುವ ನವರಾತ್ರಿ ಪೂಜೆಯಲ್ಲಿ ಭಾಗವಹಿಸಿ ಸೇವೆ ಸಲಿಸಿ ಫಲ ಪಡೆಯಬಹುದು. ಅಂತೂ ಈ ವ್ರತವನ್ನು ಎಲ್ಲರೂ ಆಚರಿಸತಕ್ಕದ್ದು.

ನವರಾತ್ರಿಯ ಪ್ರತಿದಿನಗಳೂ ಪರ್ವದಿನಗಳು. ವಿಶೇಷ ದಿನಗಳು. ಈ ದಿನಗಳಲ್ಲಿ ವಿದ್ಯಾರಂಭ, ವಿವಾಹ, ಗೃಹಪ್ರವೇಶ ಇತ್ಯಾದಿ ಶುಭಾಸವಾರಂಭಗಳನ್ನು ನಡೆಸಿದರೂ ಶುಭಫಲವೇ ಉಂಟಾಗಲಿರುವುದು.

ನವರಾತ್ರಿಯ ಐದನೇ ತಿಥಿಗೆ ಲಲಿತಾಪಂಚಮಿ ಎನ್ನುವರು. ರಾಜರಾಜೇಶ್ವರಿ ತ್ರಿಪುರಸುಂದರೀ ಆರಾದಕರು ಆ ದಿನ ವಿಶೇಷವಾಗಿ ಪೂಜೆ ಮಾಡುವರು. ನವರಾತ್ರಿಯಲ್ಲಿ ಬರುವ ಮೂಲಾನಕ್ಷತ್ರದಂದು ವ್ಯಾಸಪೀಠದಲ್ಲ ವೇದ, ಪುರಾಣ, ಶಾಸ್ತ್ರಗಳನ್ನು ಇಟ್ಟು ಪಟ್ಟೆವಸ್ತ್ರ–ಪುಷ್ಪಾದಿಗಳಿಂದ ಅಲಂಕರಿಸಿ ವಿಶೇಷವಾಗಿ ಸರಸ್ವತೀ ದೇವಿಗೆ ಷೋಡಶೋಪಚಾರ ಊಜೆ ಸಲ್ಲಿಸುವರು. ವೇದ, ಶಾಸ್ತ್ರಾದಿಗಳ ಪಾರಾಯಣ ಪ್ರಾರಂಬಿಸುವರು. ಪುನಃ ಶ್ರವಣ ನಕ್ಷತ್ರದಂದು ಶಾರದಾ ವಿಸರ್ಜನೆ ಮಾಡುವರು.

ನವರಾತ್ರಿಯ ಅಷ್ಟಮಿ ತಿಥಿಯನ್ನು ದುರ್ಗಾಷ್ಟಮಿ ಎನ್ನುವರು. ದೇವಿಪ್ರೀತ್ಯರ್ಥವಾಗಿ ದುರ್ಗಾಹೋಮವನ್ನು ಮಾಡುವರು. ದಕ್ಷಯಜ್ಞ ವಿನಾಶಿನಿಯಾದ ಭದ್ರಕಾಳಿಯು ಪ್ರಾದುಭೂನವಳಾದ ದಿನವಿದು. ಭಗವಾನ್ ಶ್ರೀರಾಮಚಂದ್ರನು ನಾರದರ ಪೌರೋಹಿತ್ಯದಲ್ಲಿ ನವರಾತ್ರಾವ್ರತ ಕಲ್ಪೋಕ್ತವನ್ನು ಸಾಂಗವಾಗಿ ನೆರವೇರಿಸುತ್ತಿರಲು, ಈ ದಿನ ರಾತ್ರಿ ಶ್ರೀದೇವಿಯು ಪ್ರತ್ಯಕ್ಷಳಾಗಿ ಅನುಗ್ರಹಿಸಿದಳು. ರಾವಣನನ್ನು ಸಂಹರಿಸಿ ಪ್ರಕೃತಿಮಾತೆಯಾದ ಸೀತಾದೇವಿಯನ್ನು ಪುನಃ ಪಡೆದು ಅಯೋಧ್ಯಾಧಿಪತಿಯಾಗಿ ಚಕ್ರವರ್ತಿ–ಸಾಮ್ರಾಟನಾಗುವೆ ಎನ್ನುವಳು. ಹಾಗೇ ಆಗುತ್ತದೆ. ಅನಂತರವೇ ಭಗವಾನ್ ಶ್ರೀರಾಮಚಂದ್ರನು ಅಖಂಡ ಭೂಮಂಡಲದಲ್ಲಿ ಸರ್ವವರ್ಣದವರೂ ಈ ನವರಾತಾವ್ರತ ಕಲ್ಪೋಕ್ತವನ್ನು ಆಚರಿಸುವ ವ್ಯವಸ್ಥೆಯನ್ನು ಜಾರಿಗೊಳಿಸುತ್ತಾನೆ.

ನವರಾತ್ರಿಯ ಒಂಬತ್ತನೇ ದಿನವನ್ನು ಮಹಾನವಮಿ ಎನ್ನುತ್ತಾರೆ. ಯಾವ ದಿನವನ್ನು ಆಚರಿಸದವರೂ ಮಹಾನವಮಿಯನ್ನು ಮಾತ್ರ ತಪ್ಪದೆ ಆಚರಿಸುತ್ತಾರೆ. ಶಾಕ್ತರಿನಿ

ಪರಮಪವಿತ್ರವಾದ ದಿನವಿದು. ದೇವಿಯ ಪ್ರೀತ್ಯರ್ಥವಾಗಿ ಚಂಡಿಕಾ ಯೋಗಾದಿಗಳನ್ನು ನಡೆಸಿ ಶ್ರೀದೇವಿಯನ್ನು ಸಂಪ್ರೀತಿಗೊಳಿಸುವರು. ಹೋಮಾಂಗವಾಗಿ ಭೂರಿಭೋಜನಾದಿ ಗಳನ್ನು ನಡೆಸುವರು. ದಾನಗಳಲ್ಲಿ ಅನ್ನದಾನಕ್ಕಿರುವ ಫಲ ಇನ್ನಾವ ದಾನಕ್ಕೂ ಇರುವುದಿಲ್ಲ. ಸಕಲ ಇಷ್ಟಾರ್ಥಗಳ ಸಿದ್ಧಿಗೂ ಇರುವ ಸುಲಭೋಪಾಯವೆಂದರೆ ಅನ್ನದಾನವನ್ನು ನಡೆಸುವುದು.

ಇನ್ನು ನವರಾತ್ರಿಯ ಕೊನೆಯ ದಿನ ಹತ್ತನೇ ದಿನವನ್ನು ವಿಜಯದಶಮಿ ಎನ್ನುವರು. ಆ ದಿನ ಏನನ್ನು ಮಾಡಿದರೂ ವಿಜಯವಾಗುವುದರಲ್ಲಿ ಸಂಶಯವಿಲ್ಲ. ಇದನ್ನು ವಡಿಕೆಯಲ್ಲಿ ದಸರಾ ಎನ್ನುವರು. ಹೆಚ್ಚಿನವರು ಮಕ್ಕಳಿಗೆ ವಿದ್ಯಾರಂಭ ಅಕ್ಷರಾರಂಭವನ್ನು ಮಾಡಿಸುವರು. ಆ ದಿನ ವಿದ್ಯಾರಂಭ ಮಾಡಿಸಿದಲ್ಲಿ ವಿದ್ವಾಂಸರಾಗುವರು. ಶಮೀಪೂಜೆ ಮಾಡುವರು. 'ಶಮೀಶಮಯನೇಪಾಪಂ' ಇದರಿಂದ ದುರಿತದೋಷಗಳೆಲ್ಲ ಪರಿಹಾರವಾಗುವುದು. ಪಾಂಡವರು ಆ ದಿನ ವಿಶೇಷವಾಗಿ ದುರ್ಗಾಪೂಜೆ ಮಾಡಿ ಶಮೀಮರದಲ್ಲಿಟ್ಟ ಆಯುದಗಳಿಗೆ ಪೂಜೆ ಮಾಡಿ ಪುನಃ ಆ ಅಸ್ತ್ರಶಸ್ತ್ರಗಳನ್ನು ಪಡೆದುಕೊಂಡು ಯುದ್ದರಂಗಕ್ಕೆ ಹೋಗಿ ಅಲ್ಲಿ ದುಷ್ಟದುರಯೋಧನಾದಿಗಳನ್ನು ಸಂಹರಿಸಿ ಜಯಶೀಲರಾದರು. ಇಂದೂ ಆ ದಿನದಲ್ಲಿ ವಾಹನ, ಅಸ್ತ್ರ, ಶಸ್ತ್ರಾದಿಗಳಿಗೆ ವಿಶೇಷವಾಗಿ ಪೂಜೆ ಸಲ್ಲಿಸುವರು. ಸಲ್ಲಿಸಿ ರಾಜರದವರು ಸೀಮೋಲ್ಲಂಘನೆ ನಡೆಸುವರು.

ಎಲ್ಲ ವ್ರತಗಳು ಒಂಡೆರಡು ದಿನಗಳಲ್ಲಿ ಮುಗಿದು ಹೋಗುವುದು. ಆದರೆ ಈ ನವರಾತ್ರ ವ್ರತ ಮಾತ್ರ ಒಂಭತ್ತು ದಿನಗಳದ್ದು ಆಗಿರುವುದು. ಆದ್ದರಿಂದ ಇದನ್ನು ವ್ರತಗಳ ರಾಜ ಎನ್ನಬಹುದು. ಈ ವ್ರತರಾಜನನ್ನು ಆಚರಿಸುವುದರಿಂದ ಜಾತಕದಲ್ಲಿರುವ ದಶಾಂತರ್ದಶಾಗೋಚರ ದೋಷಗಳೆಲ್ಲ ಪರಿಹಾರವಾಗುವುದು. ಮನೆಯಲ್ಲಿ ದಾರಿದ್ರ ದೋಷಗಳು ಪರಿಹಾರವಾಗಿ ಧನದಾನ್ಯಾದಿಗಳು ಸಮೃದ್ಧಿಯಾಗಿ ಸುಖಶಾಂತಿಗಳು ಉಂಟಾಗಲಿರುವುದು. ಧರ್ಮಾರ್ಥಾನದಿ ಪುರುಷಾರ್ಥ ಚತುಷ್ಟಯಗಳು ಸಿದ್ಧಿಸುವುದು. ಒಟ್ಟಿನಲ್ಲಿ ಸಮಸ್ತಲೋಕಕ್ಕೆ ಸುಭಿಕ್ಷೆ ಉಂಟಾಗಲಿರುವುದು.

ಶುಭಂಭೂಯಾತ್

ಜಾಹಿರಾತು

# ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ

**# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,**
**ಬ್ಯಾಂಕ್ ಕಾಲೋನಿ, ಬೆಂಗಳೂರು-560 050.**

## ಸ್ಥಳದ ಬಾಡಿಗೆ ಇರುವುದಿಲ್ಲ

**ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,**
**ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,**
**ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು**
**ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.**
**ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.**
**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**
**ದೂರವಾಣಿ : 080-26793054 ಮೊಬೈಲ್ 8277433666**

ಶ್ರೀಃ
ಶ್ರೀಗುರುಃ ಶರಣಂ

# ದೀಪಾವಳಿಯ ಮುನ್ಸೂಚನೆಯ ಸುಳಿಯಲ್ಲಿ

ಹಿತ್ಲಳ್ಳಿ ಸೂರ್ಯನಾರಾಯಣ ನಾಗೇಂದ್ರ ಭಟ್ಟ

ಆಹಾ, ದೀಪಾವಳಿ ಇನೊಮ್ಮೆ ಬರುತ್ತಿದೆ. ದಸರೆಯ ಸವಿಯಿನೂ ಹಸಿರಾಗಿರುವಾಗಲೇ ಬೆಳಕಿನ ಹಬ್ಬದ ಕರೆ ಎಲ್ಲೆಲ್ಲಿಯೂ ನೆಂಟರೇ ತುಂಬಿರುವ ಊರಿನಿಂದ ಬರತೊಡಗಿದೆ. ಹಾಗೆ ನೋಡಿದರೆ ಮೈಸೂರಿನ ದಸರೆಗೆ ಹೋಗಿರುವ ನಮಗೆ ವಿದ್ಯುದ್ದೀಪಮಾಲೆಯ ಮೂಲಕ ದೀಪಾವಳಿಯ ಸಾಕ್ಷಾತ್ಕಾರವೇನೋ ಆಗಿದೆ. ಆದರೂ ವರ್ಷಕ್ಕೊಮ್ಮೆ ಬರುವ ಈ ದೀಪಾವಳಿಯ ಸೊಗಸೇ ಬೇರೆ. ಅಲ್ಲಿ ದೀಪಗಳ ಸಾಲಿಗಿಂತಲೂ ವಿವಿಧ ವಿನೋದಾವಳಿಯೇ ಹೆಚ್ಚಾಗಿ ಹೊರಹೊಮ್ಮುತ್ತದೆ. ಅದಕ್ಕಾಗಿಯೇ ರಜೆಗಳ ಲೆಕ್ಕಾಚಾರ ಉದ್ಯೋಗಿಗಳ ಮನಸ್ಸಿನಲ್ಲಿ ಕುಣಿಯುತ್ತಿರುತ್ತದೆ.

ನಮ್ಮ ಗುರುಗಳು ಹೇಳುತ್ತಿದ್ದರು – ನಮ್ಮೆಲ್ಲರ ತಂದೆ ಬಂದರೆ, ಅದು ಜಯಂತಿಯ ಒಂದು ದಿನ ಮಾತ್ರ. ಹೀಗೆ ಬಂದು ಹಾಗೆ ಹೋಗಿಬಿಡುತ್ತದೆ. ಆದರೆ ಜಗಜ್ಜನನಿ ಬಂದರೆ ಮುಗಿದೇ ಹೋಯಿತು. ಬಂದು ಕುಳಿತು ಬಿಡುತ್ತಾಳೆ. ನಮ್ಮೆಲ್ಲರ ಯೋಗ – ಕ್ಷೇಮದ ಚಿಂತೆಯಲ್ಲಿ ಮೈಮರೆತು ಹತ್ತು ದಿನಗಳ ವರೆಗೂ ಹೋಗುವುದೇ ಇಲ್ಲ. ಆ ಪೂಜೆ, ಆ ಪಾರಾಯಣ – ಒಂದೆರಡು ದಿನಗಳಲ್ಲಿ ಮುಗಿಯುವುದಿಲ್ಲ. ಅವಳನು ಚಾಚೂ ತಪ್ಪದೆ ಉಪಚರಿಸುವಾಗ ಸಾಕುಬೇಕಾಗುತ್ತದೆ. ಆ ಆಯಾಸವಿನ್ನೂ ತಣಿಯದಿರುವಾಗಲೇ ನಮ್ಮ ಗದ್ದೆ – ತೋಟಗಳಲ್ಲಿ ಪೂಜೆ ಗೈಯ್ಯುವ ಭೂಮಿಹುಣ್ಣಿಮೆ ಯಾರ ಗಮನಕ್ಕೂ ಬಾರದೆ ಕಳೆದು ಹೋಗುತ್ತದೆ. ಹಾಗಾದರೂ ಸಿಹಿಗುಂಬಳವೆಂಬ ಗೋವೇಕಾಯಿಯ ಕಡುಬಿನ ಸವಿಯನು ಮರೆಯಲಾಗದು.

ಈ ದೀಪಾವಳಿಯೆಂಬ ಸಂಭ್ರಮದಲ್ಲಿ ಮಂತ್ರಕ್ಕಿಂತ ಉಗುಳು ಹೆಚ್ಚು. ಅಂದರೆ ಇಲ್ಲಿ ಪೂಜೆಯೆಂಬುದು ಇಲ್ಲವೇ ಇಲ್ಲ ಎನ್ನಲಾಗದಿದ್ದರೂ, ಅದು ಹೆಸರಿಗೆ ಮಾತ್ರ. ಪೂಜೆಗಿಂತಲೂ ಪುನಸ್ಕಾರವೇ ಹೆಚ್ಚು. ಮನೆಯಲ್ಲಿಯೇ ಇರುವ ಖಜಾನೆಯ ವೈಭವವನ್ನು ತೆರೆದಿಟ್ಟು ಪೂಜೆಯ ಶಾಸ್ತ್ರ ಮಾಡಿದರೆ ಮುಗಿಯಿತು. ಅದರ ಜೊತೆಗೆ ಸವತೆಕಾಯಿಯ ಉಪ್ಪು – ಮೆಣಸು ಕೊಡಲೇಬೇಕು. ಅದಲ್ಲದಿದ್ದರೆ ಈಗಿನ ರೂಢಿಯಂತೆ ಕೋಸುಂಬರಿಯೋ ಮಂಡಕ್ಕಿಯೋ ಆದರೂ ಆದೀತು. ಒಟ್ಟಿನಲ್ಲಿ ಎಲ್ಲರ ಮನ ತಣಿಸುವ ಕಾರ್ಯಕ್ರಮ ಅದಾಗಬೇಕು.

ಇಲ್ಲಿಯೇ ಇನೊಂದು ವಿಶೇಷವನ್ನು ನೆನಪಿಸಲೇ ಬೇಕು. ಅದು ಬೂರೆ ಹಬ್ಬವೆಂಬ ಕಳುವಿನ ಅಣುಕು. ಅಲ್ಲಿ ಕಳುವವರು ಕಳ್ಳರಲ್ಲ. ಕದ್ದದ್ದು ಕಳೆದುಹೋಗುವುದೂ ಇಲ್ಲ. ಅದನು ತಪ್ಪಿಸಿಕೊಳ್ಳಲು ಹರಸಾಹಸ ಮಾಡಬೇಕಾಗುತ್ತದೆ. ಈಗಿನ ಎಪ್ರಿಲ್ ಫೂಲ್ ಮಾದರಿಯಲ್ಲಿ ನಡೆಯುವ ಆ ತಮಾಶೆಗೆ ಒಂದು ಉದಾಹರಣೆ – ಮಣೆಗಳನೆಲ್ಲಾ ಮಡಿಯಾಗಿಸಲು ತೊಳೆದು, ನೀರು ಬಸಿಯಲೆಂದು ಅಲ್ಲಿಯೇ ಹೊರಗೆ ಇಟ್ಟಿರುವಾಗ, ನೆರೆಮನೆಯಾಕೆ ಹೇಗೋ ಬಂದು ಯಾರಿಗೂ ಕಾಣದಂತೆ ಅವುಗಳನ್ನು ಒಯ್ದು, ತನ ಮನೆಯ ಕತ್ತಲಗೂಡಿನಲ್ಲಿ ಇಟ್ಟದ್ದು ಗೊತ್ತೇ ಆಗದೆ, ಊಟ ಮುಗಿದ ಮೇಲೆ ಆ ಮಣೆಗಳೆಲ್ಲಾ ಸಿಕ್ಕಿ ನಗುವಿನ ಹೊನಲನ್ನು ಹುಟ್ಟಿಸುವುದು ಈಗಿನವರಿಗೆ ತಿಳಿಯದ ಮಾತು. ಈ ಕಳುವಲ್ಲದ ಕಳುವು ಎಣ್ಣೆ ಹಚ್ಚಿಕೊಂಡು ಸಾನ ಮಾಡುವುದರೊಳಗೆ ಮುಗಿಯಬೇಕಂತೆ. ಅದರಿಂದ ದೀಪಾವಳಿಯ ದೇವರಾದ ಕಳ್ಳರ ಕಳ್ಳ ಶ್ರೀಕೃಷ್ಣನಿಗೆ ಸಂತೋಷವಾಗುವುದಂತೆ. ಹಾಗಾದರೂ ರಾತ್ರಿಯ ವೇಳೆ ಕೆಲವರು ಕಳ್ಳರು ನಿಜವಾಗಿಯೇ ಕದಿಯುವುದುಂಟು. ಸಿಕ್ಕಿಬಿದ್ದು ಒದೆ ತಿನುವುದೂ ಉಂಟು. ನರಕಚತುರ್ದಶಿಯೆಂಬ ಬೂರೆ ಹಬ್ಬವನ್ನು ಕಳ್ಳರ ದಿನವೆಂದು ಕರೆಯಬಹುದೇನೋ.

ಎಣ್ಣೆ ಹಚ್ಚಿಕೊಳ್ಳುವುದು ಎಂದರೆ, ಸಂಸ್ಕೃತದಲ್ಲಿ ಅಭ್ಯಂಜನ. ಅದನು ಮಾಡದಿದ್ದರೆ ಮೈಯೆಲ್ಲಾ ಬೂರಸಲು ಬಂದು ಬೂದಿಯ ಬಣ್ಣಕ್ಕೆ ತಿರುಗಿ ಬಿಡುತ್ತದೆ ಎಂದು ಅಜ್ಜಿಯು ಹೇಳುವುದನ್ನು ಕೇಳಿ, ಅದನ್ನು ಹೌದೆಂದು ನಂಬಿ, ಮನಸ್ಸಿಗೆ ಬೇಡವಾದರೂ ಎಣ್ಣೆ ಹಚ್ಚಿಕೊಳ್ಳುವಂತಾಗುತ್ತದೆ. ಅದಲ್ಲದಿದ್ದರೆ ನರಕಕ್ಕೆ ಟಿಕೆಟ್ಟು ಗ್ಯಾರಂಟಿ ಎಂದ ಮೇಲೆ ಯಾವಾಗಲೂ ಎಣ್ಣೆಯೆಂದರೆ ದೂರ ಓಡುವವರು, ತಾವಾಗಿಯೇ ನೆನಪಿಸಿಕೊಂಡು ತಲೆ ಕಿವಿ ಕೈಗಳು ಕಾಲುಗಳು – ಹೀಗೆ ಎಲ್ಲಾ ಅಂಗಗಳಿಗೂ ಸರಿಯಾಗಿಯೇ ಎಣ್ಣೆ ಸವರಿಕೊಂಡು, ಅದು ಆರುವ ಮೊದಲೇ ಬಚ್ಚಲಿಗೆ ಹೋಗಿ, ಶಿಂಡ್ಲೆಯ ಬಳ್ಳಿಯಿಂದ ಅಲಂಕರಿಸಿದ ಹಂಡೆಯಿಂದ ಬಿಸಿ ನೀರನ್ನು ಸುರಿದುಕೊಳ್ಳುವುದನು ನೋಡಿದರೆ, ಆಹಾ, ವರ್ಷಕ್ಕೊಮ್ಮೆಯಾದರೂ ಆ ಬೊಮ್ಮನ ಗಡಿಗೆಗೆ ಎಣ್ಣೆಯ ಭಾಗ್ಯ ಲಭಿಸಿತು ಎಂದು ಕೊಳ್ಳುತ್ತಿದ್ದೆವು.

ಇಲ್ಲಿಯೇ ಇರುವ ಇನ್ನೊಂದು ವಿಶೇಷವೆಂದರೆ, ಬೂರೆಕಪ್ಪು. ಹಣೆಯನ್ನು ಬರಿದಾಗಿ ಇಟ್ಟುಕೊಳ್ಳುವವರೂ ಆ ದಿನ ಕಪ್ಪು ಇಟ್ಟುಕೊಳ್ಳಲೇಬೇಕು. ಅದನು ಅದೇ ಅಲಂಕೃತ ಹರಿವೆಯ ಕೆಳಗೆ ಇರುವ ಬೆಂಕಿಯಲ್ಲಿ ಶಿಂಡ್ಲೆಯ ಎಲೆಯಿಂದ ಬೂರೆಹಬ್ಬದ ಸಂಜೆಯೇ ತಯಾರಿಸುತ್ತಾರೆ. ಅದನ್ನು ಹಚ್ಚಿಕೊಂಡ ಮೇಲೆ ಎಲ್ಲರೂ ಆಗ ತಾನೇ ವೈಶ್ವದೇವ ಮುಗಿಸಿದ ಯಜಮಾನನಂತೆ ಕಾಣುತ್ತಾರೆ. ಅದನ್ನು ನೋಡುವಾಗ ಒಂದು ಬಗೆಯ ಆನಂದವಾಗುತ್ತದೆ.

ಈ ದೊಡ್ಡಹಬ್ಬದಲ್ಲಿ ಸಣ್ಣದಾದ ಸವತೆಯ ಮಿಳ್ಳೆಯನ್ನೇ ಹೋಲುವ, ಅತ್ಯಂತ ಕಹಿಯಾದ ಶಿಂಡ್ಲೆಬಳ್ಳಿ – ಕಾಯಿಗಳಿಗೆ ಎಲ್ಲಿಲ್ಲದ ಮಹತ್ವ ಬರುತ್ತಿತ್ತು. ನಮ್ಮ ಪುಣ್ಯ, ಸದ್ಯ ಅದರಿಂದ ಪಲ್ಲೆ ಸಾರು ಹಶಿ ಮುಂತಾದ ಪದಾರ್ಥಗಳನ್ನು ಮಾಡುವುದಿಲ್ಲ. ಆದರೆ ಆ ಕಾಯಿಗಳನ್ನು ಎರಡು ಹೋಳು ಮಾಡಿ ಅದರಲ್ಲಿ ಹಿಡಿಯ ಕಡ್ಡಿಗಳನ್ನು ಸಿಕ್ಕಿಸಿ, ಆ ಕಡ್ಡಿಗಳ ತುದಿಯಲ್ಲಿ ಅರಿವೆ ಸುತ್ತಿ, ಎಣ್ಣೆಯಲ್ಲಿ ಮುಳುಗಿಸಿ, ಗೋಪೂಜೆಯ ಸಮಯದಲ್ಲಿ ಗೋವುಗಳಿಗೆ ದೊಂದಿಯ ಮಂಗಳಾರತಿಯನ್ನು ಮಾಡುತ್ತಿದ್ದರು. ಅಷ್ಟೇ ಅಲ್ಲ, ಅವು ಸಂಜೆ ಮರಳಿ ಬಂದ ಮೇಲೆಯೂ ಯಾರೋ ಹಿಂದಿನವರು ಬರೆದ ಹಾಡು ಹೇಳುವ ಹೆಂಗಳೆಯರು ದೃಷ್ಟಿ ತೆಗೆಯುವ ಶಾಸ್ತ್ರ ಮಾಡುತ್ತಿದ್ದರು. ಇನೊಮ್ಮೆ ಶಿಂಡ್ಲೆಕಾಯಿಯ ದೀಪಗಳ ನೀರಾಜನ. ಅಂದಿನ ದಿನ ನಮಗೆಲ್ಲಾ ಹೊಸ ಬಟ್ಟೆಯಿರುವಂತೆ, ಹಸುಗಳಿಗೂ ಎಮ್ಮೆಗಳಿಗೂ ದಾವು ಎಂಬ ಹೆಸರಿನ ಹೊಸ ಹಗ್ಗವಿರುತ್ತದೆ. ಹಬ್ಬಕ್ಕಾಗಿ ಅವುಗಳ ಮೇಲೆ ಹೊಯ್ದ ಬೆಚ್ಚಿನ ಬಣ್ಣ ಹಾಗೆಯೇ ಇರುತ್ತದೆ.

ಗೊಂಡೇರ ಹೂವಿಗೂ ಈ ಹಬ್ಬದಲ್ಲಿ ಎಲ್ಲಿಲ್ಲದ ಬೇಡಿಕೆ. ಉತ್ತರ ಭಾರತದಲ್ಲಿ ಆ ಹೂಗಳನ್ನು ಮಾಲೆ ಮಾಡಿ ಅತಿಥಿ – ಅಭ್ಯಾಗತರಿಗೆ ಸಭೆ – ಸಮಾರಂಭಗಳಲ್ಲಿ ಹಾಕುವುದುಂಟು. ಆದರೆ ನಮ್ಮ ಕನಡ ಜಿಲ್ಲೆಯಲ್ಲಿ ಅದನು ಪ್ರಸಾದವಾಗಿಯೂ ಸ್ವೀಕರಿಸುವುದಿಲ್ಲ. ಎತ್ತುಗಳನ್ನು ಅವುಗಳಿಂದ ವಿಭಿನವಾಗಿ ಅಲಂಕರಿಸಿ ತಟ್ಟೆಯ ಕಟ್ಟಿ ಚೌಲವನ್ನು ಕುಣಿಸುತ್ತಿದ್ದರು. ಈಗ ಹೆಚ್ಚಿನ ಜನರಿಗೆ ಇದೆಲ್ಲಾ ಮರೆತೇ ಹೋಗಿದೆ. ಗೋಪೂಜೆಯಾದ ಮೇಲೆ, ಉಪಾಹಾರದ ಮಾದರಿಯಲ್ಲಿ ಒಂದು ಸಣ್ಣ ಊಟ ಮಾಡಿ, ದನಬೈಲಿಗೆ ಹೋಗಿ ಜನಜಂಗುಳಿಯ ನಡುವೆ ಎತ್ತುಗಳನ್ನು ಕುಣಿಸುವುದೇ ಒಂದು ಬಗೆಯ ಮೋಜಿನ ಸಂಗತಿಯಾಗಿತ್ತು.

ವಿಷ್ಣುವು ವಾಮನನಾಗಿ ಬಲಿ ಚಕ್ರವರ್ತಿಯನ್ನು ಪಾತಾಳಕ್ಕೆ ಅಟ್ಟಿದ ಮೇಲೆ ಒಂದು ವರವನ್ನು ಕೊಟ್ಟ. ಆ ವರದ ಪ್ರಕಾರ ಬಲೀಂದ್ರನು ಮೂರು ದಿನಗಳ ಕಾಲ ಭೂಮಿಗೆ ಬರಬಹುದು. ಬಲೀಂದ್ರನು ಕೇಳಿದ : ನಾನು ಬಂದ ಸಮಯದಲ್ಲಿ ಭೂಮಿಯು ಸಮೃದ್ಧವಾಗಿರಬೇಕು. ಜನರೆಲ್ಲರೂ ಸಂತಸ ಸಡಗರದಿಂದ ಹಬ್ಬವನ್ನು ಆಚರಿಸಬೇಕು. ವಿಷ್ಣು ಒಪ್ಪಿದ. ಬಲೀಂದ್ರನ ಪೂಜೆ ಸಡಗರದಿಂದ ನಡೆಯುತ್ತಿದೆ.

ದೀಪಾವಳಿಯು ಒಂದೊಂದು ಪ್ರಾಂತದಲ್ಲಿ ಒಂದೊಂದು ಬಗೆಯಾಗಿದೆ. ನಮ್ಮ ಕನಡನಾಡಿನಲ್ಲಿಯೇ ಅದನು ಚತುರ್ದಶಿಯಿಂದ ಪಾಡ್ಯದ ವರೆಗೆ ಆಚರಿಸುತ್ತಾರೆ. ಪಾಡ್ಯದ ಬದಲಾಗಿ ಎರಡು ದಿನ ಬಿಟ್ಟು ಹೆಚ್ಚುಪಾಡ್ಯವೆಂದು ಆಚರಿಸುವುದೂ ಉಂಟು. ಪಾಡ್ಯದ ಹಬ್ಬವನ್ನು ಹತ್ತು – ಹನೆರಡು ದಿನ ಕಳೆದು ಕಾರ್ತಿಕ ಹುಣ್ಣಿಮೆಯ ದಿನ ಮಾಡುವವರೂ ಇದ್ದಾರೆ. ಇದೇಕೆ ಹೀಗೆ ಎಂಬ ಪ್ರಶೆಯೊಂದು ಆಧುನಿಕರಿಗೆ ಉದ್ಭವಿಸಿದರೆ, ಅವರನ್ನು ಸುಮ್ಮನಾಗಿಸಲು ಕಥೆಯೊಂದು ಸಾಕಾಗುತ್ತದೆ. ಪಾಡ್ಯದ ದೊಡ್ಡಹಬ್ಬಕ್ಕೆ ರಾಜಪಾಡ್ಯವೆಂದೇ ಹೆಸರು. ರಾಜಪಾಡ್ಯವನು ವೈಭವದಿಂದ ಆಚರಿಸಲು ಪ್ರಜೆಗಳಲ್ಲಿ ಕೆಲವರು ಅರಮನೆಗೆ ಹೋಗಬೇಕಾಗಿತ್ತು. ಅಲ್ಲಿಂದ ಬಂದು ಎರಡು

ದಿನಗಳಾದ ಮೇಲೆ, ಹಬ್ಬವನ್ನು ಮಾಡುವುದೇ ಹೆಚ್ಚುಪಾಡ್ಯವಂತೆ.

ಆಗಲಿ. ಹುಣ್ಣಿಮೆಯ ಹಬ್ಬವೇತಕ್ಕೆ ಎಂಬ ಸಂದೇಹಕ್ಕೆ ಸಮಾಧಾನ ಹೀಗಿದೆ. ಒಮ್ಮೆ ರಾಜ್ಯಪಾಡ್ಯ ಮುಗಿದ ಮೇಲೆ ಹೆಚ್ಚುಪಾಡ್ಯ ಮಾಡಲು ದನಗಳೇ ಸಿಗಲಿಲ್ಲವಂತೆ. ಕಾಡಿಗೆ ಮೇಯಲು ಹೋದ ಹಸುಗಳು ಅಂದು ಮರಳಿ ಬರಲೇ ಇಲ್ಲ. ಅವುಗಳನ್ನು ಹುಡುಕಿ ಕೊಂಡು ಬರಲು ಕೆಲವು ದಿನಗಳೇ ಬೇಕಾದವು. ಹಬ್ಬವನು ಮಾಡಲಾಗಲಿಲ್ಲವಲ್ಲ ಎಂಬ ಧರ್ಮ ಸಂಕಟದಿಂದ ವಿಷಯವನ್ನು ರಾಜರಿಗೆ ನಿವೇದಿಸಲಾಯಿತು. ರಾಜರು ಪುರೋಹಿತರ ಹೇಳಿಕೆಯಂತೆ, ಕಾರ್ತಿಕ ಹುಣ್ಣಿಮೆಯ ದಿನ ಹಬ್ಬ ಮಾಡುವಂತೆ ಆಜ್ಞಾಪಿಸಿದರಂತೆ.

ರಾಜರ ಕಾಲವಾಗಿ ಹೋಯಿತು, ಈಗ ಪ್ರಜಾರಾಜ್ಯ ಬಂದಿದೆ, ಈಗ ಮೊದಲಿನಂತೆ ಗೋವಿನ ಪಾಡ್ಯವನು ಆಚರಿಸಬಾರದೇಕೆ ಎಂಬ ಪ್ರಶ್ನೆಗೆ ಉತ್ತರವಾಗಿ ಹೀಗೆ ಹೇಳುವುದುಂಟು. ಪಾಡ್ಯದ ದೀಪಾವಳಿಗೆ ನೆಂಟರಿಷ್ಟರನು ಕರೆದರೂ ಅವರ ಮನೆಯ ಹಬ್ಬವನ್ನು ಬಿಟ್ಟು ಅವರು ಬರಲಾರರು. ಎಲ್ಲರೂ ಬರಬೇಕೆಂದರೆ, ಹೆಚ್ಚುಪಾಡ್ಯ ಅನಿವಾರ್ಯ. ಅದಲ್ಲದೆ ಇನೊಂದು ಕಾರಣವೂ ಉಂಟು. ಆ ವರ್ಷವೇ ಮದುವೆಯಾದ ಸೀಮೆಯ ಹೊಸದಂಪತಿಗಳೆಲ್ಲರೂ ಹೆಚ್ಚುಪಾಡ್ಯದ ಊರಿಗೆ ಬಂದು ದೇವರಿಗೆ ಕಾಯಿ ಇಡುವ ರೂಢಿಯಿದೆ. ರಾಜಪಾಡ್ಯದ ದಿನ ಅವರಿಗೆ ಮಾವನ ಮನೆಯಲ್ಲಿ ಹಬ್ಬಗಾಣಿಕೆಯಿರುತ್ತದೆ. ಅದನು ಬಿಟ್ಟುಬಿಡಲಾಗದು. ಅವರ ಅನುಕೂಲ ವನ್ನು ಕಡೆಗಣಿಸಿ, ಹಿಂದಿನಿಂದ ಬಂದ ರೂಢಿಯನ್ನು ಈಗ ಬದಲಾಯಿಸಲಾಗದು. ಒಂದುವೇಳೆ ಅದನು ಬದಲಾಯಿಸಿ ಅನರ್ಥವೇನಾದರೂ ಆದರೆ, ಅದಕ್ಕೆ ಜವಾಬ್ದಾರರಾಗಲು ಯಾರೂ ಸಿದ್ಧರಿಲ್ಲ.

ಹೆಚ್ಚುಪಾಡ್ಯದ ರಂಗಪೂಜೆಯನು ಸ್ಮರಿಸದಿದ್ದರೆ ಮುಖ್ಯವಾದ ವಿಷಯವನ್ನೇ ಬಿಟ್ಟಂತಾಗುತ್ತದೆ. ಹಿಂದೆ ರಂಗಪೂಜೆ ಅತ್ಯಂತ ವಿಜೃಂಭಣೆಯಿಂದ ನಡೆಯುತ್ತಿತ್ತು ಎಂದು ಹೆಚ್ಚು ವಯಸ್ಸಾದವರು ಹೇಳುತ್ತಾರೆ. ಏನು ಈ ರಂಗಪೂಜೆ ಎಂದರೆ, ಊರಿನ ದೇವಸ್ಥಾನದಲ್ಲಿ ಎಲ್ಲರೂ ಸೇರಿ, ದೇವರಿಗೆ ರಾಜೋಪಚಾರ ಮಾಡುತ್ತಾರೆ. ಆಗ ಅಷ್ಟಾವಧಾನವೆಂಬ ಸೇವೆ ನಡೆಯುತ್ತದೆ. ಅಲ್ಲಿ ವೇದ, ಶಾಸ್ತ್ರ, ಪುರಾಣಗಳ ಸೇವೆಗಿಂತಲೂ ಸಂಗೀತಸೇವೆ ವಿಶೇಷವಾಗಿರುತ್ತಿತ್ತು. ಭಾಗವತರು ದೇವರ ಮೇಲಿನ ಪದ್ಯಗಳನ್ನು ಹೇಳಲು ಆರಂಭಿಸಿದರೆ, ಅದು ಎಂದು ಮುಗಿಯುವುದೆಂದು ಕಾಯುತ್ತಾ ಕುಳಿತು ಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತಿತ್ತು. ಅದು ಮುಗಿದ ಮೇಲೆ ಸುತ್ತುಪೂಜೆ ಮುಗಿಸಿ ಊಟ ಮಾಡುವಾಗ ಸಂಜೆಯೇ ಆಗುತ್ತಿತ್ತು.

ಸುತ್ತುಪೂಜೆಯ ಬಗ್ಗೆ ಒಂದು ಮಾತನ್ನು ಇಲ್ಲಿ ಹೇಳಲೇ ಬೇಕು. ಹಬ್ಬದ ದಿನ ಗೋಪೂಜೆಗೆ ಮೊದಲು ಹುಲಿಯಪ್ಪನ ಪೂಜೆಯಿರುವಂತೆ, ರಂಗಪೂಜೆಯಾದ ಮೇಲೆ ಮನೆಯಲ್ಲಿ ಅನೇಕ ಪೂಜೆಗಳು ನಡೆಯುತ್ತವೆ. ಹಾಲುಕೋಣೆ ಕಡಗಲು ಆಯುಧಾಗಾರ ಧಾನ್ಯಾಗಾರ ಅಥವಾ ಕಣಜ ತುಳಸಿಪೀಠ ಚೌಡಿಬಾವಿ ಮುಂತಾದ ಪೂಜೆಗಳನು ಚುಟುಕಾಗಿಯಾದರೂ ಮಾಡಲೇಬೇಕು. ಆ ಹೊತ್ತಿನಲ್ಲಿ ಮಕ್ಕಳು ಶಂಖವೂದುತ್ತಾ ಜಾಗಟೆ ಬಾರಿಸುತ್ತಾ ಅದರಲ್ಲಿ ಭಾಗವಹಿಸಲೇಬೇಕು. ಅದೆಲ್ಲಾ ಮುಗಿದು ಹೋಳಿಗೆಯ ಊಟವಾದ ಮೇಲೆ, ವಿವಿಧ ವಿನೋದಾವಳಿ ನಡೆಯುತ್ತಿರುವಾಗ ಅಂಗಳದಲ್ಲಿ ಸದ್ದಾಗುತ್ತದೆ. ಅಲ್ಲಿ ೮ – ೧೦ ಜನರು ಕೋಲಾಟ ಕುಣಿಯಲು ಬಂದಿರುತ್ತಾರೆ. ಗಣಪತಿ ಗಣೂರಾಯ್ಗೆ ಮುಗಿದಾನಕ್ಕಯ್ಯ ... ಎಂದು ಮುಂತಾಗಿ ಒಬ್ಬನು ಹೇಳಿಕೊಟ್ಟಂತೆ ಉಳಿದವರು ತಾಳ – ಲಯಗಳಿಗೆ ಸರಿಯಾಗಿ ಕೂಗುತ್ತಾ ಕೋಲಾಟವಾಡುತ್ತಾರೆ. ಅದಕ್ಕೆ ಪ್ರತಿಯಾಗಿ ಕಾಣಿಕೆಯನೂ ಪಡೆಯುತ್ತಾರೆ.

ಇಷ್ಟಾದರೂ ಹಬ್ಬದ ಸಂಭ್ರಮ ಮುಗಿಯುವುದಿಲ್ಲ. ಅದು ಮರುಹಬ್ಬದ ದಿನಕ್ಕೂ ಮುಂದುವರೆಯುತ್ತದೆ. ಕಣ್ಣು ಕಟ್ಟಿಕೊಂಡು ಕಾಯಿ ಒಡೆಯುವುದು, ಈಗಿನ ಕ್ರಿಕೆಟ್ ಮಾದರಿಯ ಹಣೆಗಿಂಡು ಆಡುವುದು ಮುಂತಾದವುಗಳು ಆ ದಿನದ ವಿಶೇಷತೆ. ಅವುಗಳಲ್ಲೆಲ್ಲಾ ತನ್ಮಯತೆಯುಂಟಾದರೆ ಶಾಲೆಗೆ ಮರಳಿ ಹೋಗಲು ಮಕ್ಕಳಿಗೆ ಮನಸ್ಸು ಬಾರದಿರುವುದಿರಲಿ, ದೊಡ್ಡವರಿಗೂ ಉದ್ಯೋಗಕ್ಕೆ ಹೋಗುವ ವಿಚಾರವೇ ಬರುವುದಿಲ್ಲ. ಆಹಾ, ದೊಡ್ಡಹಬ್ಬ ಮತ್ತೆ ಬಂತು.

ಜಾಹಿರಾತು

ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ

Sri Srinivasa Nilaya Dharmika Sabha Mandira

ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ
ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085

ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.

ಸ್ಥಳದ ಬಾಡಿಗೆ ಇರುವುದಿಲ್ಲ.

ದಕ್ಷಿಣ ಮತ್ತು ಉತ್ತರ ಭಾರತದ
ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು
ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ
ದೂರವಾಣಿ : 2672 2267, 98866 55755



# ದಾಸರ ಲಕ್ಷ್ಮೀನಾರಾಯಣರಾಯರು

ಸುರೇಶ್ ಮೂನ

ಡಾ. ಅನಂತಪದ್ಮನಾಭರಾವ್ ಸಂಪಾದಿಸಿರುವ ಸಮಗ್ರದಾಸ ಸಾಹಿತ್ಯದ 27ನೇ ಸಂಪುಟದಲ್ಲಿ ಬೆಂಗಳೂರಿನ ಕೆಲವು ಹರಿದಾಸರ ಪರಿಚಯವಿದ್ದು ಅವರುಗಳ ಕೀರ್ತನೆಗಳ ಸಂಗ್ರಹವನ್ನೂ ಅದರಲ್ಲಿ ನೀಡಲಾಗಿದೆ.

ಅವರುಗಳಲ್ಲಿ ಒಬ್ಬರು ದಾಸರ ಲಕ್ಷ್ಮೀನಾರಾಯಣ ರಾರು. ಇವರ ತಂದೆ ಬಾಲಕೃಷ್ಣದಾಸರು ಮತ್ತು ಅವರಸಹೋದರರು ಮೈಸೂರು ಮಹಾರಾಜ ಚಾಮರಾಜ ಒಡೆಯರ ಸಮ್ಮುಖದಲ್ಲಿ ಕಥಾಕೀರ್ತನೆಯನ್ನು ಮಾಡಿ ಅವರಿಂದರೇಷ್ಮೆ ಅಂಗಿಗಳನ್ನು ತೊಡಿಸಿಕೊಂಡ ಗೌರವಕ್ಕೆ ಪಾತ್ರರಾಗಿದ್ದವರು. ಹೀಗೆ, ವಿದ್ವತ್ತಿನ ಹಿನ್ನೆಲೆಯನ್ನು ಹೊಂದಿದ್ದ ಲಕ್ಷ್ಮೀನಾರಾಯಣರಾಯರು ಬೆಂಗಳೂರಿನ ಕೋಟೆ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ ಆಗಿನ ಮೆಟ್ರಿಕ್ಯುಲೇಶನ್ ಪರಿಕ್ಷೆಯಲ್ಲಿ ತೇರ್ಗಡೆಯಾದರು. ಚಿಕ್ಕಂದಿನಲ್ಲೇ ಸಾಹಿತ್ಯ ಕೃಷಿಗೆ ಕೈಹಾಕಿದರೂ ಮುಂದೆ ಆರ್ಥಿಕ ಒತ್ತಡದಿಂದಾಗಿ ರಾಜಮಿಲ್ಲಿನಲ್ಲಿ ಕೆಲಸಕ್ಕೆ ಸೇರಬೇಕಾಯಿತು. ಆನಂತರ ಕೆಲವು ವರ್ಷಗಳಕಾಲ ರೇಲ್ವೆ ಇಲಾಖೆಯಲ್ಲಿ ಕೆಲಸ ಮಾಡಿದರು. ಆದರೆ ಯಾರೋ ಮಾಡಿದ ತಪ್ಪು ಇವರ ತಲೆಗೆ ಬಂದಿದ್ದರಿಂದ ಆ ದಂಡವನ್ನು ಕಟ್ಟಿ ಕೆಲಸಕ್ಕೆ ರಾಜಿನಾಮೆಯನ್ನು ನೀಡಿ ಇನ್ನೆಂದೂ ಯಾರ ಹಂಗಿನಲ್ಲೂ ಬದುಕುವುದಿಲ್ಲ, ನನ್ನ ಬದುಕೆಲ್ಲ ಹರಿ ಸೇವೆಗೆ ಮೀಸಲು ಎಂದು ಪ್ರಮಾಣಮಾಡಿ ಮುಂದೆ ಜೀವನ ನಿರ್ವಹಣೆಯ ಸಂಕಷ್ಟಗಳ ನಡುವೆಯೂ ತಂದೆ ಮತ್ತು ಚಿಕ್ಕಪ್ಪಂದಿರ ಕೀರ್ತನೆಗಳ ಪ್ರಚಾರವನ್ನು ಕೈಗೊಂಡರು.

ಒಳ್ಳೆಯ ಈಜುಗಾರರಾಗಿದ್ದ ಇವರಿಗೆ ಬೆಂಗಳೂರಿನ ಕೆಂಪಾಂಬುಧಿಕೆರೆಯಲ್ಲಿ ಪ್ರತಿನಿತ್ಯ ಗಂಟೆಗಟ್ಟಲೆ ಈಜುವುದೂ ಹವ್ಯಾಸವಾಗಿತ್ತು. ಈ ಕೆರೆಯಲ್ಲಿ ಅಧಿಕೃತ ಈಜು ಮೇಷ್ಟ್ರಾಗಿದ್ದ ಕೆರೆ ಶ್ರೀನಿವಾಸರಾಯರು ಇವರ ಸ್ನೇಹಿತರಾಗಿದ್ದರು. ಒಮ್ಮೆ ಆಗಿನ ಸರಕಾರದ ಚೀಫ್ ಇಂಜಿನಿಯರ್ ಆಗಿದ್ದ ಕರ್ಪೂರ ಶ್ರೀನಿವಾಸರಾಯರ ಸ್ನೇಹಿತರಾದ ಜನಾರ್ಧನರಾಯರು ಕಾಲು ಜಾರಿ ಈ ಕೆರೆಗೆ ಬಿದ್ದಾಗ ಲಕ್ಷ್ಮೀನಾರಾಯಣರಾಯರು ಕೂಡಲೆ ಕೆರೆಗೆ ಧುಮುಕಿ ಈಜಿ ಅವರನ್ನು ಬದುಕಿಸಿದರು. ಈ ವಿಷಯಕರ್ಪೂರ ಶ್ರೀನಿವಾಸರಾಯರಿಗೆ ತಿಳಿದು ರಾಯರನ್ನೂ ಶ್ರೀನಿವಾಸರಾಯರ ಜೊತೆಗೆ ಈ ಕೆರೆಯ ಈಜು ಮೇಷ್ಟ್ರನ್ನಾಗಿ ನೇಮಿಸಿದರು. ಈಜುವುದರಲ್ಲಿ ಪರಿಣಿತರಾಗಿದ್ದ ಇವರು ತಮ್ಮ ಜೀವದ ಹಂಗು ತೊರೆದು ಅನೇಕರ ಪ್ರಾಣಗಳನ್ನು ಉಳಿಸಿದ್ದರು. 1936ರಲ್ಲಿ ಪಿ.ಕೆ. ಘೋಷ್ ಎಂಬ ವಿಶ್ವವಿಖ್ಯಾತ ಈಜುಗಾರ ಈ ಕೆರೆಯಲ್ಲಿ 94 ಗಂಟೆಗಳ ಕಾಲ ಸತತವಾಗಿ ಈಜಿನ ಪ್ರದರ್ಶನ ನೀಡಿದ. ಆತರಾಯರ ಈಜಿನ ಸಾಧನೆಯನ್ನು ಕಂಡು ಬೆರಗಾಗಿದ್ದ. ರಾಯರು ಆತನಿಗೆ' ನೀವು 94 ಗಂಟೆಗಳ ಕಾಲ ಕೈಗೆ ಬೇಡಿ ಹಾಕಿಕೊಂಡು ಈಜಿದ್ದೀರಿ, ನಾನು ಕೈಕಾಲುಗಳೆರಡನ್ನೂ ಕಟ್ಟಿಕೊಂಡು 100 ಗಂಟೆಗಳಿಗೂ ಹೆಚ್ಚುಕಾಲ ಈಜಬಲ್ಲೆ. ಆದರೆ ಬ್ರಾಹ್ಮಣನಾದ ನಾನು ಜಲಬಾಧೆ ಗಳನ್ನು ನೀರಿನಲ್ಲಿ ಮಾಡಿದ ಪಾಪಕ್ಕೆ ಗುರಿಯಾಗಲಾರೆ'ಎಂದಿದ್ದರಂತೆ.

ಇಲ್ಲಿ, 1921ರಲ್ಲೇ ಸ್ಕೌಟ್ ಹೆಡ್‌ಕ್ವಾರ್ಟರ್ಸ್‌ನವರು ಪ್ರಾರಂಭಿಸಿ ಕಾರ್ಯ ನಿರ್ವಹಿಸುತ್ತಿದ್ದ ಡಾಲ್ಫಿನ್ ಸ್ವಿಮ್ಮಿಂಗ್ ಕ್ಲಬ್‌ನ ಮೂಲಕ ರಾಯರಿಂದ ಈಜು ಕಲಿಯಲು ಆಗಿನ ಕಾಲದ ಅನೇಕ ಸಿನೇಮ ಕಲಾವಿದರು ಮತ್ತು ಗಣ್ಯವ್ಯಕ್ತಿಗಳು ಬರುತ್ತಿದ್ದರು. ಒಂದು ಮೂಲದ ಪ್ರಕಾರ 1930ರ ವೇಳೆಗೆ ಈ ಕ್ಲಬ್‌ನಿಂದ ಸುಮಾರು ಎರಡು ಸಾವಿರ ಗಂಡಸರೂ ನೂರೆಂಬತ್ತು ಮಹಿಳೆಯರೂ ಈಜು ಕಲಿತಿದ್ದರು. ಈ ಕ್ಲಬ್‌ನಲ್ಲಿ ಈಜು ಕಲಿತ ಭೈರಮ್ಮ ಎಂಬ ಹದಿನಾರು ವರ್ಷದ ಬಾಲಕಿ 1934ರ ಎಪ್ರಿಲ್‌ನಲ್ಲಿ ಬೆಳಗ್ಗೆ ಆರರಿಂದ ಸಂಜೆ ಆರರವರೆವಿಗೆ ಹನ್ನೆರಡು ಗಂಟೆಗಳ ಕಾಲ ಮತ್ತು ಅದೇ ವರ್ಷ ಮೇ ತಿಂಗಳ 19ರ ಮಧ್ಯರಾತ್ರಿಯಿಂದ ಸತತವಾಗಿ ಹದಿನೆಂಟು ಗಂಟೆಗಳ ಕಾಲವೂ ಈಜಿ ಅತ್ಯಂತ ಅಪರೂಪದ ದಾಖಲೆಯನ್ನು ಮಾಡಿದ್ದಳು. ಇದನ್ನು ಆಗಿನ ದಿವಾನ್ ಸರ್ ಮಿರ್ಜಾಇಸ್ಮೈಲ್, ದಂಡೆಯ ಮೇಲೆ ಕುಳಿತು ವೀಕ್ಷಿಸಿದ್ದರು. ಈ ಸಾಧನೆ, ಅಂತರಾಷ್ಟ್ರೀಯ ಪತ್ರಿಕೆಗಳಲ್ಲೂ ಪ್ರಕಟ ಗೊಂಡಿತು. ಈ ಬರಹದೊಂದಿಗೆ ಇರುವ ಚಿತ್ರದಲ್ಲಿ ಇರುವವರು ರಾಯರು ಮತ್ತು ಭೈರಮ್ಮ.

ತಮ್ಮ ಬಡತನವನ್ನೂ ಲೆಕ್ಕಿಸದೆ ಸಮಾಜ ಸೇವೆಯಲ್ಲೂ ರಾಯರು ತೊಡಗಿದ್ದರು. ಆಗ ಪ್ಲೇಗು, ಸಾಂಕ್ರಾಮಿಕ ರೋಗ ಮುಂತಾದ ಕಾರಣಗಳಿಂದ ಜನರು ಅಧಿಕ ಸಂಖ್ಯೆಯಲ್ಲಿ ನಿಧನರಾಗುತ್ತಿದ್ದರು. ಅಂತಹ ಸಂದರ್ಭದಲ್ಲಿ ಸಂತ್ರಸ್ಥರಿಗೆ ನೆರವಾಗುತ್ತಿದ್ದ ಇವರು ಅಸಂಖ್ಯಾತ ಶವಸಂಸ್ಕಾರಗಳನ್ನು ನೆರವೇರಿಸಿದ್ದರು.

ಇವೆಲ್ಲದರ ನಡುವೆಯೂ ರಾಯರು ಹರಿದಾಸ ಕೀರ್ತನೆಗಳನ್ನು ಸಂಗ್ರಹಿಸುವ, ಶುದ್ಧ ಹಸ್ತಪ್ರತಿಗಳನ್ನು ತಯಾರಿಸುವ ಕಾರ್ಯದಲ್ಲಿ ಸಂಪೂರ್ಣವಾಗಿ ತೊಡಗಿದ್ದರು. ಇಲ್ಲಿನ ಸುಭೋಧ ಪುಸ್ತಕ ಮಾಲೆಯಲ್ಲಿ ಪ್ರಕಟವಾದಎಲ್ಲ ಹರಿದಾಸರ ಕೃತಿಗಳನ್ನು ಇವರು ಸಂಗ್ರಹಿಸಿದ್ದರು. ಶ್ರೀಕಾಂತ ಅಥವಾ ಲಕ್ಷ್ಮೀಕಾಂತ ಅಂಕಿತದಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆ.

ಬೆಂಗಳೂರಿನ ಇತಿಹಾಸಕಾರರಾದ ಶ್ರೀ ವೇಮಗಲ್ ಸೋಮಶೇಖರ್ ಅವರು ರಾಯರ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿಯನ್ನು ತಮ್ಮ ಬರಹದಲ್ಲಿ ನೀಡಿದ್ದಾರೆ.



## ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಾಹ್ಮಣರ ಪಾತ್ರ-1

**ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಾಹ್ಮಣರ ಪಾತ್ರವನ್ನು ಪರಿಚಯಸಲು ಆರಂಭಿಸಿದ ಲೇಖನ ಮಾಲೆಯ ಮೊದಲ ಪುಷ್ಪ**

# ಸ್ವಾತಂತ್ರ್ಯ ಹೋರಾಟದ ಮೊದಲ ಕಿಡಿ ಹೊತ್ತಿಸಿದ ಬ್ರಾಹ್ಮಣ ಮಂಗಲಪಾಂಡೆ

**ಛಾಯಾಪತಿ. ಕೆ. ಎನ್.,**
**ಮಹಾಸಭೆಯ ಹಿರಿಯ ಪದಾಧಿಕಾರಿಗಳು**

ಸಾವಿರ ವರ್ಷಗಳಿಂದ ಪರಕೀಯರ ಕಾಲ್ತುಳಿತಕ್ಕೆ ಒಳಗಾಗಿದ್ದ ಭಾರತೀಯರು ಆಂಗ್ಲರ ಆಡಳಿತಾವಧಿಯಲ್ಲಿ ಇಡೀ ದೇಶ ಒಟ್ಟಾಗಿ ಗುಲಾಮ ಗಿರಿಯ ವಿರುದ್ಧ ಹೋರಾಡಿ ಸ್ವಾತಂತ್ರ್ಯ ಪಡೆಯಬೇಕೆಂಬ ತುಡಿತ, ಮಿಡಿತ ಹೆಚ್ಚಾಯಿತು. ತಾಯಿ ಭಾರತಿಯನ್ನು ಪರಕೀಯರ ದಾಸ್ಯ ಸಂಕೋಲೆಗಳಿಂದ ಬಿಡಿಸಿ ಸ್ವತಂತ್ರಳನ್ನಾಗಿ ಮಾಡಬೇಕೆಂಬ ಉತ್ಕಟ ಇಚ್ಛೆ ಮತ್ತು ಅದಕ್ಕೆ ತಕ್ಕನಾದ ಹೋರಾಟ ಪ್ರಾರಂಭ ವಾಯಿತು. ಇದರಲ್ಲಿ ಬ್ರಾಹ್ಮಣರ ಪಾತ್ರ ಗಮನಾರ್ಹವಾಗಿತ್ತು. ರಾಮಾಯಣ-ಮಹಾಭಾರತ ಕಾಲಗಳಿಂದಲೂ ದೇಶಕ್ಕೆ, ಸಮಾಜಕ್ಕೆ ಬ್ರಾಹ್ಮಣರ ಕೊಡುಗೆ ಗಮನಾರ್ಹವಾದದ್ದು. ಈ ಶ್ಲೋಕ ಹೇಳುವಂತೆ

**"ಅಗ್ರತಃ ಚತುರೋವೇದಾಃ ಪೃಷ್ಠತಃ ಸಶರಂ ಧನುಃ।**

**ಇದಂ ಬ್ರಾಹ್ಮಂ ಇದಂ ಕ್ಷಾತ್ರಂ ಶಾಪಾದಪಿ ಶರಾದಪಿ ॥**

ಬ್ರಾಹ್ಮಣನಾದವನು ಅಪಾಯದ ಸಂದರ್ಭದಲ್ಲಿ ಚತುರ್ವೇದಗಳ ಪಠಣದಿಂದ ಪಡೆದ ಬ್ರಹ್ಮ ತೇಜಸ್ಸಿನ ಬಲದಿಂದ ಶಾಪವನ್ನೂ ಕೊಡಬಲ್ಲ ಮತ್ತು ಶಸ್ತ್ರ ಹಿಡಿದು ಸಂಹಾರವನ್ನೂ ಮಾಡಬಲ್ಲ. ಉದಾಹರಣೆ ದ್ರೋಣಾಚಾರ್ಯ, ಪರಶುರಾಮ ಮುಂತಾದವರು.

ಅದೇ ಕ್ಷಾತ್ರ ಶಕ್ತಿ ಸ್ವಾತಂತ್ರ್ಯ ಹೋರಾಟದಲ್ಲಿಯೂ ಮುಂದುವರೆದು ಕೊಂಡು ಬಂದಿತ್ತು. ಆಂಗ್ಲರ ವಿರುದ್ಧ ಹೋರಾಟದ ಪ್ರಥಮ ಕ್ರಾಂತಿಯ ಕಿಡಿಯನ್ನು ಹೊತ್ತಿಸಿದವನೂ ಅದೇ ಬ್ರಾಹ್ಮಣ.

1827 ಜುಲೈ 19ರಂದು ಉತ್ತರಪ್ರದೇಶದ ಬಲ್ಲಿಯಾ ಜಿಲ್ಲೆಯ ನಗ್ವಾ ಗ್ರಾಮದಲ್ಲಿ ಬ್ರಾಹ್ಮಣ ಕುಟುಂಬದ ದಿವಾಕರ ಪಾಂಡೆ ಎಂಬುವವರಿಗೆ ಜನಿಸಿದವನೇ ಕ್ರಾಂತಿಯ ಹರಿಕಾರ ಮಂಗಲ ಪಾಂಡೆ.

1857 ರ ಪ್ರಥಮಸ್ವಾತಂತ್ರ್ಯ ಸಂಗ್ರಾಮ ಪ್ರಾರಂಭವಾಯಿತು. ಇದನ್ನು ಸಿಪಾಯಿ ದಂಗೆ ಎಂದೂ ಕರೆಯುತ್ತಾರೆ. ಇದಕ್ಕೆ ಪ್ರಥಮ ಕಾರಣೀಭೂತನೆ ಬ್ರಾಹ್ಮಣ ಮಂಗಲಪಾಂಡೆ. ಆಂಗ್ಲರ ವಿರುದ್ಧ ಪ್ರಥಮ ಗುಂಡು ಹಾರಿದ್ದು ಇವನ ಬಂದೂಕಿನಿಂದಲೇ. 1857 ರಿಂದ 1947 ರ ತನಕ ಈತನ ಸ್ಫೂರ್ತಿಯಿಂದಲೇ ನೂರಾರು ಕ್ರಾಂತಿಕಾರಿ ಗಳು ಸ್ವಾತಂತ್ರ್ಯ ಹೋರಾಟದ ಜ್ವಾಲೆಯಲ್ಲಿ ಧುಮುಕಿ ಆತ್ಮಾರ್ಪಣೆ ಮಾಡಿಕೊಂಡರು.

ಮಂಗಲಪಾಂಡೆ ಕಣ್ಣುಮುಚ್ಚಿ ತಾಯಿ ಭಾರತಿಯನ್ನು ಧ್ಯಾನ ಮಾಡಿದಾಗ ಅವನಿಗೆ ಮಂದಸ್ಮಿತೆಯಾದ ಸ್ನಿಗ್ಧ ಸೌಂದರ್ಯದ ದೇವಿ ಭಾರತಿ ಕಾಣಿಸುತ್ತಿರಲಿಲ್ಲ. ಮೈಮೇಲೆ ಹರಿದು ಚಿಂದಿಯಾದ ಬಟ್ಟೆಯುಟ್ಟ, ಮೊಲೆತೊಟ್ಟುಗಳಿಂದ ರಕ್ತ ಹರಿಯುತ್ತಿರುವ, ಅಸಹಾಯಕಳಾದ ತಾಯಿ ಭಾರತಿ ಕಾಣುತ್ತಿದ್ದಳು. ಆ ಚಿತ್ರ ಕಣ್ಣಮುಂದೆ ಹಾದು ಹೋದ ಕೂಡಲೇ ಈ ಬ್ರಾಹ್ಮಣನ ಕಣ್ಣುಗಳಿಂದ ದಳದಳನೆ ನೀರು ಸುರಿಯುತ್ತಿತ್ತು. ತಾಯಿಯ ಈ ಸ್ಥಿತಿಗೆ ಕಾರಣರಾದ ದುರುಳ ಬಿಳಿಯರ ಎದೆ ಬಗೆದುಬಿಡಬೇಕೆಂದು ಮನಸ್ಸು ತವಕಿಸುತ್ತಿತ್ತು. ಈ ರೀತಿ ತಳಮಳಿಸುತ್ತಿದ್ದ ಮಂಗಲಪಾಂಡೆಗೆ ಆಂಗ್ಲರ ಮೇಲೆ ಸೇಡು ತೀರಿಸಿಕೊಳ್ಳುವ ಅವಕಾಶ ಸಿಕ್ಕಿದ್ದಾದರೂ ಹೇಗೆ.... ನೋಡೋಣ ಬನ್ನಿ.

ಮಂಗಲಪಾಂಡೆ ಬಂಗಾಳದ ಬ್ಯಾರಕ್ ಪುರದಲ್ಲಿದ್ದ ಬ್ರಿಟಿಷ್ ಸೈನ್ಯದ 34ನೇ ರೆಜಿಮೆಂಟಿನ ಒಬ್ಬ ಸಾಮಾನ್ಯ ಯೋಧ. ಇವನು ಜನ್ಮತಃ ಬ್ರಾಹ್ಮಣನಾದರೂ ವೃತ್ತಿ ಮತ್ತು ಪ್ರವೃತ್ತಿಯಿಂದ ಕ್ಷತ್ರಿಯ ನಂತಿದ್ದ. ಧೈರ್ಯಶಾಲಿಯಾದ ತರುಣಯೋಧ ಎಂಬ ಮೆಚ್ಚುಗೆಗೆ ಪಾತ್ರನಾಗಿದ್ದ. ಈ ತೇಜಸ್ವಿ ಬ್ರಾಹ್ಮಣನಿಗೆ ತನ್ನ ಧರ್ಮವೆಂದರೆ ಪ್ರಾಣಕ್ಕಿಂತಲೂ ಹೆಚ್ಚು. ಅವನ ಖಾಸಗಿ ಜೀವನ ಪರಿಶುದ್ಧವಾಗಿತ್ತು. ರಣರಂಗದಲ್ಲಿ ಅಪ್ರತಿಮ ಹೋರಾಟಗಾರ. ಸ್ವಾತಂತ್ರ್ಯ ಗಳಿಸಬೇಕೆಂಬ ವಿಚಾರ ಅವನನ್ನು ಆಕರ್ಷಿಸಿತ್ತು. ತಾಯಿ ಭಾರತಿಯನ್ನು ಮುಕ್ತ ಗೊಳಿಸಬೇಕೆಂಬ ಉತ್ಕಟ ಇಚ್ಛೆ, ಅದಕ್ಕಾಗಿ ಪ್ರಾಣಕ್ಕೂ ಅಂಜದೆ ಆತ್ಮಾಹುತಿಗೂ ಮಾನಸಿಕ ಸಿದ್ಧತೆ. ಅಂತಹ ಕ್ಷಣ ಅವನಿಗೆ ಒದಗಿ ಬರಲು ಪ್ರಾರಂಭವಾಯಿತು.

ಕುತಂತ್ರಿಗಳಾದ ಬ್ರಿಟಿಷರು ಹಿಂದೂ ಮುಸ್ಲಿಮರ ಧಾರ್ಮಿಕ ನಂಬಿಕೆಗೆ ಧಕ್ಕೆಯಾಗಬೇಕು, ಅವರ ಮಾನಸಿಕ ಧೈರ್ಯ ಕುಗ್ಗಬೇಕು, ಅವರ ನಂಬಿಕೆಗಳನ್ನು ನುಚ್ಚುನೂರು ಮಾಡಬೇಕೆಂದು ಭಾರತೀಯ ಸೈನಿಕರುಗಳ ಬಂದೂಕುಗಳಿಗೆ ದನದ ಕೊಬ್ಬು ಮತ್ತು ಹಂದಿಯ ಕೊಬ್ಬನ್ನು ಲೇಪಿಸಿ ಅದನ್ನು ಭಾರತ ಸೈನಿಕರೇ ಇದ್ದ ಬಹಾರ್ಂಪುರದ 19ನೇ ರೆಜಿಮೆಂಟಿಗೆ ಬಲವಂತವಾಗಿ ಕೊಡಲು ಮುಂದಾಗಿದ್ದರು. ಈ ಕುತಂತ್ರ ತಿಳಿಯುತ್ತಿದ್ದಂತೆ ಸೈನಿಕರು ಕ್ರೋಧಗೊಂಡರು. ಬ್ರಿಟಿಷರ ಆಜ್ಞೆ ಪಾಲಿಸಿ ಸ್ವದೇಶಿಯರಿಗೆ ಗುಂಡುಹಾರಿಸಿದ್ದ ಅದೇ ಸೈನಿಕರು ಬ್ರಿಟಿಷರ ವಿರುದ್ಧವೇ ತಿರುಗಿಬಿದ್ದರು. 'ಪ್ರಾಣ ಕೊಟ್ಟೇವು, ಬಂದೂಕು ಮುಟ್ಟೇವು' ಎಂದು 19ನೇ ರೆಜಿಮೆಂಟಿನ ಸೈನಿಕರು ಖಂಡತುಂಡವಾಗಿ ಹೇಳಿಬಿಟ್ಟರು. ಇದರ ಪರಿಣಾಮ ಬ್ರಿಟಿಷರು 19ನೇ ರೆಜಿಮೆಂಟನ್ನು

ನಿಶ್ಶಸ್ತ್ರೀಕರಣಗೊಳಿಸಲಾಗುವುದೆಂದು ಘೋಷಿಸಿದರು. ಸೈನಿಕರ ಪಾಲಿಗೆ ನಿಶ್ಯಸ್ತ್ರೀಕರಣ ಘೋರ ಅಪಮಾನ. ಆದರೂ ಚಿಂತೆಯಿಲ್ಲ ಎಂದು ಸೆಟೆದು ನಿಂತರು. ತಾಯ್ನಾಡಿಗಾಗಿ ರಕ್ತ ಚೆಲ್ಲಲು ಸಿದ್ಧರಾದರು.

ಈ ಸುದ್ದಿ ಬ್ಯಾರೆಕ್ ಪುರದ 34ನೇ ರೆಜಿಮೆಂಟಿಗೆ ತಲುಪಿ ಅವರೆಲ್ಲರಿಗೂ ದಿಕ್ಕು ತೋಚದಂತಾಯಿತು. ಅದೇ ರೆಜಿಮೆಂಟಿನಲ್ಲಿದ್ದ ಮಂಗಲಪಾಂಡೆಯ ರಕ್ತ ಕುದಿಯಲು ಪ್ರಾರಂಭವಾಯಿತು. ದನ ಮತ್ತು ಹಂದಿಯ ಕೊಬ್ಬು ಹಚ್ಚಿದ ಬಂದುಕುಗಳನ್ನು ಸೈನಿಕರಿಗೆ ನೀಡಲು ಮುಂದಾಗಿರುವ ಪುಂಡ ಬಿಳಿಯರ ಎದೆ ಬಗೆದು ರಕ್ತ ಹರಿಸಬೇಕೆಂದು ತಹತಹಿಸುತ್ತಿದ್ದ ಮನಸ್ಸು. ರಾತ್ರಿಯೆಲ್ಲಾ ಅದೇ ಚಿಂತೆ. ಅದೇ ಗುಂಗಿನಲ್ಲಿ ನಿದ್ರೆಯಿಲ್ಲದೆ ರಾತ್ರಿ ಕಳೆಯಿತು.

ಮಾರನೆಯ ಬೆಳಗು ಬರಿಯ ಬೆಳಗಾಗಿರಲಿಲ್ಲ. ಪ್ರತಿಯೊಬ್ಬ ಶೋಷಿತನು ಬಯಸಿ ಕಾಣುವ ಕನಸು ಆ ಬೆಳಗು. ತಮ್ಮನ್ನು ತಮ್ಮವರನ್ನು ಇಷ್ಟು ದಿನಗಳು ಕಾಲಡಿ ಇಟ್ಟುಕೊಂಡ ಬಿಳಿಯ ಕುನ್ನಿಗಳ ರುಂಡ ಚೆಂಡಾಡುವ ದಿನ ಅದು. ಅಂದಿನ 34ನೇ ರೆಜಿಮೆಂಟಿನ ಪಥಸಂಚಲನ ಆರಂಭವಾಗುವ ಮುಂಚೆ ಪಾಂಡೆ ಡೇರೆಯಿಂದ ಹೊರಬಂದು ಪೆರೇಡ್ ಮೈದಾನಕ್ಕೆ ಧುಮುಕಿದ. ಎಲ್ಲಾ ಡೇರೆಯ ಕಡೆ ಓಡುತ್ತಾ "ಏಳಿ ಸಹೋದರರೇ ಏಳಿ, ನೀವೇಕೆ ಸುಮ್ಮನಿದ್ದೀರಿ. ನಿಮ್ಮ ಧರ್ಮದ ಮೇಲೆ ಆಣೆ. ಫಿರಂಗಿಗಳಿಗೆ ಬುದ್ಧಿ ಕಲಿಸೋಣ ಬನ್ನಿ." ಹೀಗೆ ಹಲವಾರು ಬಾರಿ ಕೂಗುತ್ತಾ ಹೋದ. ಅಬ್ಬ ಬಿಳಿಯರ ಕೈ ಕೆಳಗಿರುವ ಪುಳಿಚಾರು ತಿನ್ನುವ ಬ್ರಾಹ್ಮಣನಿಗೆ ಅದೆಷ್ಟು ಧೈರ್ಯ.....

ಹೀಗೆ ಕೂಗುತ್ತಾ ಹುರಿದುಂಬಿಸುತ್ತಿದ್ದ ಪಾಂಡೆಯನ್ನು ಮೇಜರ್ ಸಾರ್ಜೆಂಟ್ ಹ್ಯೂಸನ್ ನೋಡಿದ. "ಅರೆಸ್ಟ್ ಪಾಂಡೆ" ಎಂದು ಅರಚಿಕೊಂಡ. ಮೊದಲೆಲ್ಲಾ ಅಧಿಕಾರಿಯ ಸೂಚನೆಯನ್ನು ಪಾಲಿಸುತ್ತಿದ್ದ ಯಾವೊಬ್ಬ ಸೈನಿಕನೂ ಸ್ಪಂದಿಸಲಿಲ್ಲ. ಯಾರೂ ಸಹ ಪಾಂಡೆಯನ್ನು ಅರೆಸ್ಟ್ ಮಾಡಲು ಬರಲಿಲ್ಲ. ಆಗ ಪಾಂಡೆಯೇ ಹ್ಯೂಸನ್ ಬಳಿ ನಡೆದ. ಸೊಂಟದಲ್ಲಿದ್ದ ಕೋವಿಗೆ ಕೈಹಾಕಿ ಆದಷ್ಟು ಹತ್ತಿರದಿಂದ ಗುಂಡು ಹಾರಿಸಿದ. ಇದೇ ಬ್ರಾಹ್ಮಣನ ಕ್ಷಾತ್ರತೇಜಸ್ಸು. ಹ್ಯೂಸನ್ ಚೀರುತ್ತ ನೆಲಕ್ಕೆ ಬಿದ್ದ. ಭಾರತೀಯರ ರಕ್ತದ ಜೊತೆ ಚೆಲ್ಲಾಟವಾಡುತ್ತಿದ್ದವನ ರಕ್ತ ಭಾರತದ ನೆಲದಮೇಲೆ ಹರಿಯಿತು. ಪ್ರಾಣ ಉಳಿಸಿಕೊಳ್ಳಲು ಒದ್ದಾಡುತ್ತಿದ್ದ. ಬಹಳ ದಿನಗಳಿಂದ ಹೆಪ್ಪುಗಟ್ಟಿದ್ದ ನೋವು, ಆಕ್ರೋಶ ಹೊರಹೊಮ್ಮಿತ್ತು.

ಅಷ್ಟರಲ್ಲಿ ಅಲ್ಲಿಯೇ ಕುದುರೆಯ ಮೇಲೆ ಬರುತ್ತಿದ್ದ ಇನ್ನೊಬ್ಬ ಅಧಿಕಾರಿ ಲೆಫ್ಟಿನೆಂಟ್ ಭಾಗ್ , ಹ್ಯೂಸನ್ನನ ಒದ್ದಾಟ ಕಂಡು ಹತ್ತಿರ ಬರುವಷ್ಟರಲ್ಲಿ ಪಾಂಡೆಯ ಬಂದೂಕಿನ ಗುಂಡು ಅವನೆಡೆಗೆ ಹಾರಿತು. ಆದರೆ ಕುದುರೆಗೆ ತಾಗಿ ಭಾಗ್ ಕೆಳಗೆ ಬಿದ್ದ. ಕೂಡಲೆ ತನ್ನ ಪಿಸ್ತೂಲಿನಿಂದ ಪಾಂಡೆಯ ಕಡೆಗೆ ಗುಂಡು ಹಾರಿಸಿದ. ಅದು ಗುರಿ ತಪ್ಪಿತು. ಕೂಡಲೇ ಪಾಂಡೆಯ ಸೊಂಟದಲ್ಲಿದ್ದ ಖಡ್ಗ ಭಾಗ್ ನ ಎದೆಯ ಹತ್ತಿರ ಬಂದಿತು. ಕೂಡಲೇ ಬಿಳಿಯರ ಸೈನಿಕನೊಬ್ಬ ಪಾಂಡೆಗೆ ತಿವಿಯಲು ಮುಂದಾದ. ಆಗ ಓಡಿಬಂದ ಭಾರತೀಯ ಸೈನಿಕ ಅವನ ಮುಖಕ್ಕೆ ಗುದ್ದಿ ಆಘಾತ ಮಾಡಿದ. ಆ ಸಮಯಕ್ಕೆ ಅಲ್ಲಿಗೆ ಬಂದ ಕರ್ನಲ್ ವೀಲರ್ "ಪಾಂಡೆಯನ್ನು ಬಂಧಿಸಿ" ಎಂದು ಆದೇಶ ನೀಡಿದ. ಆ ಆದೇಶವನ್ನು ಧಿಕ್ಕರಿಸುತ್ತಾ "ಪಾಂಡೆಯ ಮೈ ಮುಟ್ಟಿದರೆ ನಾವು ಸುಮ್ಮನಿರಲ್ಲ. ಪವಿತ್ರಾತ್ಮನಾದ ಈ ಬ್ರಾಹ್ಮಣನನ್ನು ನಾವು ಬಂಧಿಸಲಾರೆವು" ಎಂದು ಕೂಗಿದರು. ಹೆದರಿದ ವೀಲರ್ ಅಲ್ಲಿಂದ ಕಾಲ್ತೆಗೆದ.

ಪಾಂಡೆಗಾದ ಆನಂದಕ್ಕೆ ಪಾರವೇ ಇಲ್ಲ. ಎಲ್ಲರೂ ಇವನೊಂದಿಗೆ ಕೈಜೋಡಿಸಿದ್ದೇ ಇವನ ಪಾಲಿನ ಗೆಲುವಾಗಿತ್ತು. ಭಾರತೀಯ ಸೈನಿಕರ ಮನಸ್ಸಿನಲ್ಲಿ ಕ್ರಾಂತಿಯ ಕಿಡಿ ಹೊತ್ತಿಸುವಲ್ಲಿ ಪಾಂಡೆ ಯಶಸ್ವಿಯಾಗಿದ್ದ. ಆನಂದದಿಂದ ಕುಣಿದಾಡಿದ. "ಬನ್ನಿ ಗೆಳೆಯರೇ, ಈಗ ಕಪಟಿಗಳಿಗೆ ಪಾಠ ಕಲಿಸೋಣ" ಎಂದು ಮೈದಾನದ ತುಂಬೆಲ್ಲಾ ಓಡಿದ.

ಅದೇ ವೇಳೆಗೆ ವೀಲರ್ ಬಿಳಿಯರ ಸೈನ್ಯದ ಪಡೆಯೊಂದಿಗೆ ತನ್ನನ್ನು ಬಂಧಿಸಲು ಧಾವಿಸಿ ಬರುತ್ತಿರುವುದು ಪಾಂಡೆಗೆ ಕಾಣಿಸಿತು. ಕೆಲವೇ ಕ್ಷಣಗಳ ಸ್ವಾತಂತ್ರ್ಯದ ಹುರುಪು ಅವನನ್ನು ಆವರಿಸಿತ್ತು. ಆದರೆ ಅವರಿಗೆ ಸೆರೆಸಿಕ್ಕಿ ಗುಲಾಮನಾಗಿ ಬಾಳುವುದಕ್ಕಿಂತ ಸ್ವತಂತ್ರವಾಗಿ ಪ್ರಾಣ ಬಿಡುವುದು ಮೇಲೆಂದು "ಏ..,ಬನ್ರೋ.. ಬನ್ರೋ.." ಎಂದು ಕೂಗುತ್ತ ತನ್ನ ಕೋವಿಯನ್ನು ನೆಲದ ಮೇಲೆ ನಿಲ್ಲಿಸಿ ತನ್ನ ಎದೆಯನ್ನು ಕೋವಿಯ ಮೇಲಿಟ್ಟು ಹೆಬ್ಬೆರಳಿನಿಂದ ಟ್ರಿಗರ್ ಒತ್ತಿದ. ಗುಂಡು ಚಿಮ್ಮಿ ಅವನ ಎದೆ ಸೀಳಿತು. ಆದರೆ ಪ್ರಾಣ ಹೋಗಲಿಲ್ಲ. ಆಗ ಬಿಳಿಯರು ಅವನನ್ನು ಆಸ್ಪತ್ರೆಗೆ ಸೇರಿಸಿ ಉಳಿಸಿಕೊಂಡರು. ಅವನ ಸಹಕಾರಿಗಳ ಹೆಸರು ಬಾಯಿ ಬಿಡಿಸಲು ಚಿತ್ರಹಿಂಸೆ ನೀಡಿದರು. ಪಾಂಡೆ ಬಾಯಿ ಬಿಡಲಿಲ್ಲ. ಕೊನೆಗೆ ನ್ಯಾಯಾಲಯಕ್ಕೆ ಎಳೆದೊಯ್ದರು. ಕ್ರೂರ ಶಿಕ್ಷೆ ಕೊಡುವುದರ ಮೂಲಕ ಉಳಿದ ಭಾರತೀಯ ಸೈನಿಕರಿಗೆ ಭಯಹುಟ್ಟಿಸಬೇಕೆಂದು ಯಾವ ಮಾನವೀಯತೆಯ ಕುರುಹೂ ತೋರದೆ ಗಲ್ಲು ಶಿಕ್ಷೆ ವಿಧಿಸಿದರು. 1857 ರ ಏಪ್ರಿಲ್ 8ರಂದು ಗಲ್ಲಿಗೇರಿಸುವ ನಿಶ್ಚಯವಾಯಿತು. ಆದರೆ ಬ್ಯಾರಕ್ ಪುರದಲ್ಲಿ ಯಾರೊಬ್ಬರೂ ಅವನನ್ನು ಗಲ್ಲಿಗೇರಿಸಲು ಮುಂದೆ ಬರಲಿಲ್ಲ. ವಿಧಿಯಿಲ್ಲದೆ ಕಲ್ಕತ್ತದಿಂದ ನಾಲ್ವರು ನೇಣು ಹಾಕುವವರನ್ನು ಕರೆತಂದರು. ಅಂದು ಬೆಳಗ್ಗೆ ಪಾಂಡೆಯನ್ನು ಗಲ್ಲಿಗೇರಿಸಲು ಕರೆದುಕೊಂಡು ಹೋಗುವಾಗ "ತಾಯ್ನಾಡಿಗಾಗಿ ನನ್ನ ಬಲಿದಾನ" ಎಂದು ಸಂತಸದಿಂದ ಎದೆ ಎತ್ತಿಕೊಂಡು ಧೀರ ನಡಿಗೆಯಲ್ಲಿ ನಡೆದು ಹೋದ. ವಧಾಪೀಠವನ್ನು ಹತ್ತಿ ನಿಂತ. ಅವನ ಮುಖಕ್ಕೆ ಕಪ್ಪು ಬಟ್ಟೆ ಬಿತ್ತು. ಕೊರಳಿಗೆ ನೇಣು ಕುಣಿಕೆ ಬಿಗಿಯಿತು. ಕಾಲ ಕೆಳಗಿನ ಹಲಗೆ ಜಾರಿತು. ಕ್ರಾಂತಿಯ ಕಿಡಿ ಹಚ್ಚಿ ಭಾರತ ಮಾತೆಯ ಪಾದದಲ್ಲಿ ತನ್ನ ಪ್ರಾಣವನ್ನು ಸಮರ್ಪಿಸಿದ ಆ ಬ್ರಾಹ್ಮಣ ವೀರನೇ ಮಂಗಲಪಾಂಡೆ.

**" ಭಾರತ ಮಾತಾ ಕಿ ಜೈ"**

# ಋಷಿ ವಾಣಿ

ಕಠೋಪನಿಷತ್ತು – ಮುಂದುವರಿದ ಭಾಗ

**ಎಸ್. ಶ್ರೀಧರಮೂರ್ತಿ**

**ನಾಲ್ಕನೆಯ ವಲ್ಲೀ:** ಇಂದ್ರಿಯಗಳು ಸ್ವಭಾವತಃ ಹೊರಗೇ ಹೋಗುತ್ತವೆ. ಆದುದರಿಂದ ಮನುಷ್ಯನು ಹೊರಗೆ ನೋಡುತ್ತಾನೆಯೇ ವಿನಾ ಅಂತರಾತ್ಮನನ್ನು ನೋಡುವುದಿಲ್ಲ. ಅಮೃತತ್ವವನ್ನು ಬಯಸುವ ಯಾವನೊ ಒಬ್ಬ ಧೀರನು ಇಂದ್ರಿಯಗಳನ್ನು ಹಿಂತಿರುಗಿಸಿ ಪ್ರತ್ಯಗಾತ್ಮನನ್ನು ನೋಡುತ್ತಾನೆ. ಪರಮಾತ್ಮನು ಅಂಗುಷ್ಠ ಮಾತ್ರ ಪರಿಮಾಣವುಳ್ಳವನು. ಇವನೇ ಭೂತ ಭವಿಷ್ಯಗಳ ಒಡೆಯನು. ಇಂದೂ ಆತನೇ, ಇವನಲ್ಲಿ ಭೇದವನ್ನು ಕಾಣಕೂಡದು. ಶುದ್ಧವಾದ ನೀರಿನಲ್ಲಿ ಶುದ್ಧವಾದ ನೀರನ್ನು ಚೆಲ್ಲಿದರೆ ಹೇಗೆ ಆಗವುದೊ ಹಾಗೆಯೇ ಜ್ಞಾನಿಯಾದ ಮುನಿಯ ಆತ್ಮನೂ ಆಗುವನು.

**ಐದನೆಯ ವಲ್ಲೀ:** ಈ ವಲ್ಲಿಯಲ್ಲಿ ಬ್ರಹ್ಮನ ಅಂತರ್ಯಾಮಿತ್ವವನ್ನು ಸ್ವಲ್ಪ ವಿಸ್ತಾರವಾಗಿ ಉಪದೇಶಿಸಿದೆ. ಈ ಶರೀರವೆಂಬ ಪುರದಲ್ಲಿರುವ ಆತ್ಮನನ್ನು ಸರಿಯಾಗಿ ತಿಳಿದುಕೊಂಡರೆ ಶೋಕವನ್ನು ದಾಟಿ ಮುಕ್ತನಾಗಬಹುದು. ಅವನು ಸರ್ವವ್ಯಾಪಕನೂ ಹೌದು, ಒಂದು ಪುರದಲ್ಲಿ ಮಾತ್ರ ಇಲ್ಲ. ಇಂದ್ರಿಯ ಪ್ರಾಣಗಳ ಕಾರ್ಯಗಳು ಈ ಆತ್ಮನಿಗಾಗಿ ನಡೆಯುತ್ತಿರುವುವು. ಇವನನ್ನು ಮೀರಲು ಯಾರಿಗೂ ಆಗುವುದಿಲ್ಲ. ಮರಣವನ್ನು ಹೊಂದಿದ ಮೇಲೆ ಕೆಲವರು ಕರ್ಮಕ್ಕೆ ಮತ್ತು ಜ್ಞಾನಕ್ಕೆ ಅನುಸಾರವಾಗಿ ಶರೀರವನ್ನು ಹೊಂದಲು ಯೋನಿಯನ್ನೂ ಮತ್ತೆ ಕೆಲವರು ಸ್ಥಾಣುವನ್ನೂ ಹೊಂದುತ್ತಾರೆ.

**ಆರನೆಯ ವಲ್ಲೀ:** ಸಂಸಾರಸ್ವರೂಪವನ್ನು ನಿಶ್ಚಯಿಸುವುದರ ಮೂಲಕ ಬ್ರಹ್ಮ ಸ್ವರೂಪವನ್ನು ನಿರ್ಧರಿಸಲು ಆರನೆಯ ವಲ್ಲಿಯ ಆರಂಭವಾಗಿದೆ. ಸಂಸಾರವೃಕ್ಷದ ಮೂಲ ಬ್ರಹ್ಮವು. ಬ್ರಹ್ಮದ ನಿಯಾಮಕಶಕ್ತಿಯಿಂದ ಸೂರ್ಯ ಚಂದ್ರಾಗ್ನಿವಾಯುಗಳು ತಮ್ಮ ತಮ್ಮ ಕೆಲಸಗಳನ್ನು ಮಾಡುತ್ತಿರುವುವು. ಬ್ರಹ್ಮದ ರೂಪವನ್ನು ಕಣ್ಣಿನಿಂದ ನೋಡಲು ಆಗುವುದಿಲ್ಲ. ಮನಸ್ಸನ್ನು ನಿಯಮಿಸುವ ಬುದ್ಧಿಯಿಂದ ಮನನರೂಪವಾದ ಸಮ್ಯಗ್ದರ್ಶದಿಂದ ಬ್ರಹ್ಮವು ಪ್ರಕಾಶಿತವಾಗುವುದು; ಅಥವಾ ರಂಗರಾಮಾನುಜರು ಹೇಳುವಂತೆ ಮನಸ್ಸಿನ ಮೂಲಕ ಭಕ್ತಿಯಿಂದಲೂ ಧೃತಿಯಿಂದಲೂ ಬ್ರಹ್ಮ ಸ್ವರೂಪವನ್ನು ತಿಳಿದುಕೊಳ್ಳಬಹುದು. ಇಂದ್ರಿಯಗಳು ಮನಸ್ಸಿನೊಂದಿಗೆ ಶಾಂತವಾಗಿ ಬುದ್ಧಿಯು ಅಲ್ಲಾಡದಿದ್ದರೆ ಅದನ್ನು ಪರಮಗತಿಯೆಂದು ಹೇಳುತ್ತಾರೆ. ಸ್ಥಿರವಾದ ಇಂದ್ರಿಯಧಾರಣೆ ಎಂಬ ಅವಸ್ಥೆಯೇ ಯೋಗವು. ಬ್ರಹ್ಮವು ಅತೀಂದ್ರಿಯವಾದರೂ ಆಗಮಾರ್ಥಾನುಸಾರಿಯಾದ ಶ್ರದ್ಧೆಯುಳ್ಳ ಗುರುವುವಿನಿಂದ ತಿಳಿಯಬಹುದು. ಹೃದಯವನ್ನು ಆಶ್ರಯಿಸಿಕೊಂಡಿರುವ ಕಾಮಗಳು ನಾಶವಾದರೆ ಇಲ್ಲಿಯೇ ಬ್ರಹ್ಮವನ್ನು ಪಡೆದಕೊಳ್ಳಬಹುದು. ಹೃದಯಕ್ಕೆ ನೂರೊಂದು ನಾಡಿಗಳಿವೆ. ಅವುಗಳಲ್ಲಿ ಒಂದು ನೆತ್ತಿಯವರೆಗೆ ಹೊರಟಿದೆ. ಅದರ ಮೂಲಕ ಮೇಲಕ್ಕೆ ಹೋಗುವವನು ಅಮೃತತ್ವವನ್ನು ಪಡೆಯುತ್ತಾನೆ. ಇತರ ನಾಡಿಗಳು ಸಂಸಾರಕ್ಕೆ ಕಾರಣವಾಗಿರುತ್ತವೆ. ಹದಿನೇಳನೆಯ ಮಂತ್ರದಲ್ಲಿ ಎಲ್ಲ ವಲ್ಲಿಗಳ ಅರ್ಥವನ್ನು ಉಪಸಂಹಾರ ಮಾಡಿದೆ. ಜನರ ಹೃದಯದಲ್ಲಿರುವ ಅಂಗುಷ್ಠ ಮಾತ್ರ ಪರಿಮಾಣವುಳ್ಳ ಪುರುಷನನ್ನು ತನ್ನ ಶರೀರದಿಂದ ಬೇರ್ಪಡಿಸಿ ಅವನು ಶುದ್ಧನೆಂದೂ ಅಮೃತನೆಂದೂ ತಿಳಿದುಕೊಳ್ಳಬೇಕು. ಯಮನು ಉಪದೇಶಿಸಿದ ಬ್ರಹ್ಮ ವಿದ್ಯೆಯನ್ನೂ ಯೋಗವಿಧಿಯನ್ನೂ ತಿಳಿದುಕೊಂಡು ನಚಿಕೇತನು ಬ್ರಹ್ಮವನ್ನು ಪಡೆದುಕೊಂಡನು. ಇದರಂತೆ ಯಾವನು ಅಧ್ಯಾತ್ಮವ್ನು ಹೀಗೆ ತಿಳಿದುಕೊಳ್ಳುತ್ತಾನೆಯೊ ಅವನೂ ಮುಕ್ತನಾಗುವನು. ಇದೆ ಕಠೋಪನಿಷತ್ತಿನ ಸಂದೇಶ.

ಈ ಸೂಕ್ತಕ್ಕೆ ಯಮನೇ ದೇವತೆ ಹಾಗೂ ಕುಮಾರನೇ ಋಷಿ. ಇದರಲ್ಲಿ ಉಲ್ಲೇಖಿತನಾಗಿರುವ ಕುಮಾರನೇ ನಚಿಕೇತನೆಂದು ಹೇಳಲಾಗಿದೆ.

**ಓಂ ಶಾಂತಿಃ ಶಾಂತಿಃ ಶಾಂತಿಃ**

**ಜಿ.ಎಸ್. ಸ್ಕೂಲ್ (ಜಿ.ಎಸ್.ಎಸ್)ಗೆ ಟೀಚರ್ಸ್ ಬೇಕಾಗಿದ್ದಾರೆ**

**ಪಾರ್ಟ್ ಟೈಂ/ಫುಲ್ ಟೈಂ,. ಎಲ್.ಕೆ.ಜಿ. ಯಿಂದ 10ನೇ ತರಗತಿವರೆಗೂ ಎಲ್ಲಾ ವಿಷಯಗಳಿಗೂ ಎಲ್ಲಾ ಭಾಷೆಗಳಿಗೂ ಶಿಕ್ಷಕರು ಮತ್ತು ಆಫೀಸ್ ಕೆಲಸಕ್ಕೆ ಕ್ಲರ್ಕ್ ಬೇಕಾಗಿದ್ದಾರೆ. ನಿವೃತ್ತಿ ಹೊಂದಿರುವವರು ಅಥವಾ ಯಾವುದೇ ಪದವೀಧರರು ನಿಮ್ಮ ಬಯೋಡೆಟಾ ಮತ್ತು ಇತ್ತೀಚಿನ ಪಾಸ್‌ಪೋರ್ಟ್ ಸೈಜ್ ಫೋಟೋವನ್ನು ಕೆಳಕಂಡ ಮೊಬೈಲ್ ನಂಬರಿಗೆ ವಾಟ್ಸಪ್ ಮಾಡಿ ಅಥವಾ ಈಮೇಲ್ ಮಾಡಿ**

**ಜಿ.ಎಸ್. ಸ್ಕೂಲ್,** **ಕಾಮಾಕ್ಯ ಥೇಟರ್ ಹಿಂಭಾಗ, ಬನಶಂಕರಿ, ಬೆಂಗಳೂರು.**

**ಮೊಬೈಲ್ ನಂ. 82172 72993 (ಕಾರ್ತಿಕ), ಇಮೈಲ್ : edulearning2012@gmail.com**

# ದೈವ ಮತ್ತು ಪುರುಷ ಪ್ರಯತ್ನ- 1

(ಕೃಪೆ : ಆರ್ಯಸಂಸ್ಕೃತಿ ಮಾಸಪತ್ರಿಕೆ, ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಮೈಸೂರು)

-ಡಾ. ಶಂಕರನಾರಾಯಣ ಜೋಯ್ಸ್

ಈ ಜೀವನಯಾತ್ರೆಯಲ್ಲಿ ಸಾಗುವವನಿಗೆ ಒಂದಲ್ಲ ಒಂದು ಹಂತದಲ್ಲಿ ತನ್ನ ಬಗ್ಗೆ, ತನ್ನ ಜೀವನದ ಆಗುಹೋಗಳ ಬಗ್ಗೆ ಹಾಗು ಈ ಜಗತ್ತಿನ ಆಗು ಹೋಗುಗಳ ಬಗ್ಗೆ ಚಿಂತನೆ ತಲೆದೋರದಿರದು. ಬಾಲರಿರಲಿ, ಮಧ್ಯವಯಸ್ಕರಿರಲಿ, ವೃದ್ಧರಿರಲಿ; ಪಾಮರರಾಗಿರಲಿ, ಪಂಡಿತರಾಗಿರಲಿ ಅವರವರ ಬುದ್ಧಿಯ ಸ್ವಭಾವ-ಸಾಮರ್ಥ್ಯಗಳಿಗೆ ತಕ್ಕಂತೆ ಚಿಂತನೆಯ ಚಿಹ್ನೆಗಳು ತಮ್ಮ ಗುರುತುಗಳನ್ನು ತೋರುತ್ತಿರುತ್ತವೆ. ಬುದ್ಧಿಯ ಹರಿವೆ ಪ್ರಕೃತಿಯ ಪದರಗಳಲ್ಲಿ ಅನುಕೂಲವಾಗಿ ಸಾಗಿದಾಗ ಪ್ರಕೃತಿಗರ್ಭದಲ್ಲಿ ಉತ್ತರಗಳು ತಾವೇ ಲಭಿಸಿರುತ್ತವೆ. ಮಾನವನ ಬುದ್ಧಿಗೇ ಅಂತಹ ತತ್ತ್ವಶೋಧಕವಾದ ಸ್ವಭಾವವಿದೆ.

ಕಾಲದ ಇತಿಹಾಸದಲ್ಲಿ ಅದರ ಅನಲ್ಪವಾದ ಕುರುಹುಗಳನ್ನು ಕಾಣುತ್ತಲೇ ಇದ್ದೇವೆ. ಆದರೆ ಈ ಚಿಂತನೆಯ ಹಾದಿಯಲ್ಲಿ ಇನ್ನೊಂದು ಮುಖವೂ ಇದೆ. ಅಂದರೆ ಪ್ರಶ್ನೆಗಳಿಗೆ ಬಹು ಸಮಂಜಸವಾದ ಉತ್ತರ ತೋರಿದಂತಿರುತ್ತದೆ. ಆದರೆ ಅದು ವಾಸ್ತವಿಕವಾದ ಉತ್ತರವಾಗಿರುವುದಿಲ್ಲ. ಅದನ್ನು ಉತ್ತರಾಭಾಸವೆನ್ನಬೇಕು. ಕಾರಣ ಒಂದೇ ಪ್ರಶ್ನೆಗೆ ಇನ್ನೊಂದು ಉತ್ತರ, ನಾಳೆ ಮತ್ತೊಂದು, ನಾಡಿದ್ದು ಇನ್ನೊಂದು, ಹೀಗೆ ಹಳೆಯ ಉತ್ತರಗಳನ್ನು ಮೆಟ್ಟಿ ಹೊಸ ಉತ್ತರಗಳು ಬುದ್ಧಿಯಲ್ಲಿ ವಿಹರಿಸುತ್ತವೆ. ಇಂತಹ ಉತ್ತರದ ಪರಂಪರೆಯನ್ನೇ ಅವಲಂಬಿಸಿ ಬುದ್ಧಿ ತುದಿಗಾಣದೆ ಸೋಲುವುದಿದೆ. ಇದೂ ಅಲ್ಲದೆ ಬುದ್ಧಿಯ ಹರಿವೆ ಯಾವುದೋ ಕಟ್ಟಿಗೆ ಒಳಪಟ್ಟು ಮುಂದೆ ಸಾಗದಾದಾಗ ಕೆಲವಾರು ಬೃಹದಾಕಾರವಾದ ಪ್ರಶ್ನೆಗಳು ಎದುರಾಗುವುವು. ಆಗಲೂ ಬುದ್ಧಿ ಸೋಲುತ್ತೆ. ತಮ್ಮ ಬುದ್ಧಿಯ ಹರಿವೆಗೆ ದಾರಿತೋರುವವರು ಯಾರಾದರೂ ಇದ್ದಾರೆಯೆ? ಎಂದು ಆಗ ಅರಸುವುದೂ ಉಂಟು. ಅವಲಂಬನವನ್ನು ಬಯಸುವ ಆ ಬುದ್ಧಿಗೆ ದಿಗ್ದರ್ಶನಗಳೂ ದೊರೆಯುವುದುಂಟು. ಹೀಗೆ, ಚಿಂತನ, ಪ್ರಶ್ನೆ, ಉತ್ತರಗಳ ಪ್ರವಾಹದಲ್ಲಿ ಎಲ್ಲರೂ ಪಾಲ್ಗೊಂಡವರೆ! ಅನಂತ ಕಾಲದಿಂದ ಮಹರ್ಷಿಗಳೂ, ಜ್ಞಾನಿಗಳೂ, ತಪಸ್ವಿಗಳೂ, ಚಿಂತಕರೂ, ಮನನಶೀಲರೂ ತಮ್ಮ ಬುದ್ಧಿಯನ್ನು ಹರಿಸಿ ಒಂದು ನಿಲುಗಡೆಯನ್ನು ಕಂಡಿದ್ದರೂ, ಅದರ ಸಾರವನ್ನು ಸಾರಿ ಸಾರಿ ಹೇಳಿದ್ದರೂ ಜನಸಾಮಾನ್ಯರ ಮನಸ್ಸಿಗೆ ಗಂಟಾಗಿಯೇ ತೋರುವ ಒಂದು ವಿಚಾರವೆಂದರೆ 'ಈ ಜೀವನದ ಆಗುಹೋಗುಗಳಿಗೆ ಕಾರಣವೇನು?' ಎಂಬುದು. ಜೀವನದ ಆಗುಹೋಗುಗಳಿಗೆ ಕಾರಣ 'ವಿಧಿ, ದೈವ, ಭಾಗ್ಯ, ಕರ್ಮ' ಎಂದು ಒಂದುಪ್ರಚಲಿತವಾದ ಉತ್ತರ. ಅದನ್ನುಬಗೆಬಗೆಯಾಗಿ ಕೊಂಡಾಡಿರುವುದುಂಟು. ಉದಾಹರಣೆ

**ಅಯಾಚಿತಃ ಸುಖಂ ಧತ್ತೇ ಯಾಚಿತಶ್ಚ ನ ಯಚ್ಛತಿ ।**
**ಸರ್ವಸ್ವಂ ಚಾಪಿ ಹರತೇ ವಿಧಿರುಚ್ಛೃಙ್ಖಲೋ ನೃಣಾಮ್ ॥**

ಯಾಚಿಸದಿದ್ದರೂ ವಿಧಿ ಸುಖವನ್ನು ಒದಗಿಸುತ್ತೆ. ಯಾಚಿಸಿದಾಗ ಏನನ್ನೂ ಕೊಡದು. ಅಲ್ಲದೆ ಎಲ್ಲವನ್ನೂ ಅಪಹಾರಮಾಡುತ್ತೆ. ಮನುಷ್ಯರ ವಿಷಯದಲ್ಲಿ ಬುದ್ಧಿಯು ಉಚ್ಛೃಂಖಲವಾದದ್ದು ಎಂದು ವಿಧಿಯ ಹಿರಿಮೆಯನ್ನು ಹಾಡಿದ್ದಾರೆ. 'ವಿಧಿವಿಲಾಸ'ವೆಂದು ಆಶ್ಚರ್ಯದಿಂದಭಾವಿಸುವಸಂದರ್ಭಗಳೂ ಅನೇಕ ಕಂಡುಬರುತ್ತವೆ. ಉದಾಹರಣೆಗೆವಿಷ್ಣುಪುರಾಣದ ಒಂದುಮಾತು

**ಜಡಾನಾಮವಿವೇಕಾನಾಮ್ ಅಶೂರಾಣಾಮಪಿ ಪ್ರಭೋ ।**

**ಭಾಗ್ಯಭೋಜ್ಯಾನಿ ರಾಜ್ಯಾನಿ ಸನ್ತ್ಯನೀತಿಮತಾಮಪಿ ॥**

'ಎಲೈ ರಾಜನೇ! ಜಡರಿಗೂ, ಅವಿವೇಕಿಗಳಿಗೂ, ಅಶೂರರಿಗೂಹಾಗೆ ಅನೀತಿವಂತರಿಗೂಸಹ ಅವರವರಭಾಗ್ಯವಶಾತ್ ರಾಜ್ಯವುಭೋಗಿಸಲು ಲಭಿಸುತ್ತದೆ' ಎಂದು. ಅಲ್ಲದೆ ಇಂತಹವಿಧಿಯನ್ನು ಯಾವಮಾನುಷ ಪ್ರಯತ್ನದಿಂದಲೂ ಗೆಲ್ಲಲಾಗದು ಎಂಬ ವಿಚಾರವೂ ಗೋಚರಿಸುತ್ತೆ. ಉದಾಹರಣೆಗೆ-

**ನೈವಾರ್ಥೇನ ನ ಕಾಮೇನ ವಿಕ್ರಮೇಣ ನ ಚಾಜ್ಞಯಾ ।**

**ಶಕ್ಯಾ ದೈವಗತಿರ್ಲೋಕೇ ನಿವರ್ತಯಿತುಮುದ್ಯತಾ ॥**

ಧನದಿಂದಲಾಗಲಿ, ಕಾಮದಿಂದಾಗಲಿ, ಪರಾಕ್ರಮದಿಂದಾಗಲಿ ಆಜ್ಞೆಯಿಂದಲಾಗಲಿ, ಲೋಕದಲ್ಲಿ ದೈವಗತಿಯು ಬದಲಾಯಿಸಲ್ಪಡದು' ಎಂದು. 'ದೈವವು ಸರ್ವಸಮರ್ಥ' ವೆಂಬುದನ್ನು ನಿರೂಪಿಸುವ ಭಾಗವತದ ಒಂದುವಾಕ್ಯ

**ಪಥಿ ಚ್ಯುತಂ ತಿಷ್ಠತಿ ದಿಷ್ಟರಕ್ಷಿತಂ**
**ಗೃಹೇ ಸ್ಥಿತಂ ತದ್ವಿಹತಂ ವಿನಶ್ಯತಿ।**
**ಜೀವತ್ಯನಾಥೋಪಿ ತದೀಕ್ಷಿತೋ ವನೇ**
**ಗೃಹೇಪಿ ಗುಪ್ತೋಽಸ್ಯ ಹತೋ ನ ಜೀವತಿ ॥**

ಬೀದಿಯಲ್ಲಿ ಬಿದ್ದಿದ್ದರೂ ಒಂದು ವಸ್ತುವು ವಿಧಿಯಿಂದ ರಕ್ಷಿತವಾಗಿ ಉಳಿದುಕೊಳ್ಳುತ್ತೆ. ಅದಿಲ್ಲದಿದ್ದಾಗ ಮನೆಯಲ್ಲಿದ್ದರೂ ನಾಶವಾಗುತ್ತದೆ. ಅನಾಥವಾಗಿ ವನದಲ್ಲಿ ಇದ್ದರೂ ದೈವದಿಂದ ನೋಡಲ್ಪಟ್ಟರೆ ಬದುಕಿಕೊಳ್ಳುತ್ತಾನೆ. ಮನೆಯಲ್ಲಿಟ್ಟು ಕಾಪಾಡಿದರೂ ದೈವಹತನಾದವನು ಬದುಕುವುದಿಲ್ಲ ಎಂದು ಹೇಳುತ್ತಿದೆ. ಹೀಗೆ ಬಗೆ ಬಗೆಯಾಗಿ ವಿಧಿಯ ಕೊಂಡಾಟವಿದೆಯಷ್ಟೆ! ಇನ್ನು 'ಕರ್ಮ'ದಬಗ್ಗೆಯೂ ಇಂತಹ ಅನೇಕ ಹೇಳಿಕೆಗಳನ್ನು ಗಮನಿಸಬಹುದು. ಉದಾಹರಣೆಗೆ

**ನ ಬುದ್ಧಿಃ ಧನಲಾಭಾಯ ನ ಜಾಡ್ಯಮಸಮೃದ್ಧಯೇ।**

**ಕರ್ಮಪರ್ಯಾಯವೃತ್ತಾನ್ತಂ ಪ್ರಾಜ್ಞೋ ಜಾನಾತಿ ನೇತರಃ॥**

ಧನಲಾಭಕ್ಕೆ ಬುದ್ಧಿಕಾರಣವಲ್ಲ. ಸಂಪತ್ತು ಬೆಳೆಯದಿರುವುದಕ್ಕೆ ಜಾಡ್ಯ ಕಾರಣವಲ್ಲ. ಕರ್ಮದ ಪರ್ಯಾಯದ ಈ ಸಮಾಚಾರವನ್ನು ಪ್ರಾಜ್ಞನಾದವನು ತಿಳಿಯಬಲ್ಲನೇ ವಿನಃ ಇತರನಲ್ಲ, ಎಂಬ ಮಾತು ಕರ್ಮವೇ ಎಲ್ಲಕ್ಕೂ ಕಾರಣವೆಂದು ಸಾರುತ್ತೆ. ಮಹಾಭಾರತದ ಒಂದು ಮಾತು-

**ಅಚೋದ್ಯಮಾನಾನಿ ಯಥಾ ಪುಷ್ಪಾಣಿ ಚ ಫಲಾನಿ ಚ।**

**ಸ್ವಂ ಕಾಲಂ ನಾತಿವರ್ತನ್ತೇ ತಥಾ ಕರ್ಮ ಪುರಾಕೃತಮ್॥**

'ಯಾವಪ್ರೇರಣೆಯೂ ಇಲ್ಲದೆ ಹೇಗ 'ಪುಷ್ಪ ಹಾಗೂ ಫಲಗಳು ಕಾಲವನ್ನು ಮೀರದೇ ಗೋಚರಿಸುವವೋ ಹಾಗೆ ಹಿಂದೆ ಮಾಡಿದ ಕರ್ಮಗಳು ಸಕಾಲದಲ್ಲಿ ಫಲಿಸುತ್ತವೆ' ಎಂದು ಕರ್ಮದ ಬಲವನ್ನು ವಿವರಿಸುತ್ತೆ. ಈ ಕರ್ಮವನ್ನು ಅನುಭವಿಸಿಯೇ ತೀರಬೇಕು. ಅನುಭವಿಸದೇ ಇದಕ್ಕೆ ಇನ್ನೊಂದು ಪರಿಹಾರವಿಲ್ಲವೆಂಬ ಮಾತೂ ಪ್ರಸಿದ್ಧವಾಗಿದೆ. ಉದಾಹರಣೆಗೆ–

**ಅವಶ್ಯಮೇವ ಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಮ್ ।**

**ನಾಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತೈರಪಿ॥**

'ಶುಭ–ಅಶುಭರೂಪವಾದ ಯಾವ ಕರ್ಮಗಳುಂಟೋ ಅವುಗಳನ್ನು ಅನುಭವಿಸಲೇಬೇಕು. ಅನುಭವಿಸದಿದ್ದರೆ ಕೋಟಿಕಲ್ಪಗಳಾದರೂ ಈ ಕರ್ಮಗಳು ಕ್ಷಯಿಸುವುದಿಲ್ಲ' ಎಂದು. ಹೀಗೆ ಕರ್ಮದ ಅನಿವಾರ್ಯತೆ ಯನ್ನು ಬಣ್ಣಿಸಿರುತ್ತಾರೆ. ಇಂತಹ ವಿವರಣೆಗಳನ್ನೆಲ್ಲ ಗಮನಿಸಿದಾಗ, ದೈವವೆಂದರೇನು? ವಿಧಿಯೂ ದೈವವೂ ಒಂದೇ ವಸ್ತುವೇ? ಭಾಗ್ಯವೆಂದರೇನು? ಕರ್ಮವು ಎಲ್ಲವನ್ನೂ ನಿಯಮಿಸುತ್ತದೆಯೆ? ಇಷ್ಟರ ಮಧ್ಯೆ ಈ ಜನ್ಮದ ಪುರುಷ ಪ್ರಯತ್ನಕ್ಕೆ ಏನಾದರೂ ಪ್ರಯೋಜನ ವಿದೆಯೇ? ಎಂಬ ಹಲವು ಬಗೆಯ ಪ್ರಶ್ನೆಗಳು ಎದುರಾಗುತ್ತವೆ.

**ವಿದ್ವದ್ಭಿಃ ಸೇವಿತಃ ಸದ್ಭಿಃ ನಿತ್ಯಮದ್ವೇಷರಾಗಿಭಿಃ।**

**ಹೃದಯೇನಾಭ್ಯನುಜ್ಞಾತಃ ಯೋ ಧರ್ಮಃ ತಂ ನಿಬೋಧತ॥**

'ರಾಗದ್ವೇಷರಹಿತರಾದ ಸತ್ಪುರುಷರಾದ ವಿದ್ವಾಂಸರಿಂದ ಸೇವಿಸಲ್ಪಡುವಂತಹದು ಯಾವುದಿದೆಯೋ ಅಂತಹ ಧರ್ಮವನ್ನು ತಿಳಿದುಕೊಳ್ಳಿ' ಎಂದು ಆದೇಶಿಸಿದರು. ಆದ್ದರಿಂದ ಧರ್ಮಮಯವಾದ ಬಾಳಾಟಕ್ಕೆ ಎಲ್ಲೆಲ್ಲಿಂದ ಮಾರ್ಗದರ್ಶನ ಅಥವಾ ಆದೇಶಗಳುಂಟು ಎಂದರೆ, ನಿಸರ್ಗದಶಾಸನ, ಅದರದೇ ಶಬ್ದಾತ್ಮಕವಾದ ಅಭಿವ್ಯಕ್ತಿಯಾದ ವೇದ, ಅದರ ಮರ್ಮವನ್ನೇ ಬಲ್ಲವರಾದ; ರಾಗದ್ವೇಷರಹಿತರೂ, ಜ್ಞಾನ ವಿಜ್ಞಾನ ಸಂಪನ್ನರೂ ಆದ ಜ್ಞಾನಿಗಳ ಆದೇಶ ಇವಿಷ್ಟರಿಂದಲೂ ಉಂಟು. ಈ ಎಲ್ಲ ದ್ವಾರಗಳಿಂದಲೂ ಧರ್ಮಸಂದೇಶವನ್ನು ಸ್ವೀಕರಿಸಿ ಧರ್ಮವನ್ನು ಸಾಧಿಸಬೇಕಾಗಿದೆ. ಅಂತಹ ಮಹಾಕಾರ್ಯದಲ್ಲಿ ತತ್ಪರರಾದವರು ಮಹಾತ್ಮರು. ಅವರು ನಮ್ಮ ಬಾಳಾಟಕ್ಕೆ ದಾರಿದೀಪರಾಗಲಿ.

ಜೀವನದ ಆಗುಹೋಗುಗಳನ್ನು ನಿರ್ಣಯಿಸುವ ಅಂಶಗಳಾವುವು? ಎಂಬ ಪ್ರಶ್ನೆಗೆ ಸಾಮಾನ್ಯವಾಗಿ ದೊರೆಯುವ ಉತ್ತರ–ವಿಧಿ, ದೈವ, ಭಾಗ್ಯ, ಕರ್ಮ, ಎಂಬುದಾಗಿ. ಇದೇ ಪಂಕ್ತಿಯಲ್ಲಿ ಬಂದು ನಿಲ್ಲುವ ಇನ್ನೂ ಕೆಲವು ಉತ್ತರಗಳೂ ಉಂಟು. 'ಅಯ್ಯೋ ನನ್ನ ಹಣೆಬರಹ, ಯಾರೇನು ಮಾಡಲು ಸಾಧ್ಯ?' ಎಂದು ಒಂದು ಕಾರ್ಯವು ನಮ್ಮಿಚ್ಛೆಯಂತೆ ಈಡೇರದಿದ್ದಾಗ ಹೊರಬರುವ ಮಾತಾಗಿದೆ. ಇದನ್ನು 'ಹಣೆಯಪಟ್ಟಿಯಲ್ಲಿ ಬ್ರಹ್ಮ ಬರದದ್ದೆ ಇಷ್ಟು' ಎಂದು ಬ್ರಹ್ಮನ ಕಾರ್ಯವಾಗಿ ನೆನಪಿಸಿಕೊಳ್ಳುವುದೂ ಇದೆ. ಪ್ರಾಚೀನ ಸಾಹಿತ್ಯಗಳಲ್ಲಿ ಅಲ್ಲಲ್ಲಿ ಇಂತಹ ಮಾತುಗಳನ್ನು ನೋಡುತ್ತೇವೆ. ಉದಾಹರಣೆಗೆ–

**ಹರಿಣಾಪಿ ಹರೇಣಾಪಿ ಬ್ರಹ್ಮಣಾಪಿ ಸುರೈರಪಿ।**

**ಲಲಾಟಲಿಖಿತಾಂ ರೇಖಾಂ ಪರಿಮಾರ್ಷ್ಟುಂ ನ ಶಕ್ಯತೇ॥**

'ವಿಷ್ಣುವಿನಿಂದಾಗಲಿ, ಶಿವನಿಂದಾಗಲಿ, ಬ್ರಹ್ಮನಿಂದಲೇ ಆಗಲಿ ಹಣೆಯ ಬರಹವನ್ನು ಪರಿಹರಿಸಲಾಗುವುದಿಲ್ಲ' ಎಂಬ ಮಾತು ಒಂದೆಡೆ ಲಭಿಸಿದರೆ,

**ಅಲಿರನುಸರತಿ ಪರಿಮಲಂ ಲಕ್ಷ್ಮೀರನುಸರತಿ ನಯಗುಣಸಮೃದ್ಧಿಮ್।**

**ನಿಮ್ನಮನುಸರತಿ ಸಲಿಲಂ ವಿಧಿಲಿಖಿತಂ ಬುದ್ಧಿರನುಸರತಿ॥**

'ದುಂಬಿಯು ಪರಿಮಳವನ್ನನುಸರಿಸಿಸಾಗುತ್ತೆ. ನೀತಿರೂಪವಾದ ಗುಣವನ್ನನುಸರಿಸುತ್ತಾಳೆ ಲಕ್ಷ್ಮೀ. ನೀರು ತಗ್ಗುಭೂಮಿಯನ್ನನುಸರಿಸಿ ಹರಿಯುತ್ತೆ. ಬುದ್ಧಿಯು ಬ್ರಹ್ಮನ ಬರಹವನ್ನು ಹಿಂಬಾಲಿಸುತ್ತೆ' ಎಂದು ಇನ್ನೊಂದೆಡೆ ಹಣೆಯಬರಹದ ಹಿರಿಮೆಯನ್ನು ಎತ್ತಿ ಹೇಳಿರುವುದು ಗೋಚರಿಸುತ್ತೆ. ಅಳಿಸಲಾರದ ಬ್ರಹ್ಮಲೇಖ ಯಾವುದಿದು? ಹಣೆಗೂ ಇದಕ್ಕೂ ಏನಾದರೂ ಸಂಬಂಧವಿದೆಯೆ? ಅಥವಾ ಇವೆಲ್ಲ ಅರ್ಥ ಹೀನವಾದ ಆಲಂಕಾರಿಕವಾದ ಮಾತುಗಳೇ? ಎಂಬೀ ಮೊದಲಾದ ಪ್ರಶ್ನೆಗಳು ಎದುರಾಗುತ್ತವೆ.

ಈ ಸರಣಿಯ ಮಾತುಗಳ ಸಾಲಿನಲ್ಲೇ ಇನ್ನೊಂದು 'ಎಲ್ಲವೂ ಕಾಲದ ಮಹಿಮೆ, ಕಾಲವೇ ಕಾರ್ಯಸಿದ್ಧಿಗೂ ಕಾರಣ–ಕಾರ್ಯಹಾನಿಗೂ ಕಾರಣ' ಎಂಬವಮಾತೂ ಕಿವಿದೆರೆಗೆ ಬೀಳುತ್ತದೆಯಷ್ಟೆ. **'ಲೋಕಾನಾಮನ್ತಕೃತ್ ಕಾಲಃ**– ಕಾಲವು ಲೋಕಗಳನ್ನೇ ಮುಗಿಸುತ್ತೆ'– ಎಂಬ ಶಾಸ್ತ್ರವಾಕ್ಯವಿದೆ. ಕಲಿಯ ಮಹಿಮೆಯನ್ನು ವರ್ಣಿಸಿದ ಪರಿ ಅನಲ್ಪವಾಗಿದೆ. 'ಎಲ್ಲ ಕಾಲದಮಹಿಮೆ' ಎನ್ನುವಾಗ ಕಾಲಾನುಗುಣವಾದ ಪರಿವರ್ತನೆಗಳನ್ನು ಜ್ಞಾಪಿಸಿಕೊಳ್ಳುವುದುಮಾತ್ರವಲ್ಲದೇ ಗೋಚರಿಸುವ ಸುಖ–ದುಃಖಗಳಿಗೂಸಹ ಕಾಲವೇ ಕಾರಣ ಎಂದು ಭಾವಿಸುವ ಮನಸ್ಸೂ ಇದೆ. ಉದಾಹರಣೆಗೆ–

**ಧರ್ಮಃ ಪ್ರವ್ರಜಿತಃ ತಪಃ ಪ್ರಚಲಿತಂ ಸತ್ಯಂ ಚ ದೂರೇ ಗತಂ**

**ಪೃಥ್ವೀ ಮನ್ದಫಲಾ ನರಾಃ ಕಪಟಿನಶ್ಚಿತ್ತಂ ಚ ಶಾಠ್ಯೋರ್ಜಿತಮ್।**

**ರಾಜಾನೋಽರ್ಥ ಪರಾ ನ ರಕ್ಷಣಪರಾಃ ಪುತ್ರಾಃ ಪಿತುರ್ದ್ವೇಷಿಣಃ**

**ಸಾಧುಃ ಸೀದತಿ ದುರ್ಜನಃ ಪ್ರಭವತಿ ಪ್ರಾಪ್ತೇ ಕಲೌ ದುರ್ಯುಗೇ॥**

'ಧರ್ಮವು ಕಾಡುಸೇರಿತು, ತಪಸ್ಸು ಓಡಿತು, ಸತ್ಯವು ದೂರವಾಯಿತು, ಭೂಮಿಯು ಮಂದವಾಗಿ ಫಲಿಸಲಾರಂಭಿಸಿತು, ಜನರು ಕಪಟಿಗಳಾದರು, ಚಿತ್ತವುಶಾಠ್ಯದಿಂದ ತುಂಬಿತು, ರಾಜರು ಧನಪರರಾದರು, ರಕ್ಷಣನಿರತರಾಗಲಿಲ್ಲ. ಮಕ್ಕಳು ತಂದೆಯನ್ನು ದ್ವೇಷಿಸುವವರಾದರು. ದುರ್ಯುಗವಾದ ಕಲಿಕಾಲವು ಪ್ರಾಪ್ತವಾಗಲು ಸಜ್ಜನನು ದುರ್ಬಲನೂ ದುರ್ಜನನು ಬಲಿಷ್ಠನೂ ಆದನು' ಎಂದು. ಪ್ರಕಾರಾಂತರವಾಗಿಯೂ ಕಾಲದಮಹಿಮೆಯನ್ನುಹೇಳಿರುವುದುಂಟು.

**'ಆದಾನಸ್ಯಪ್ರದಾನಸ್ಯ ಕರ್ತವ್ಯಸ್ಯ ಚ ಕರ್ಮಣಃ।**

**ಕ್ಷಿಪ್ರಮಕ್ರಿಯಮಾಣಸ್ಯ ಕಾಲಃ ಪಿಬತಿ ತದ್ರಸಮ್॥**

'ತೆಗೆದುಕೊಳ್ಳುವುದು, ಕೊಡುವುದು ಮಾಡಬೇಕಾದ ಕರ್ತವ್ಯಗಳು, ಇವನ್ನು ಶೀಘ್ರವಾಗಿ ಮಾಡದಿದ್ದಲ್ಲಿ ಅದರ ರಸ(ಫಲ)ವನ್ನು ಕಾಲವು ಕುಡಿದು ಬಿಡುತ್ತೆ' ಎಂದು. ಹೀಗೆ ಒಂದುವಿಧವಾಗಿ ಕಾಲದ ಪ್ರಾಬಲ್ಯವನ್ನು ಹೇಳಿದರೆ, ಆ ಕಾಲವು ಬುದ್ಧಿಯ ಮೇಲೆ ಹಾವಳಿ ಮಾಡುವುದರ ದ್ವಾರಾ ತನ್ನ ಕಾರ್ಯವನ್ನು ಹೇಗೆ ಸಾಧಿಸಿ ಕೊಳ್ಳುತ್ತೆಯೆಂಬುದನ್ನೂ ವರ್ಣಿಸಿರುವುದುಂಟು.

**'ನ ಕಾಲೋ ದಂಡಮುದ್ಯಮ್ಯಶಿರಃ ಕೃಂತತಿ ಕಸ್ಯಚಿತ್ ।**

**ಕಾಲಸ್ಯ ಬಲಮೇತಾವತ್ ವಿಪರೀತಾರ್ಥದರ್ಶನಮ್ ॥**

'ಕಾಲವು ಕೋಲು ಎತ್ತಿಹಿಡಿದು ಯಾರ ತಲೆಯನ್ನೂ ಒಡೆಯುವುದಿಲ್ಲ. ಕಾಲದ ಬಲವಿಷ್ಟು ಅದು ಎಲ್ಲವನ್ನು ಅನ್ಯಥಾ ದರ್ಶನಮಾಡಿಸುತ್ತೆ, ಇರುವ ಸತ್ಯವನ್ನು ಬೇರೆಯಾಗಿ ತೋರಿಸುತ್ತೆ ಎಂದು. ಇದೇ ಸರಣಿಯನ್ನನುಸರಿಸಿ 'ಗ್ರಹಚಾರ' ಎಂಬಮಾತನ್ನು ಕೇಳುತ್ತೇವೆ. 'ಅಯ್ಯೋ ಅವನ ಗ್ರಹಚಾರವೇಹಾಗಿದೆ. ಯಾರೇನು ಮಾಡುವುದಕ್ಕೆ ಸಾಧ್ಯ' ಎಂದು. ಆಗುಹೋಗುಗಳಿಗೆ ಗ್ರಹಗತಿಯೇ ಕಾರಣವೆಂದು ಹೇಳುವುದನ್ನು ಕೇಳಿದ್ದೇವೆ. ಇತ್ತೀಚೆಗೆ ಜನಜನಗಳ ಮನದಲ್ಲೂ 'ಆಗುಹೋಗುಗಳಿಗೆಲ್ಲ ಕಾರಣ ವಾಸ್ತು' ಎಂಬ ಭಾವನೆ ಬೇರೂರಿದೆ. ಮನೆಯಬಾಗಿಲು ಆಗ್ನೇಯಕ್ಕಿದೆ, ದೇವರಮನೆ ನೈರುತ್ಯಕ್ಕಿದೆ, ಈಶಾನ್ಯಕ್ಕೆ ವಿಸ್ತಾರವಿಲ್ಲ ಎಂದು ಮೊದಲಾಗಿ ಹೇಳಿ ಇದರಿಂದಲೇ ಎಲ್ಲ ಅನರ್ಥಗಳೂ ನಡೆದಿವೆ, ಇದನ್ನು ಹೀಗೆ ಬದಲಾಯಿಸಿ ಎಂದು ಆದೇಶನೀಡುವ ವಾಸ್ತುತಜ್ಞರು ಕೇರಿಗೊಬ್ಬರಂತೆ ಹುಟ್ಟಿಕೊಂಡಿದ್ದಾರೆ. ಭಾರಿಭಾರಿ ಸೌಧಗಳೂ ಹೊಸರೂಪ ತಳೆದಿರುವುದನ್ನು ನೋಡುತ್ತೇವೆ. ವಾಸ್ತುವಿನ ಭಯದಿಂದಾಗಿ ಇದ್ದ ಬಂಡವಾಳವನ್ನೆಲ್ಲ ಕಳೆದುಕೊಂಡು ಸಾಲಕ್ಕೂ ತುತ್ತಾದೆವೆಂದು ತಮ್ಮ ಸ್ಥಿತಿಯನ್ನು ಹೇಳಿಕೊಳ್ಳಲಾಗದೆ ಒಳಗೊಳಗೆ ನೊಂದುಕೊಂಡವರೂ ಇಲ್ಲದಿಲ್ಲ. ಘಟನಾವಳಿಗಳೆಲ್ಲ ನಿಜಕ್ಕೂ ವಾಸ್ತುವಿನ ಮೇಲೆ ನಿಂತಿದೆಯೇ? ಅಥವಾ ಸರ್ವಥಾ ಸಂಬಂಧವೇ ಇಲ್ಲವೇ? ಅಲ್ಪವಾದ ಪರಿಣಾಮವಿರಬಹುದೇ? ಎಂಬಿವೇ ಮೊದಲಾದ ಪ್ರಶ್ನೆಗಳು ಹಾಗು ಅವರವರ ಮತಿಯಂತೆ ಸಮಾಧಾನಗಳೂ ಶ್ರವಣಗೋಚರವಾಗುತ್ತಿವೆ.

ಬಹು ಹಿಂದಿನಿಂದಲೂ ಬಹುಶಃ ಪ್ರಪಂಚದ ಬಹಳಷ್ಟು ದೇಶಗಳಲ್ಲಿ ಆಗಾಗ ಪ್ರಚುರಗೊಂಡ ವಿಚಾರಸರಣಿಯೊಂದಿದೆ. ಈ ಜೀವನದ ಯಾವುದೇ ಘಟನೆಯನ್ನು ವಿಶ್ಲೇಷಿಸಿ ನೋಡಿ, ಘಟನೆಯ ಹಿಂದೆ ಒಂದು ಕಾರಣವಿದ್ದೇ ಇದೆ. ಇವತ್ತು ಒಬ್ಬನಿಗೆ ಜ್ವರ ಬಂದಿದೆಯೆಂದಾದರೆ ಹಿಂದಿನ ದಿನಗಳಲ್ಲಿ ಆಹಾರ ನೀರು ಗಾಳಿಯಿಂದ ಮೈಗೆ ರೋಗದ ಸೂಕ್ಷ್ಮಾಣುಜೀವಿ ಪ್ರವೇಶಿಸಿರುವುದೇ ಕಾರಣ ವಾಗಿರುತ್ತೆ. ಇದನ್ನು ಪ್ರಯೋಗಶಾಲೆಯಲ್ಲಿ ಪರೀಕ್ಷಿಸಿ ತೋರಿಸ ಬಹುದಾಗಿದೆ. ಕೇವಲ ಮಾತಿನ ಮೇಲೆ ನಂಬಬೇಕಾಗಿಲ್ಲ. ಒಬ್ಬನಿಗೆ ಹುಟ್ಟಿನಿಂದಲೇ ಯಾವುದಾದರೂ ಇಂದ್ರಿಯವಿಕಲತೆ ಕಂಡುಬಂದಿರ ಬಹುದು. ಅದರ ಹಿಂದೆ ಜೀನ್ಸ್‌ನಲ್ಲಿ ಬಂದಿರುವ ದೋಷವೋ, ಶಿಶು ಗರ್ಭದಲ್ಲಿದ್ದಾಗ ನಡೆದ ವಿರೋಧಿಸನ್ನಿವೇಶವೋ ಕಾರಣವಾಗಿರುತ್ತೆ. ಯಾವುದೇ ಪೂರ್ವಜನ್ಮದ ಕರ್ಮವಾಗಲೀ, ದೈವವಾಗಲಿ ಕಾರಣ ವೆನ್ನುವುದಕ್ಕೆ ಅವಶ್ಯಕತೆಯೇ ಬರುವುದಿಲ್ಲ. ಕಾರ್ಯ ಅದಕ್ಕೊಂದು ಕಾರಣ ಪ್ರತ್ಯಕ್ಷವಾಗಿ ತೋರುತ್ತಿರುವಾಗ ಅಗೋಚರವಾದ ಯಾವುದೋ ಕಾರಣವನ್ನು ಚಿಂತಿಸುವುದರಲ್ಲಿ ಔಚಿತ್ಯವೇನಿದೆ?

ಸೃಷ್ಟಿಯಲ್ಲಿ ಏನೇ ವೈಚಿತ್ರ್ಯಕಂಡುಬಂದರೂ ಅದು ಸಕಾರಣ ವಾಗಿಯೇ ನಡೆದಿರುತ್ತೆ. ಕೆಲವು ವಿಷಯಗಳಲ್ಲಿ ಕಾರಣ ಪತ್ತೆಯಾಗದಿರ ಬಹುದು. ಇಂದಲ್ಲ ನಾಳೆ ವಿಶ್ಲೇಷಣೆ ಮುಂದುವರಿದಾಗ ಕಾರಣದ ಅರಿವಾಗುವುದರಲ್ಲಿ ಹಿಂದಿನಿಂದಲೂ ಒಂದು ಕುರುಡು ನಂಬಿಕೆ ಬೆಳೆದು ಬಂದಿದೆಯೆ? ಎಂಬ ಸಂಶಯ ಬುದ್ಧಿವಂತರನ್ನೆಲ್ಲ ಕಾಡದೇ ಇರದು.

ದೈವ, ಭಾಗ್ಯ, ಕರ್ಮ ಮೊದಲಾಗಿ ಅಂತಹ ಯಾವುದೇ ಕಾರಣವನ್ನೂ ಜೀವನದ ಆಗುಹೋಗುಗಳಿಗೆ ನಿರೂಪಿಸುವ ಸರಣಿ ಯಾವ ಯಾವ ಮುಖಗಳಲ್ಲಿ ಎಷ್ಟು ವ್ಯಾಪ್ತಿಯೊಂದಿಗೆ ಬೆಳೆದಿದೆ ಯೆಂಬುದನ್ನು ಗಮನಿಸಬೇಕಾದದ್ದೂ ಅಗತ್ಯವಷ್ಟೆ. ಜೀವಿಯು ಹುಟ್ಟು ವಾಗಲೇ ಜೀವನದ ಬಹುಮುಖ್ಯವಾದ ಘಟ್ಟಗಳೇ ನಿರ್ಣೀತ ವಾಗಿರುತ್ತದೆಂದು ತಿಳಿದು ಬರುತ್ತದೆ.

**ಆಯುಃ ಕರ್ಮ ಚ ವಿತ್ತಂ ಚ ವಿದ್ಯಾ ನಿಧನಮೇವ ಚ ।**

**ಪಂಚೈತಾನಿ ಚ ಸೃಜ್ಯನ್ತೇ ಗರ್ಭಸ್ಥಸ್ಯೈವ ದೇಹಿನಃ ॥**

'ಆಯುಷ್ಯ, ಕರ್ಮ, ಧನ, ವಿದ್ಯೆ, ನಿಧನ(ಮರಣ) ಈ ಐದೂ, ಜೀವಿಯು ಗರ್ಭಸ್ಥವಾಗಿರುವಾಗಲೇ ಸೃಷ್ಟಿಸಲ್ಪಟ್ಟಿರುತ್ತವೆ– ನಿರ್ಣಯಿಸಲ್ಪಟ್ಟಿರುತ್ತವೆ' ಎಂದು. ಇಷ್ಟೆಲ್ಲ ನಿರ್ಣಯವಾದ ಮೇಲೆ ಇನ್ನು ಪುರುಷ ಪ್ರಯತ್ನದಿಂದ ಸಾಧಿಸ ಬೇಕಾದದ್ದು ಏನಿದೆ? ಎಂಬುದು ಸಹಜವಾಗಿ ಉಂಟಾಗುವಪ್ರಶ್ನೆ. ಪುರುಷ ಪ್ರಯತ್ನದಿಂದ ಕಿಂಚಿತ್ತಾದರೂ ಸಾಧನೆಯಾಗದೇ? ಎಂದರೆ ಆ ಬಗ್ಗೆ ಕಿಂಚಿತ್ತೂ ಅವಕಾಶವೇ ಇಲ್ಲವೋ ಎಂಬಂತೆ ಮನದಟ್ಟು ಮಾಡುವ ಸಾಹಿತ್ಯಗಳು ಹೇರಳವಾಗಿವೆ. ಉದಾಹರಣೆಗೆ–

**ಯಸ್ಮಾಚ್ಚ ಯೇನ ಚ ಯದಾ ಚ ಯಚ್ಚ**

**ಯಾವಚ್ಚ ಯತ್ರ ಚ ಶುಭಾಶುಭಮಾತ್ಮಕರ್ಮ ।**

**ತಸ್ಮಾಚ್ಚ ತೇನ ಚ ತದಾ ಚ ತಚ್ಚ**

**ತಾವಚ್ಚ ತತ್ರ ಚ ವಿಧಾತೃವಶಾದುಪೈತಿ ॥**

'ಯಾವ ಉದ್ದೇಶದಿಂದ ಯಾವ ಸಾಧನವನ್ನು ಬಳಸಿ ಯಾವಾಗ ಎಲ್ಲಿ ಎಷ್ಟು ಪ್ರಮಾಣದ ಯಾವಶುಭವಾದ ಅಥವಾ ಅಶುಭವಾದ ಕರ್ಮವನ್ನು ತಾನು ಮಾಡಿದ್ದಾನೋ ಅದಕ್ಕೆ (ತಕ್ಕಂತೆ) ಅದೇ ಉದ್ದೇಶದಿಂದ ಅದೇ ಸಾಧನದಿಂದಾಗಿ ತಕ್ಕ ಕಾಲ ತಕ್ಕ ದೇಶದಲ್ಲಿ ಅದೇ ಪ್ರಮಾಣದ ಫಲವನ್ನು ವಿಧಿವಶದಿಂದ ಪಡೆಯುತ್ತಾನೆ' ಎಂಬ ಈ ಮಾತು ಬಹುಸ್ಪಷ್ಟವಾಗಿ ಎಲ್ಲವೂ ಪೂರ್ವ ಕರ್ಮದಿಂದ ನಿರ್ಧಾರಿತ ವಾಗಿದೆ ಯೆಂಬಂಶವನ್ನು ತಿಳಿಯಪಡಿಸುತ್ತೆ. ಆಯಸ್ಸುಮೊದಲಾದ ಒಂದೊಂದು ವಿಚಾರಗಳ ಬಗ್ಗೆ ಪರಿಶೀಲಿಸಿದರೂ ನಿಖರವಾದ ತೀರ್ಮಾನವನ್ನು ನೀಡುವ ಮಾತುಗಳು ಸಾಕಷ್ಟು ಇವೆ. ಪ್ರಸಿದ್ಧವಾದ ಒಂದೆರಡು ಉದಾಹರಣೆಗಳನ್ನು ಗಮನಿಸುವುದಾದರೆ–

**ನಾಕಾಲೇ ಮ್ರಿಯತೇ ಜನ್ತುಃ ವಿದ್ಧಃ ಶರಶತೈರಪಿ ।**

**ಕುಶಕನ್ಟಕವಿದ್ಧೋಽಪಿ ಪ್ರಾಪ್ತಕಾಲೋ ನ ಜೀವತಿ ॥**

'ನೂರುಬಾಣಗಳಿಂದಭೇದಿಸಲ್ಪಟ್ಟರೂ ಅಕಾಲದಲ್ಲಿ ಜೀವಿಯು ಸಾವನ್ನಪ್ಪುವುದಿಲ್ಲ. ಕಾಲ ಪ್ರಾಪ್ತವಾದಾಗ ದರ್ಭೆಯ ತುದಿಯಿಂದ ಚುಚ್ಚಲ್ಪಟ್ಟರೂ ಸಹ ಜೀವಿಸನು' ಎಂಬಮಾತು ಕಾಲದಲ್ಲಿ ಪ್ರಾಪ್ತವಾಗುವ ಮರಣದ ಅನಿವಾರ್ಯತೆಯನ್ನು ಎತ್ತಿಹೇಳುತ್ತಿದೆ. ಅದೇ ರೀತಿ–

**ವನೇ ರಣೇ ಶತ್ರುಜಲಾಗ್ನಿಮಧ್ಯೇ**
**ಮಹಾರ್ಣವೇ ಪರ್ವತಮಸ್ತಕೇ ವಾ ।**
**ಸುಪ್ತಂ ಪ್ರಮತ್ತಂ ವಿಷಮಸ್ಥಿತಂ ವಾ**
**ರಕ್ಷನ್ತಿ ಪುಣ್ಯಾನಿ ಪುರಾಕೃತಾನಿ ॥**

ಕಾಡಿನಲ್ಲೂ, ಯುದ್ಧರಂಗದಲ್ಲೂ, ಶತ್ರು–ಜಲ ಹಾಗು ಅಗ್ನಿ ಮಧ್ಯದಲ್ಲಿದ್ದಾಗಲೂ, ಮಹಾಸಾಗರದಲ್ಲೂ, ಪರ್ವತದ ತುದಿಯಲ್ಲಿದ್ದಾಗಲೂ, ನಿದ್ರಿಸಿರುವಾಗಲೂ, ಮತ್ತತೆಯನ್ನು ಹೊಂದಿದ್ದಾಗಲೂ, ವಿಷಮಿಸಿದ ಸ್ಥಿತಿಯಲ್ಲಿದ್ದಾಗಲೂ ಹಿಂದೆ ಮಾಡಿದ ಪುಣ್ಯಕರ್ಮಗಳು ಕಾಪಾಡುತ್ತವೆ' ಎಂದಾಗ ಮೃತ್ಯುಪ್ರದವಾದ ಭಯಾನಕವಾದ ಸಂದರ್ಭಗಳಲ್ಲೂ ಬೆಂಬತ್ತಿ ಕಾಪಾಡುವುದು ಜನ್ಮಾಂತರದ ಕರ್ಮವೇ ಎಂದು ಸ್ಪಷ್ಟ. ಇಂತಹ ಸನ್ನಿವೇಶಗಳಲ್ಲೂ ಪುರುಷಪ್ರಯತ್ನ ಅಗತ್ಯವಿಲ್ಲ! ಎಂದರೆ ಅದೊಂದು ಸೋಜಿಗದ ಸಂಗತಿ ಎನ್ನಿಸಬಹುದಲ್ಲವೆ?

ಈ ಬದುಕಿನ ನಿರ್ವಾಹಕ್ಕಾಗಿ ಒಂದು ಕರ್ಮ ಅಥವ ವೃತ್ತಿಯನ್ನು ಎಲ್ಲರೂ ಬಯಸುತ್ತಾರೆ. ವೃತ್ತಿಯನ್ನು ಪಡೆಯಲು ಪ್ರತಿಯೊಬ್ಬನೂ ಅಹೋರಾತ್ರ ಅದೆಷ್ಟು ಪರಿತಪಿಸುತ್ತಾನೆ! ಅದೆಷ್ಟು ಪ್ರಯತ್ನಿಸುತ್ತಾನೆ! ಆದರೆ ಈ ಬಗ್ಗೆಯೂ ಸಹ ಹುಟ್ಟುವಾಗಲೇ ಅದೆಲ್ಲ ನಿಶ್ಚಯವಾಗಿದೆ ಎಂಬ ಆಶಯವನ್ನೇ ಹೊತ್ತ ನುಡಿಮುತ್ತುಗಳನ್ನು ನೋಡಿದರೆ ಅಚ್ಚರಿ ಪಡೋಣವೇ? ನಗೋಣವೇ? ತಾತ್ಸಾರಪಡೋಣವೇ? ಉದಾಹರಣೆಗೆ,

**ವೃತ್ತ್ಯರ್ಥಂ ನಾತಿ ಚೇಷ್ಟೇತ ಸಾ ಹಿ ಧಾತ್ರೈವ ನಿರ್ಮಿತಾ ।**

**ಗರ್ಭಾದುತ್ಪತಿತೇ ಜನ್ತೌ ಮಾತುಃ ಪ್ರಸ್ರವತಃ ಸ್ತನೌ ॥**

ವೃತ್ತಿಗಾಗಿ ಹೆಚ್ಚೇನೂ ಪ್ರಯತ್ನಿಸಬೇಕಾಗಿಲ್ಲ. ಅದು ಬ್ರಹ್ಮನಿಂದಲೇ ನಿರ್ಮಿತವಾಗಿದೆ. ಗರ್ಭದಿಂದ ಜೀವಿಯು ಹೊರಬೀಳುತ್ತಿರುವಾಗಲೇ ತಾಯಿಯ ಸ್ತನಗಳು ಸ್ರವಿಸಲಾರಂಭಿಸುತ್ತವೆ. ಯಾವುದೇ ಸುಖದುಃಖದ ಅನುಭವವೂ ಸಹ ದೈವಾಧೀನವಾದದ್ದು. ದೈವವೇ ಅಲ್ಲಲ್ಲಿಗೆ ಕರೆದೊಯ್ದು ಆ ಸುಖದುಃಖಗಳನ್ನು ಒದಗಿಸುತ್ತೆಯಂತೆ–

**ಯೇನ ಯತ್ರೈವ ಭೋಕ್ತವ್ಯಂ ಸುಖಂ ವಾ ದುಃಖಮೇವ ವಾ ।**

**ಸ ತತ್ರ ಬದ್ಧ್ವಾ ರಜ್ಜ್ವೇವ ಬಲಾದ್ದೈವೇನ ನೀಯತೇ ॥**

'ಯಾರಿಂದ ಎಲ್ಲಿಸುಖವೋ ದುಃಖವೋ ಅನುಭವಿಸಲ್ಪಡಬೇಕಾಗಿದೆಯೋ ಅಲ್ಲಿಗೆ ಅವನು ದೈವದಿಂದಹಗ್ಗದಲ್ಲಿ ಕಟ್ಟಿಯೋ ಎಂಬಂತೆ ಕರೆದೊಯ್ಯಲ್ಪಡುತ್ತಾನೆ' ಎಂದಮೇಲೆ ಜೀವನದಲ್ಲಿ ಮಾಡಬೇಕಾದದ್ದಾದರೂ ಏನಿದೆ? ಎನ್ನಿಸಿದರೆ ಅದೇನು ವಿಚಿತ್ರವಲ್ಲ. ಇನ್ನು ಧನದ ಬಗ್ಗೆಯೂ 'ಎಲ್ಲವಿಧಿಚಿತ್ತ' ಎಂಬ ಧ್ವನಿಯೇ ಎದ್ದು ಕೇಳುತ್ತಿದೆ.

**ಪದೇ ಪದೇ ಚ ರತ್ನಾನಿ ಯೋಜನೇ ರಸಕೂಪಿಕಾ ।**

**ಭಾಗ್ಯಹೀನಾ ನ ಪಶ್ಯನ್ತಿ ಬಹುರತ್ನಾ ವಸುನ್ಧರಾ ॥**

ಹೆಜ್ಜೆಹೆಜ್ಜೆಯಲ್ಲೂ ರತ್ನಗಳಿವೆ. ಪ್ರತಿಯೋಜನದಷ್ಟು ದೂರದಲ್ಲೂ ರಸದ ಬಾವಿಯಿದೆ. ಭೂಮಿಯೆಲ್ಲ ರತ್ನದಿಂದ ತುಂಬಿದೆ. ಆದರೆ ಭಾಗ್ಯಹೀನರು ನೋಡಲಾರರು' ಇಷ್ಟು ದೂರದವರೆಗೆ ಜೀವನದಲ್ಲಿ ಆಧಿಪತ್ಯ ನಡೆಸುತ್ತೆಂದು ಹೇಳುವ 'ಭಾಗ್ಯ' ಎಂದರೇನು? ಚಿಂತಿಸಬೇಕಾದ ವಿಷಯವಲ್ಲವೇ?


**ಪೂರ್ಣಪ್ರಜ್ಞ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ**

**ಶುಭಾಶಯಗಳೊಂದಿಗೆ**

**ನಂ. 552, 'ಪೂರ್ಣಪ್ರಜ್ಞ ಸುವರ್ಣಭವನ',**
**ಉತ್ತರಹಳ್ಳಿ–ಕೆಂಗೇರಿ ಮುಖ್ಯರಸ್ತೆ**
**ಪೂರ್ಣಪ್ರಜ್ಞ ನಗರ, ಬೆಂಗಳೂರು–560 061.**
**ದೂ. ಸಂ. 080–26731335, 26731336**



**ಬಡಾವಣೆ ವಿವರಗಳು :**

1. ಪೂರ್ಣಪ್ರಜ್ಞ ಬಡಾವಣೆ, ಕತ್ರಿಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು-560 085
2. ಪೂರ್ಣ ಪ್ರಜ್ಞನಗರ, ಉತ್ತರಹಳ್ಳಿ, ಸುಬ್ರಮಣ್ಯಪುರ ಪೋಸ್ಟ್, ಬೆಂಗಳೂರು-560 061

**ಸಂಘದ ಆಡಳಿತ ಮಂಡಳಿ ಸದಸ್ಯರು**

| | | | | | |
|---|---|---|---|---|---|
| ಹಯಗ್ರೀವಾಚಾರ್ | ಅಧ್ಯಕ್ಷರು | ಕೃಷ್ಣಮೂರ್ತಿ ಕೆ.ಎನ್. | ನಿರ್ದೇಶಕರು | ವೆಂಕಟೇಶ್ ಎಸ್.ವಿ. | ನಿರ್ದೇಶಕರು |
| ಅನಂತಸ್ವಾಮಿ ಎಸ್. | ಉಪಾಧ್ಯಕ್ಷರು | ವಿಶ್ವನಾಥ್ ಜಿ. | ನಿರ್ದೇಶಕರು | ರಾಮಯ್ಯ ಎಸ್.ಟಿ. | ನಿರ್ದೇಶಕರು |
| ಸುಧೀಂದ್ರ ಎಸ್.ಕೆ. | ನಿರ್ದೇಶಕರು | ಈಶ್ವರಿ ಜಿ.ಸಿ. | ನಿರ್ದೇಶಕರು | ಸಂಜೀವ್ ಕುಮಾರ್ ಎಸ್ | ನಿರ್ದೇಶಕರು |
| ಮೊಕಾಶಿ ಡಿ.ಎಚ್. | ನಿರ್ದೇಶಕರು | ರಾಧಮಣಿ ವಿ.ಕೆ. | ನಿರ್ದೇಶಕರು | | |

## ಜನ ಜಾತ್ರೆಯ ಸದ್ಭಾವನಾ ಯಾತ್ರೆ

# ಸಂತಸ ಸಂಭ್ರಮಗಳಿಂದ ಉಕ್ಕೇರಿದ ಜನಸಾಗರ













# ಮಹಾಸಭೆಗೆ 5 ಲಕ್ಷ ರೂಗಳ ಉದಾರ ದೇಣಿಗೆ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಉಪಾಧ್ಯಕ್ಷರಾದ ಶ್ರೀಮತಿ ಪುಷ್ಪ ಅಯ್ಯಂಗಾರ್ ಮತ್ತು ಶ್ರೀಮತಿ ವೈದೇಹಿ ಅವರು 5 ಲಕ್ಷ ರೂಗಳನ್ನು ಮಹಾಸಭೆಗೆ ಉದಾರವಾಗಿ ದೇಣಿಗೆ ನೀಡಿರುತ್ತಾರೆ. ಅವರ ಕೊಡುಗೆಯನ್ನು ಕೃತಜ್ಞತಾಪೂರ್ವಕವಾಗಿ ಮಹಾಸಭಾ ಪರವಾಗಿ ಎಸ್. ಶ್ರೀಧರಮೂರ್ತಿ–ಪ್ರಧಾನ ಕಾರ್ಯದರ್ಶಿ, ವೆಂಕಟೇಶ್‌ನಾಯಕ್–ಖಜಾಂಜಿ ಮತ್ತು ಹಿರಿಯರಾದ ಹೆಚ್.ಎನ್. ಹಿರಿಯಣ್ಣಸ್ವಾಮಿ ಅವರು ಸ್ವೀಕರಿಸಿದರು. ದಾನಿಗಳಾದ ಶ್ರೀಮತಿ ಪುಷ್ಪ ಅಯ್ಯಂಗಾರ್ ಹಾಗೂ ಶ್ರೀಮತಿ ವೈದೇಹಿಯವರಿಗೆ ಭಗವಂತನು ಆಯುರಾರೋಗ್ಯ ದಯಪಾಲಿಸಲೆಂದು ಮಹಾಸಭೆಯ ಪ್ರಾರ್ಥಿಸುತ್ತದೆ.

PERIODICAL RATE

VIPRANUDI KANNADA MONTHLY.
RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on 21-10-2022 Date of Publishing 12-10-2022

ಶುಭಾಶಯಗಳು

ಡಾ|| ಉದಯ್ ಬಿ. ಗರುಡಾಚಾರ್

ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ



Dr. Uday B. Garudachar

MLA, Chickpet Assembly Constituency

/BGUdayBJP www.udaygarudachar.in

If undelivered please return to :

**VIPRANUDI**

Akhila Karnataka Brahmana Mahasabha (R.)
"Gayathri Bhavana", No. 3070, 9th Main Road
Gayathri Bhavana Road, (14th Cross) BSK 2nd Stage
BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R)
"Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070.
And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar